

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 25 ಬುಧವಾರ 2023

ಸಂಪುಟ: 44 | ಸಂಚಿಕೆ: 189 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co



ಅದ್ದೂರಿ ಜಂಬೂಸವಾರಿ

ಚಿನ್ನದ ಅಂಬಾರಿಯಲ್ಲಿ ಆಸೀನಳಾಗಿದ್ದ ನಾಡದೇವತೆ ತಾಯಿ ಚಾಮುಂಡೇಶ್ವರಿ ಉತ್ಸವಮೂರ್ತಿ ಕಣ್ತುಂಬಿಕೊಂಡ ಲಕ್ಷಾಂತರ ಮಂದಿ, ನಾಡಿನ ಕಲೆ, ಸಂಸ್ಕೃತಿ ಅನಾವರಣ, ಮೈಸೂರು ದಸರಾ–2023 ತೆರೆ



ಮಂಗಳವಾರ ನಡೆದ ಅದ್ದೂರಿ ಜಂಬೂಸವಾರಿಯನ್ನು ಲಕ್ಷಾಂತರ ಜನರು ವೀಕ್ಷಿಸಿ, ಚಾಮುಂಡೇಶ್ವರಿಗೆ ನಮಿಸಿದರು. (ಇದರ ವರದಿ ಹಾಗೂ ಮತ್ತಷ್ಟು ಚಿತ್ರಗಳು ಒಳಪುಟ)

ಮೈಸೂರು ಮಿತ್ರ ಬುಧವಾರ 25 ಅಕ್ಟೋಬರ್ 2023

ಮೆರವಣಿಗೆ ಉಪ ಸಮಿತಿ ಸದಸ್ಯರ ಅಶಿಸ್ತಿನಿಂದ ಅದ್ವಾನ



ಮೈಸೂರು, ಅ.24(ಆರ್‌ಕೆ)–ಜಂಬೂ ಸವಾರಿ ಆರಂಭವಾಗುತ್ತಿದ್ದಂತೆಯೇ ಅರಮನೆ ಮುಂಭಾಗ ಮೆರವಣಿಗೆ ಉಪ ಸಮಿತಿ ಸದಸ್ಯರೇ ಜಾನಪದ ಕಲಾ ತಂಡ ಹಾಗೂ ಸ್ತಬ್ಧಚಿತ್ರಗಳ ಸುತ್ತುವರಿದಿದ್ದರಿಂದ ಇಕ್ಕೆಲಗಳಲ್ಲಿ ಕಿಕ್ಕಿರಿದು ನೆರೆದಿದ್ದ ಜನರಿಗೆ ಕಿರಿಕಿರಿ ಉಂಟಾಗಿ, ಇಡೀ ಮೆರವಣಿಗೆ ಅದ್ವಾನವಾಯಿತು.

ಕಪ್ಪು ಜಾಕೆಟ್ ಧರಿಸಿ ಅಡ್ಡಾಡುತ್ತಿದ್ದ ಸಮಿತಿ ಸದಸ್ಯರು ಮೆರವಣಿಗೆಗೆ ಅಡ್ಡಲಾಗಿ ನಿಲ್ಲುತ್ತಿದ್ದರಿಂದ ಪಕ್ಕಕ್ಕೆ ಸರಿಯುವಂತೆ ಜನರು ಜೋರಾಗಿ ಕೂಗುತ್ತಿದ್ದರು. ಇದರಿಂದ ಗೊಂದಲ ಉಂಟಾಯಿತು. ಮೆರವಣಿಗೆ ಅಂತ್ಯವಾಗುವ ಸಮಯದಲ್ಲಂತೂ, ಗುಂಪು ಗುಂಪಾಗಿ ಓಡಾಡುತ್ತಿದ್ದರೂ ಯಾವುದೇ ಪೊಲೀಸ್ ಅಧಿಕಾರಿಯೂ ಅಲ್ಲಿಗೆ ಬಂದು ಸಮಿತಿ ಸದಸ್ಯರಿಗೆ ತಿಳಿ ಹೇಳುವ ಗೋಜಿಗೆ ಹೋಗಲಿಲ್ಲ.

ಅಲ್ಲಿ ಕೇವಲ ಹೋಂ ಗಾರ್ಡ್, ಎನ್‌ಸಿಸಿ ಕೆಡೆಟ್‌ಗಳನ್ನು ನಿಯೋಜಿಸಲಾಗಿತ್ತು. ಅವರಿಗೆ ಯಾರೂ ಕೇರ್ ಮಾಡಲಿಲ್ಲ. ಪೊಲೀಸ್ ಅಧಿಕಾರಿಗಳೆಲ್ಲರೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು ಹಾಗೂ ಗಣ್ಯರು ಕುಳಿತಿದ್ದ ಸ್ಥಳದಲ್ಲಿ ಮಾತ್ರ ಕೇಂದ್ರೀಕರಿಸಿದ್ದರಿಂದ ಜನಸಾಮಾನ್ಯರೇ ಅಧಿಕ ಸಂಖ್ಯೆಯಲ್ಲಿದ್ದ ಎನ್‌ಕ್ಲೋಷರ್ ಕಡೆ ಯಾರೂ ತಲೆ ಕೆಡಿಸಿಕೊಳ್ಳದ ಕಾರಣ ಈ ಅದ್ವಾನಕ್ಕೆ ಕಾರಣವಾಗಿತ್ತು.

ಅಲ್ಲದೇ, ಚಿನ್ನದ ಅಂಬಾರಿಯಲ್ಲಿನ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಗಣ್ಯರು ಪುಷ್ಪಾರ್ಚನೆ ಮಾಡುವ ವೇದಿಕೆ ಪಕ್ಕದಲ್ಲೇ ವ್ಯವಸ್ಥೆ ಮಾಡಿದ್ದ ಮಾಧ್ಯಮದವರ ಎನ್‌ಕ್ಲೋಷರ್ ಆಸನಗಳಲ್ಲಿ ಸಂಪೂರ್ಣವಾಗಿ ಬೇರೆಯವರೇ ಕುಳಿತುಕೊಂಡಿದ್ದರಿಂದ ವರದಿಗೆ ತೆರಳಿದ ಪತ್ರಕರ್ತರಿಗೆ ಸ್ಥಳವೇ ಇಲ್ಲದೇ ಪರದಾಡುವಂತಾಯಿತು. ಮಾಧ್ಯಮದವರಿಗಾಗಿ ಅಣಿಗೊಳಿಸಿದ್ದ ಎನ್‌ಕ್ಲೋಷರ್ ಬಳಿ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸದ ಕಾರಣ, ಪತ್ರಕರ್ತರು ಹೋಗುವ ಮೊದಲೇ ಬೆಳಗ್ಗೆ 11.30 ಗಂಟೆ ವೇಳೆಗೆ ಇತರರು ಅಲ್ಲಿ ಕುಳಿತುಕೊಂಡಿದ್ದರು. ಆ ವೇಳೆ ಗೊಂದಲ ಉಂಟಾದಾಗ ಪೊಲೀಸರು ಬಂದಾದರೂ, ಆಸನಗಳಲ್ಲಿ ಕುಳಿತಿದ್ದವರು ಬಿಟ್ಟುಕೊಡದ ಕಾರಣ ಬೇರೆ ಕಡೆಯಿಂದ ಸ್ವಲ್ಪ ಚೇರ್‌ಗಳನ್ನು ತರಿಸಿಕೊಟ್ಟರಾದರೂ, ಹಲವರಿಗೆ ಜಾಗ ಇಲ್ಲದೇ ಬೇರೆ ಕಡೆಗೆ ಹೋಗಬೇಕಾಯಿತು.

ಸಾರಿಗೆ ಸಿಬ್ಬಂದಿಯ ಎಡವಟ್ಟು ; ಪ್ರಯಾಣಿಕರ ಹಣ, ಸಮಯ ವ್ಯರ್ಥ!



ಮೈಸೂರು, ಅ.24(ಜಿಎ)–ಒಂದೆಡೆ ಜಂಬೂ ಸವಾರಿ ಯಶಸ್ವಿಯಾದರೆ, ಮತ್ತೊಂದೆಡೆ ಕೆಎಸ್‌ಆರ್‌ಟಿಸಿ ಎಡವಟ್ಟಿನಿಂದ ಮೈಸೂರಿನಿಂದ ಕೊಯಮತ್ತೂರಿಗೆ ತೆರಳ ಬೇಕಿದ್ದ ಪ್ರಯಾಣಿಕರು ಸಮಯ ಮತ್ತು ಹಣ ಎರಡು ವ್ಯರ್ಥ ಮಾಡಿಕೊಂಡು ಪರದಾಡುವ ಸ್ಥಿತಿ ನಿರ್ಮಾಣವಾಯಿತು.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದಿಂದ ಇಂದು ರಾತ್ರಿ 9.15ಕ್ಕೆ ಕೊಯಮತ್ತೂರಿಗೆ ಪ್ರಯಾಣಿಸಲು ಟಿಕೆಟ್ ಬುಕ್(ಕೆಎ–11, ಎಫ್–0500) ಮಾಡಿಕೊಂಡಿದ್ದರು. ಅದರಂತೆ ಪ್ರಯಾಣಿಕರು ಅವಧಿಗೂ ಮುನ್ನವೇ ಬಸ್ ನಿಲ್ದಾಣಕ್ಕೆ ಆಗಮಿಸಿದ್ದರು. ಆದರೆ ನಿಲ್ದಾಣದಲ್ಲಿ ಬಸ್ ಇರಲಿಲ್ಲ. ಈ ವೇಳೆ ಪ್ರಯಾಣಿಕರೊಬ್ಬರು ಕೆಎಸ್‌ಆರ್‌ಟಿಸಿ ಸಿಬ್ಬಂದಿಯನ್ನು ವಿಚಾರಿಸಿದಾಗ ದಸರಾ ಇರುವುದರಿಂದ ಇಂದು ಗ್ರಾಮಾಂತರ ಬಸ್ ನಿಲ್ದಾಣದ ಬದಲು ಸಾತಗಳ್ಳಿ ಬಸ್ ಡಿಪೋನಲ್ಲಿ ಬಸ್ ಲಭ್ಯವಿದೆ ಅಲ್ಲಿಗೆ ತೆರಳಿ ಎಂದು ಸೂಚನೆ ನೀಡಿದ್ದಾರೆ.

ನಂತರ ಪ್ರಯಾಣಿಕರು ಬೇಸರದಿಂದ ನೂರಾರು ರೂ. ನೀಡಿ ಆಟೋಗಳಲ್ಲಿ ಸಾತಗಳ್ಳಿ ಬಸ್ ಡಿಪೋಗೆ ತೆರಳಿದ್ದಾರೆ. ಆದರೆ ಅಲ್ಲಿ ಹತ್ತಿದ ಅವರು ಕೊಯ್ಯಮತ್ತೂರಿಗೆ ತೆರಳಬೇಕಿದ ಬಸ್ ನೇರವಾಗಿ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬಂದಿದೆ. ಇದರಿಂದ ಆಕ್ರೋಶಗೊಂಡ ಪ್ರಯಾಣಿಕರು ಚಾಲಕ ಹಾಗೂ ನಿರ್ವಾಹಕನ ಬಳಿ' ನೀವು ಮೊದಲೇ ತಿಳಿಸಿದ್ದರೆ, ನಾವು ಗ್ರಾಮಾಂತರ ಬಸ್ ನಿಲ್ದಾಣದಲ್ಲಿಯೇ ಕಾಯುತ್ತಿದ್ದೆವು, ಆದರೆ, ನಿಮ್ಮ ಎಡವಟ್ಟಿನಿಂದ ನಮ್ಮ ಸಮಯ ಹಣ ಎರಡು ವ್ಯರ್ಥವಾಗಿದೆ' ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಕೆಎಸ್‌ಆರ್‌ಟಿಸಿಯ ಈ ನಡೆಯನ್ನು ಖಂಡಿಸಿ ಪ್ರಯಾಣಿಕರು ಕೆಲ ಕಾಲ ಪ್ರತಿಭಟನೆಗೆ ಕುಳಿತರು. ಈ ವೇಳೆ ಬಸ್ ನಿಲ್ದಾಣದ ನಿಯಂತ್ರಣಾಧಿಕಾರಿ ಹೇಮಂತ್ ಸ್ಥಳಕ್ಕೆ ಬಂದು 'ಮತ್ತೊಮ್ಮೆ ಈ ರೀತಿ ತಪ್ಪಾಗದು' ಎಂದು ಕ್ಷಮೆಯಾಚಿಸಿದ ನಂತರ ಬಸ್ ಕೊಯಮತ್ತೂರಿಗೆ ಪ್ರಯಾಣ ಬೆಳೆಸಿತು.

ವಿದ್ಯುತ್ ದೀಪಾಲಂಕಾರ ದೀಪಗಳ ಕಣ್ಣಾಮುಚ್ಚಾಲೆ ಆಟ!



ಮೈಸೂರು,ಅ.24(ಪಿಎಂ)– ಸಯ್ಯಾಜಿರಾವ್ ರಸ್ತೆಯ ಹಲವೆಡೆ ವಿದ್ಯುತ್ ದೀಪಾಲಂಕಾರದ ದೀಪಗಳ ಕಣ್ಣಾಮುಚ್ಚಾಲೆ ಆಟದ ಹಿನ್ನೆಲೆಯಲ್ಲಿ ಜಂಬೂ ಸವಾರಿ ಮೆರವಣಿಗೆ ನೋಡಲು ಕಾತುರದಿಂದ ಕಾದವರು ಮಬ್ಬುಗತ್ತಲೆಯ ದೃಶ್ಯಾವಳಿಗಷ್ಟೇ ಸಮಾಧಾನಪಟ್ಟುಕೊಳ್ಳಬೇಕಾಯಿತು.

ಜಂಬೂ ಸವಾರಿ ಮೆರವಣಿಗೆಯಲ್ಲಿ ಅಂಬಾರಿ ಹೊತ್ತ ಅಭಿಮನ್ಯು ಗಜ ಗಾಂಭೀರ್ಯದಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿ ಹೆಜ್ಜೆ ಹಾಕುವ ವೇಳೆಗಾಗಲೇ ಸೂರ್ಯಾಸ್ತವಾಗುತ್ತಿತ್ತು. ಇದರಿಂದ ಮಬ್ಬುಗತ್ತಲೇ ಆವರಿಸಿದ ಹಿನ್ನೆಲೆಯಲ್ಲಿ ಕಲಾ ಪ್ರದರ್ಶನ, ಸ್ತಬ್ಧಚಿತ್ರ ಹಾಗೂ ಅಂಬಾರಿ ಹೊತ್ತ ಆನೆಯ ವೈಭವದ ದೃಶ್ಯವು ನಿರೀಕ್ಷಿತ ಮಟ್ಟದಲ್ಲಿ ಪ್ರೇಕ್ಷಕರ ಕಣ್ಣಿಗೆ ಕಾಣದ ಬೇಸರ ಅವರ ಮೊಗದಲ್ಲಿ ಗೋಚರಿಸುತ್ತಿತ್ತು

ಇದಕ್ಕೂ ಮುನ್ನ ಸಂಜೆ 6.12ರ ವೇಳೆಗೆ ವಿದ್ಯುತ್ ದೀಪಾಲಂಕಾರದ ದೀಪಗಳನ್ನು ಬೆಳಗಿಸಲಾಯಿತು. ಇದರಿಂದ ಈ ದೀಪಗಳ ಬೆಳಕಿನ ಪ್ರಭಾವಳಿಗೆ ಮನಸೋತ ಜನಸ್ತೋಮ ಒಮ್ಮೆಲೇ ಹರ್ಷೋದ್ಗಾರಗೈದು ಸಂಭ್ರಮ ವ್ಯಕ್ತಪಡಿಸಿತು. ಆದರೆ ಕೆಲವೇ ಸಮಯದಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿ ಈ ದೀಪದ ಬೆಳಕಿನ ಕಣ್ಣಾಮುಚ್ಚಾಲೆ ಆಟ ಶುರುವಾಯಿತು. ಇಲ್ಲಿನ ಕೆಲವೆಡೆ ಇದ್ದಕ್ಕಿದ್ದಂತೆ ದೀಪಗಳು ಆರಿದವು. ಇದರಿಂದ ನಿರಾಸೆಗೊಂಡು ಜನಸಾಗರ ಬೇಸರ ವ್ಯಕ್ತಪಡಿಸಿತು. ಕಲಾತಂಡಗಳು, ಸ್ತಬ್ಧಚಿತ್ರಗಳು ಮಬ್ಬುಗತ್ತಲೆ ಯಲ್ಲೇ ಕೇವಲ ಬೀದಿದೀಪದ ಬೆಳಕಿನಲ್ಲೇ ಸಾಗಬೇಕಾಯಿತು. ಇದರಿಂದ ಜಂಬೂ ಸವಾರಿ ಮೆರವಣಿಗೆಯ ಝಗಮಗಿಸುವಿಕೆಯ ಆ ಶ್ರೀಮಂತ ಪರಂಪರೆಯ ಚಿತ್ರಾವಳಿ ಇಲ್ಲಿದ್ದ ಜನತೆಯ ಕಣ್ಣಿಗೆ ಕಾಣಸಿಗದಾಯಿತು.



ಪೊಲೀಸ್, ಅರಣ್ಯ ಇಲಾಖೆಯ ಸಿಬ್ಬಂದಿ ಸಮನ್ವಯ ಕೊರತೆ

ಅರಮನೆ ಆವರಣದಲ್ಲೇ ರೊಚ್ಚಿಗೆದ್ದ ಮಾವುತರು, ಕಾವಾಡಿಗಳು

- ಪೊಲೀಸರ ವರ್ತನೆಗೆ ತೀವ್ರ ಆಕ್ಷೇಪ
- ಜಂಬೂಸವಾರಿಯಲ್ಲಿ ನೀವೇ ಆನೆ ಕೊಂಡೊಯ್ಯುವಂತೆ ಸವಾಲು
- ಅಂಬಾರಿ ಕಟ್ಟಿ ಸಾಮರ್ಥ್ಯ ತೋರಿಸಿ ಎಂದ ಮಾವುತರು
- ಇದೇ ಮೊದಲ ಬಾರಿಗೆ ನಿಶಾನೆ, ನೌಫತ್, ಸಾಲಾನೆ ಇಲ್ಲದೆ ಆರಂಭವಾದ ಮೆರವಣಿಗೆ
- ನೆರೆದಿದ್ದ ಅಧಿಕಾರಿಗಳು ಕಂಗಾಲು; ಮನವೊಲಿಸುವ ಸಾಹಸ

ಮೈಸೂರು,ಅ.24(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಗಜಪಡೆಯದ್ದೇ ಪ್ರಮುಖ ಪಾತ್ರವಿದ್ದರೂ, ಅಂತಿಮ ಕ್ಷಣದಲ್ಲಿ ಪೊಲೀಸ್ ಸಿಬ್ಬಂದಿ ಮಾಡಿದ ಯಡವಟ್ಟಿನಿಂದ ಗಜಪಡೆಯ ಮಾವುತರು, ಕಾವಾಡಿಗಳು ಕೆರಳಿ ಕೆಂಡವಾದ ಘಟನೆ ನಡೆದಿದ್ದು, ಇದರಿಂದ ಅರಮನೆ ಆವರಣದಲ್ಲಿ ಕೆಲಕಾಲ ಅಧಿಕಾರಿಗಳು ಕಂಗಾಲಾಗಿದ್ದರು.



ವಿಜಯದಶಮಿ ಅಂಗವಾಗಿ ಅರಮನೆ ಆವರಣದಲ್ಲಿರುವ ಭುವನೇಶ್ವರಿ ದೇವಾಲಯದ ಆವರಣದಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಜಯಯಾತ್ರೆಗೆ ಬಂದು ಬನ್ನಿ ಪೂಜೆ ನೆರವೇರಿಸುತ್ತಿದ್ದಾಗ ದೇವಾಲಯದ ಮುಂದೆ ಪಟ್ಟದ ಆನೆ ಧನಂಜಯ, ಪಟ್ಟದ ನಿಶಾನೆ ಆನೆ ಭೀಮ, ಅರಮನೆ ಆನೆಗಳಾದ ಚಂಚಲ, ಪ್ರೀತಿ, ಪಟ್ಟದ ಹಸು, ಪಟ್ಟದ ಒಂಟೆಯನ್ನು ಸಾಲಾಗಿ ನಿಲ್ಲಿಸಲಾಗಿತ್ತು. ಈ ವೇಳೆ ಅರಮನೆ ಪ್ರವೇಶಿಸಲು ವಾಹನದ ಪಾಸ್ ಹೊಂದಿದ್ದ ಡಿಸಿಎಫ್‌ವೊಬ್ಬರ ಸ್ಕಾರ್ಪಿಯೋ ವಾಹನ ಆನೆ ಕ್ಯಾಂಪ್‌ನತ್ತ ಬಂದಾಗ ಅಲ್ಲಿ ಭದ್ರತೆಗೆಂದು ನಿಯೋಜಿಸಿದ್ದ ಮೂವರು ಪೊಲೀಸ್ ಸಿಬ್ಬಂದಿ ಡಿಸಿಎಫ್ ವಾಹನವನ್ನು ತಡೆದಿದ್ದಾರೆ. ಚಾಲಕ ಪಾಸ್ ತೋರಿಸಿದರೂ ಆ ಪೊಲೀಸ್ ಸಿಬ್ಬಂದಿ ಆ ವಾಹನ ಮುಂದೆ ಹೋಗದಂತೆ ಬ್ಯಾರಿಕೇಡ್ ಅಡ್ಡ ಹಾಕಿದ್ದಾರೆ.

ವಾಹನದಲ್ಲಿ ಡಿಸಿಎಫ್ ಇರುವುದನ್ನು ಗಮನಿಸಿದ ಮಾವುತರು ಪೊಲೀಸರ ವರ್ತನೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪಾಸ್ ಇದ್ದರೂ ಯಾಕೆ ವಾಹನ ತಡೆದಿದ್ದೀರಿ. ಪೊಲೀಸ್ ಇಲಾಖೆಯ ಹಲವು ವಾಹನಗಳು ಅರಮನೆಗೆ ಬಂದಿವೆ. ಅರಣ್ಯ ಇಲಾಖೆಯ ಅಧಿಕಾರಿಗಳ ವಾಹನ ಬಿಡಲು ನಿರಾಕರಿಸುತ್ತೀರಿ ಎಂದು ಕಿಡಿಕಾರಿದ್ದಾರೆ. ಈ ವೇಳೆ ಮಾತಿನ ಚಕಮಕಿ ಬೆಳೆದಿದೆ. ಅಂತಿಮವಾಗಿ ಆನೆಗಳನ್ನು ನೀವೇ ಕರೆದುಕೊಂಡು ಹೋಗಿ. ಅಂಬಾರಿ ಕಟ್ಟಿ ತೋರಿಸಿ ಎಂದು ಸವಾಲು ಹಾಕಿದ್ದಾರೆ. ಈ ವೇಳೆ ಆನೆಯೊಂದರ ಮಾವುತ ಅರಣ್ಯಾಧಿಕಾರಿಗಳ ವಾಹನ ತಡೆದ ಪೊಲೀಸ್ ಸಿಬ್ಬಂದಿಯತ್ತ ಆನೆ ಕೊಂಡೊಯ್ದು ಅಂಬಾರಿ ಕಟ್ಟಿ ಬನ್ನಿ ಎಂದು ಪ್ರಶ್ನಿಸಿದ್ದಾರೆ. ಈ ವೇಳೆ ಇನ್ನಿತರ ಮಾವುತರನ್ನು ಸಮಾಧಾನ ಮಾಡಿ ಕರೆದೊಯ್ದರು.

ಮಾವುತರ ಕೋಪಕ್ಕೆ ಅಧಿಕಾರಿಗಳು ತಬ್ಬಿಬ್ಬು: ಪೊಲೀಸ್ ಸಿಬ್ಬಂದಿಯ ವರ್ತನೆಯಿಂದ ಗಜಪಡೆಯ ಮಾವುತರು, ಕಾವಾಡಿಗಳು ಸಿಟ್ಟಿಗೆದ್ದಿದ್ದನ್ನು ಕಂಡು ಅಧಿಕಾರಿಗಳು ತಬ್ಬಿಬ್ಬಾದರು. ಮಾವುತರ ಕೋಪ ತಣಿಸಲು ಸಿಎಫ್ ಡಾ.ಮಾಲತಿಪ್ರಿಯ, ಡಿಸಿಎಫ್‌ಗಳಾದ ಸೌರಭ್‌ಕುಮಾರ್, ಬಸವರಾಜು ಹಾಗೂ ಇನ್ನಿತರರು ಸಮಾದಾನ ಮಾಡಿದರೂ ಮಾವುತರ ತಂಡ ಜಂಬೂ ಸವಾರಿಗೆ ಪೊಲೀಸರೇ ಆನೆಗಳನ್ನು ಕೊಂಡೊಯ್ಯಲಿ ಬಿಡಿ ಎಂದು ದೂರ ಸರಿಯುತ್ತಿದ್ದರು. ಅಲ್ಲದೆ, ಈ ಬಾರಿ ಅರಮನೆಗೆ ಆನೆ ಬಂದ ದಿನದಿಂದಲೂ ಮಾವುತ, ಕಾವಾಡಿಗಳೊಂದಿಗೆ ಪೊಲೀಸರು ಕಿರಿಕಿರಿ ಮಾಡುತ್ತಲೇ ಇದ್ದಾರೆ. ಪ್ರತಿವರ್ಷವೂ ನಾವು ಇವರಿಂದ ಮಾತು ಕೇಳುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿರಿಯ ಅಧಿಕಾರಿಗಳು ದೌಡು: ಮಾವುತರು, ಕಾವಾಡಿಗಳು ಪೊಲೀಸ್ ಸಿಬ್ಬಂದಿಯ ವರ್ತನೆ ಖಂಡಿಸಿ, ಜಂಬೂಸವಾರಿಯಿಂದ ದೂರವುಳಿಯುವ ನಿರ್ಧಾರ ಮಾಡಿರುವ ಬಗ್ಗೆ ತಲೆ ಕೆಡಿಸಿಕೊಂಡ ಇಬ್ಬರು ಹಿರಿಯ ಅಧಿಕಾರಿಗಳು ಆನೆ ಕ್ಯಾಂಪ್ ಬಳಿ ತೆರಳಿ, ಘಟನೆ ಬಗ್ಗೆ ವಿಷಾದ ವ್ಯಕ್ತಪಡಿಸಿ, ಹೊರಗಿನಿಂದ ಬಂದ ಪೊಲೀಸ್ ಸಿಬ್ಬಂದಿಯಿಂದ ಗೊಂದಲ ಉಂಟಾಗಿದೆ. ಇದನ್ನು ಮುಂದುವರೆಸದೇ ಜಂಬೂಸವಾರಿ ಯಶಸ್ಸಿಗೆ ಸಹಕಾರ ನೀಡುವಂತೆ ಮನವಿ ಮಾಡಿದರು. ಆದರೂ ಮಾವುತರ ಕೋಪ ಶಮನವಾಗಲಿಲ್ಲ ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಸಹದ್ಯೋಗಿಗಳ ತಂಡ ಅರಮನೆಗೆ ಆಗಮಿಸಿದ್ದರೂ, ಮಾವುತರು, ಕಾವಾಡಿಗಳ ಮನವೊಲಿಸುವ ಪ್ರಕ್ರಿಯೆ ನಡೆಯುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಎಲ್ಲಾ ಮಾವುತರು ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದರು.

ನಿಶಾನೆ, ನೌಫತ್, ಸಾಲಾನೆಯಿಲ್ಲದೆ ಆರಂಭವಾದ ಮೆರವಣಿಗೆ

ಮೈಸೂರು,ಅ.24(ಎಂಟಿವೈ)– ಜಂಬೂಸವಾರಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಅರಮನೆ ಆವರಣದಲ್ಲಿ ನಿಶಾನೆ, ನೌಫತ್ ಹಾಗೂ ಸಾಲಾನೆಯಿಲ್ಲದೆ ಮೆರವಣಿಗೆಯನ್ನು ಆರಂಭಿಸಲಾಯಿತು.

ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಂದಿಧ್ವಜಕ್ಕೆ ಪೂಜೆ ಸಲ್ಲಿಸಿ, ಜಂಬೂಸವಾರಿಗೆ ಚಾಲನೆ ನೀಡಿ ಅರಮನೆ ಆವರಣ ಪ್ರವೇಶಿಸಿ, 20 ನಿಮಿಷವಾದರೂ ಮೆರವಣಿಗೆ ಆರಂಭವಾಗಲೇ ಇಲ್ಲ. ಪ್ರೋಟೋಕಾಲ್‌ನಂತೆ ನಿಶಾನೆ ಆನೆ ಗಣ್ಯರಿಗೆ ಸೊಂಡಿಲೆತ್ತಿ ಸಾಗಿದ ಬಳಿಕ ಜಾನಪದ ಕಲಾತಂಡ, ಸ್ತಬ್ಧಚಿತ್ರ ಸಾಗುತ್ತಿದ್ದವು. ಆದರೆ, ಇಂದು ಆನೆಗಳು ಬರದೇ ಇದ್ದ ಕಾರಣ ವಿವಿಧ ಜಾನಪದ ಕಲಾತಂಡಗಳಿಂದ ಮೆರವಣಿಗೆ ಆರಂಭಿಸಲಾಯಿತು. ಹತ್ತಾರು ತಂಡ ಸಾಗಿದ ಬಳಿಕ, ನಿಶಾನೆ ಆನೆ ಅರ್ಜುನನ್ನು ಅರಮನೆ ಮುಂಭಾಗಕ್ಕೆ ಕರೆತರಲಾಯಿತು. ಆಗಿರುವ ಪ್ರಮಾದ ಗಣ್ಯರ ಗಮನಕ್ಕೆ ಬರಬಹುದೆಂಬ ಮುಂದಾಲೋಚನೆಯಿಂದ ಗಣ್ಯರು ಕುಳಿತಿದ್ದ ಸ್ಥಳದ ಬಳಿ ಬರುವ ಮುನ್ನವೇ ಅರಮನೆ ಮುಂದೆ ಕುಳಿತಿದ್ದ ಜನರತ್ತ ಸೊಂಡಿಲು ಎತ್ತಿಸಿ, ಅರ್ಜುನನ್ನು ವಾಪಸ್ಸು ಕರೆದೊಯ್ಯಲಾಯಿತು. ಬಳಿಕ ಸಾಲಾನೆ ಹಾಗೂ ನೌಫತ್ ಆನೆಗಳನ್ನು ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿಯಿಂದಲೇ ಹೊರಗೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಇದರಿಂದ ಅರಮನೆ ಮುಂಭಾಗದಲ್ಲಿ ನೆರೆದಿದ್ದ ಸಾವಿರಾರು ಮಂದಿಗೆ ಆನೆ ನೋಡುವ ಭಾಗ್ಯ ಸಿಗಲೇ ಇಲ್ಲ.

ಬೆಂಬಿಡದ ಪಾಸ್ ಗೊಂದಲ! ಆನೆ ಲದ್ದಿ ತುಳಿಯಲು ಮುಗಿ ಬಿದ್ದ ಮಹಿಳೆಯರು!! 8 ಗಂಟೆಗೆ ಸೀಟ್ ಹಿಡಿದಿದ್ದರು!!!



ಮೈಸೂರು, ಅ.24(ಬಿಎಲ್‌ಯು)– ಪ್ರತಿ ವರ್ಷವೂ ದಸರಾ ಜಂಬೂ ಸವಾರಿ ಮೆರವಣಿಗೆಯ ಸಂದರ್ಭದಲ್ಲಿ ಪಾಸ್ ಗೊಂದಲ ಇದ್ದೆ ಇರುತ್ತದೆ. ಆದರೆ ಈ ವರ್ಷ ಪಾಸ್ ಗೊಂದಲ ಇರುವುದೇ ಇಲ್ಲ ಎಂದು ಜಿಲ್ಲಾಡಳಿತ ಹೇಳಿತ್ತು. ಅಧಿಕಾರಿಗಳು ಏನೇ ಭರವಸೆ ಕೊಟ್ಟರೂ ಈ ಬಾರಿ ಕೂಡ ಪಾಸ್ ಗೊಂದಲ ಹೆಚ್ಚಾಗಿಯೇ ಕಾಡಿತು. ಜಂಬೂ ಸವಾರಿ ಮೆರವಣಿಗೆ ಆರಂಭವಾಗುವ ಎರಡು ಗಂಟೆ ಮುಂಚಿತವಾಗಿಯೇ ಅರಮನೆ ಆವರಣದಲ್ಲಿ ಸಹಸ್ರಾರು ಜನರು ಕಿಕ್ಕಿರಿದು ತುಂಬಿದ್ದರು.

ಪಾಸ್ ಇಲ್ಲದವರು ಹೆಚ್ಚಾಗಿ ಸೇರಿದ್ದ ಕಾರಣ ಪಾಸ್ ಇದ್ದವರಿಗೆ ಕೂರಲು ಆಸನಗಳೇ ಇಲ್ಲದಂತಾಗಿತ್ತು. ಹಣ ಕೊಟ್ಟು ಟಿಕೆಟ್ ಖರೀದಿ ಮಾಡಿದವರಿಗೂ ಆಸನವಿಲ್ಲದೆ ಪರದಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಆತಂಕ: ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅರಮನೆಯಲ್ಲಿ ವಿಜಯಯಾತ್ರೆ ಮೆರವಣಿಗೆ ನಡೆಸುವ ವೇಳೆ ಚಿನ್ನದ ಪಲ್ಲಕ್ಕಿ ಹೊತ್ತಿದ್ದ ಎತ್ತುಗಳು ಕಿರಿಕ್ ಮಾಡಿದವು. ನಿಯಂತ್ರಣಕ್ಕೆ ಸಿಗದೆ ಅತ್ತಿತ್ತ ಅಡ್ಡಾಡಿದ್ದರಿಂದ ನೆರೆದಿದ್ದವರಲ್ಲಿ ಆತಂಕ ಉಂಟಾಯಿತು. ವಿಜಯಯಾತ್ರೆ ಮೆರವಣಿಗೆ ಆರಂಭದಿಂದ ಕೊನೆ ತನಕ ಎತ್ತುಗಳನ್ನು ನಿಯಂತ್ರಿಸಲು ಅರಮನೆ ಸಿಬ್ಬಂದಿ ಹೆಣಗಾಡಿದರು.

ಲದ್ದಿಗೆ ಮುಗಿ ಬಿದ್ದರು: ಆನೆ ಲದ್ದಿ ಮೇಲೆ ಕಾಲಿಡಲು ಮಹಿಳೆಯರು ಮುಗಿ ಬಿದ್ದ ಘಟನೆ ಯದುವೀರ್ ಅವರ ವಿಜಯಯಾತ್ರೆ ಮೆರವಣಿಗೆಯ ಸಂದರ್ಭದಲ್ಲಿ ನಡೆಯಿತು. ವಿಜಯಯಾತ್ರೆ ಮೆರವಣಿಯಲ್ಲಿ ಭೀಮ, ಧನಂಜಯ, ಪ್ರೀತಿ ಮತ್ತು ಚಂಚಲ ಸಾಗಿತ್ತು. ಈ ವೇಳೆ ಕೆಲ ಆನೆಗಳು ಲದ್ದಿ ಹಾಕಿದವು.

ಆನೆಗಳ ಲದ್ದಿಯಲ್ಲಿ ಔಷಧಿ ಗುಣವಿದ್ದು, ಅದರ ಮೇಲೆ ಕೆಲ ಸಮಯ ನಿಂತರೆ ಕಾಲು ನೋವು ದೂರವಾಗುತ್ತದೆ ಎಂದು ಮಹಿಳೆಯರು ಲದ್ದಿ ಮೇಲೆ ನಿಲ್ಲಲು ಮುಗಿ ಬಿದ್ದರು.

ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆ ವೀಕ್ಷಣೆಗೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮೇಲೆ ನಿಲ್ಲುತ್ತಿದ್ದರು. ಆದರೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಶಿಥಿಲಾವಸ್ಥೆಯಲ್ಲಿರುವ ಕಾರಣ ಅನಾಹುತವಾಗುವ ಆತಂಕದಿಂದ ಅದರತ್ತ ಹೋಗಲು ಪೊಲೀಸರು ಯಾರಿಗೂ ಬಿಡಲಿಲ್ಲ.

ದೇವರಾಜ ಮಾರುಕಟ್ಟೆ ಕಟ್ಟಡದ ಮೇಲೂ ಹತ್ತಲು ಯಾರಿಗೂ ಬಿಟ್ಟಿರಲಿಲ್ಲ. ಆದರೆ ಜಂಬೂ ಸವಾರಿ ಮೆರವಣಿಗೆ ಆರಂಭವಾದಾಗ ಪೊಲೀಸರ ಕಣ್ತಪ್ಪಿಸಿ ಕೆಲವರು ಹತ್ತಿ ನಿಂತರು.

ಜಂಬೂ ಸವಾರಿ ಮೆರವಣಿಗೆ ವೀಕ್ಷಣೆ ಮಾಡಲು ಕೆ.ಆರ್.ವೃತ್ತದಲ್ಲಿ ಕೆಲವರು ಬೆಳಿಗ್ಗೆ 8 ಗಂಟೆಯಿಂದಲೇ ಕಾದು ಕುಳಿತಿದ್ದರು. ವಿಳಂಬವಾಗಿ ಬಂದರೆ ಮುಂದೆ ಕುಳಿತು ಮೆರವಣಿಗೆ ನೋಡಲು ಸಾಧ್ಯವಿಲ್ಲವೆಂದು ಮೆರವಣಿಗೆ ಆರಂಭವಾಗುವ 7 ಗಂಟೆ ಮುಂಚಿತವಾಗಿಯೇ ಕಾದು ಕುಳಿತಿದ್ದರು. ಜಂಬೂ ಸವಾರಿ ಮೆರವಣಿಗೆ ಆರಂಭವಾದ ಮೇಲೆ ಜನ ಜಂಗುಳಿ ಹೆಚ್ಚಾಗಿ ಬ್ಯಾರಿಕೇಡ್ ತಳ್ಳಿ ಮುಂದೆ ಬರಲು ಕೆಲವರು ಪ್ರಯತ್ನ ಮಾಡಿದರು. ಜನರನ್ನು ನಿಯಂತ್ರಿಸಿ ಬ್ಯಾರಿಕೇಡ್ ಅನ್ನು ಗಟ್ಟಿಯಾಗಿ ನಿಲ್ಲಿಸಲು ಪೊಲೀಸರು ಹರಸಾಹಸಪಟ್ಟರು.

6 ಬಾರಿ ದಸರಾ ಉದ್ಘಾಟಿಸಿ ದಾಖಲೆ ಬರೆದ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು, ಅ.24 (ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಯನ್ನು 6 ಬಾರಿ ಉದ್ಘಾಟನೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ ಬರೆದಿದ್ದಾರೆ.


ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಐದು ವರ್ಷ ಪೂರ್ಣಗೊಳಿಸಿದ್ದರು. ಆ ವೇಳೆ ಸತತ ಐದು ಬಾರಿ ಜಂಬೂ ಸವಾರಿ ಮೆರವಣಿಗೆಗೆ ಚಾಲನೆ ನೀಡಿದ್ದರು. ಈಗ ಮತ್ತೆ ಮುಖ್ಯಮಂತ್ರಿ ಯಾಗಿರುವ ಸಿದ್ದರಾಮಯ್ಯ ಮತ್ತೆ ದಸರಾ ಜಂಬೂ ಸವಾರಿ ಮೆರವಣಿಗೆ ಉದ್ಘಾಟಿಸಿದ್ದಾರೆ. ಈ ಮೂಲಕ 6 ಬಾರಿ ದಸರಾ ಜಂಬೂ ಸವಾರಿ ಮೆರವಣಿಗೆಗೆ ಚಾಲನೆ ನೀಡುವ ಮೂಲಕ ಸಿದ್ದರಾಮಯ್ಯ ದಾಖಲೆ ಬರೆದಿದ್ದಾರೆ. ಸಿದ್ದರಾಮಯ್ಯ ಆರು ಬಾರಿ ದಸರಾ ಉದ್ಘಾಟನೆ ಮಾಡುತ್ತಿರುವುದು ಒಂದು ವಿಶೇಷವಾದರೆ, ಮೈಸೂರಿನವರೇ ಮುಖ್ಯಮಂತ್ರಿಯಾಗಿ ಹೆಚ್ಚು ಬಾರಿ ಉದ್ಘಾಟನೆ ಮಾಡಿರುವುದು ಮತ್ತೊಂದು ವಿಶೇಷವಾಗಿದೆ.

ಶೌಚಾಲಯಕ್ಕೂ ಲಗ್ಗೆ ಇಟ್ಟರು!



ಮೈಸೂರು,ಅ.24(ಪಿಎಂ)– ಜಂಬೂ ಸವಾರಿ ಮೆರವಣಿಗೆಯ ವೈಭವ ಕಣ್ತುಂಬಿಕೊಳ್ಳಲು ಮಾರ್ಗದುದ್ದಕ್ಕೂ ಇರುವ ಕಟ್ಟಡದ ಮೇಲೇರುವುದು ಸಾಮಾನ್ಯ. ಆದರೆ ಇಲ್ಲಿ ಕೆಲವರು ಶೌಚಾಲಯಕ್ಕೂ ಲಗ್ಗೆ ಇಟ್ಟಿದ್ದರು. ಸಯ್ಯಾಜಿರಾವ್ ರಸ್ತೆಯಲ್ಲಿ ಮೈಸೂರು ವೈದ್ಯಕೀಯ ಕಾಲೇಜು ಆವರಣಕ್ಕೆ ಹೊಂದಿಕೊಂಡಂತಿರುವ ಸಾರ್ವಜನಿಕ ಶೌಚಾಲಯದ ಮೇಲೂ ಹಲವರು ಆಸಿನರಾಗಿ ಜಂಬೂ ಸವಾರಿ ವೀಕ್ಷಿಸಿದರು. ಶೌಚಾಲಯದ ಮೇಲಿನ ಶಿಟ್‌ನಲ್ಲಿ ಹಲವು ಯುವಕರು ಕುಳಿತು ಮೆರವಣಿಗೆಯ ಸಂಭ್ರಮದ ಕ್ಷಣಗಳಿಗೆ ಸಾಕ್ಷಿಯಾದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.10.2023 ಬುಧವಾರ, ಮಳೆ ನಕ್ಷತ್ರ: ಸ್ವಾತಿ, 25.10.2023 ರಿಂದ 06.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವ, ಬೆಳಗ್ಗೆ 10ಕ್ಕೆ ಶಾಂತಿ ಹೋಮ, ನವರಾತ್ರಿ ಮಂಗಳಾಚರಣೆ, ಸ್ಥಳ: ನಾದ ಮಂಟಪ, ಆಶ್ರಮದ ಆವರಣ, ಊಟಿ ರಸ್ತೆ.

■ **ಆರ್ಯ ಆಸ್ಪತ್ರೆ :** ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ನವಜಾತ ಶಿಶು ವಿಭಾಗ ಉದ್ಘಾಟನೆ : ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಸ್ತ್ರ ಚಿಕಿತ್ಸಾ ಘಟಕ ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ತೀವ್ರ ನಿಗಾ ಘಟಕ ಉದ್ಘಾಟನೆ : ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಪ್ರಸೂತಿ ವಿಭಾಗ ಉದ್ಘಾಟನೆ : ಶ್ರೀಮತಿ ತ್ರಿಷಿಕಾ ಕುಮಾರಿ ದೇವಿ, ಅಧ್ಯಕ್ಷತೆ : ಮೇಯರ್ ಶಿವಕುಮಾರ್, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕರಾದ ಕೆ. ಹರೀಶ್‌ಗೌಡ, ಡಾ. ಡಿ. ತಿಮ್ಮಯ್ಯ, ಟಿ.ಎಸ್. ಶ್ರೀವತ್ಸ, ತನ್ವೀರ್ ಸೇಠ್, ಮರಿತಿಬ್ಬೇಗೌಡ, ಜಿ.ಟಿ. ದೇವೇಗೌಡ, ಸಿ. ಅನಿಲ್‌ಕುಮಾರ್, ಮಾಜಿ ಶಾಸಕರಾದ ಸಾ.ರಾ. ಮಹೇಶ್, ಡಾ. ಯತೀಂದ್ರ ಸಿದ್ದರಾಮಯ್ಯ, ಎಸ್.ಎ.ರಾಮದಾಸ್, ವಾಸು, ಎಲ್. ನಾಗೇಂದ್ರ, ಎಸ್. ಕೃಷ್ಣಪ್ಪ, ಎಂ.ಕೆ. ಸೋಮಶೇಖರ್, ಪಾಲಿಕೆ ಸದಸ್ಯೆ ಶ್ರೀಮತಿ ಸೌಮ್ಯ ಉಮೇಶ್, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಜಿಲ್ಲಾ ವೈದ್ಯಾಧಿಕಾರಿ ಡಾ. ಕುಮಾರಸ್ವಾಮಿ, ಸ್ಥಳ: ನ್ಯೂ ಕಾಂತರಾಜ ಅರಸ್ ರಸ್ತೆ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ

■ **ಶ್ರೀ ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಏಕಾದಶಿ, ಸಂಜೆ ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ–2023, ಬೆಳಗ್ಗೆ 9ಕ್ಕೆ ಅಮ್ಮನವರಿಗೆ ಶತಕಲಶಾಭಿಷೇಕ, ಪುಷ್ಪಲಂಕಾರ, ಸಪ್ತಶತಿ ಪಾರಾಯಣ, ಸುಮಂಗಲಿ ಕುಂಕುಮಾರ್ಚನೆ, ಸ್ಥಳ: ದೇವಸ್ಥಾನದ ಆವರಣ, ದೇವಸ್ಥಾನದ ರಸ್ತೆ, ವಿವಿ ಮೊಹಲ್ಲಾ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ: ಡಿ. ಶ್ರೀಹರಿ, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾ–ಪ್ರಾಯೋಜಿತ ಕಾರ್ಯಕ್ರಮ, 7.15 ಭಾವಗೀತೆಗಳು–ರಾಜು ಅನಂತಸ್ವಾಮಿ, 9.00 ವೃತ್ತಿ ಮಾರ್ಗದರ್ಶನ–ಶಿಕ್ಷಣ ಮತ್ತು ಶೈಕ್ಷಣಿಕ ಮನೋ ವಿಜ್ಞಾನ ಕ್ಷೇತ್ರದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮಂಡ್ಯದ ಪಾಂಡುರಂಗ ಎಚ್.ಆರ್. ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್, 9.15 ವೃತ್ತಿ ಮಾರ್ಗದರ್ಶನ–ಮನೋ ವೈದ್ಯಕೀಯ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಬಿ.ಎನ್. ರವೀಶ್ ಅವರೊಂದಿಗೆ ಮಾತುಕತೆ, 10.00 ಪಂಡಿತ್ ಭೀಮ್‌ಸೇಮ್ ಜೋಶಿ–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 1.20 ಭಾವಗೀತೆಗಳು–ರಮಾ ರಾಮಕೃಷ್ಣ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಹೈದರಾಬಾದ್ ಸಹೋದರರು–ಯುಗಳ ಗಾಯನ, 4.00 ಮಹಿಳಾರಂಗ–ಕಲಿಕೆ ನ್ಯೂನತೆ ಇರುವ ಮಕ್ಕಳ ಪೋಷಕರಿಗೆ ತರಬೇತಿ ನೀಡುತ್ತಿರುವ ರೂಪಾ ರಾವ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ– ಕೆ.ಬಿ. ಮೀನಾ, 4.45 ಹಿಂದಿ ಪಾಠ – ಕಿಶೋರ್ ಎಂ. ಕಾಕಡೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ –ಕಿಸಾನ್ ವಾಣಿ–ಸಾವಯವ ವಿಧಾನಗಳ ಮೂಲಕ ಕೀಟ ನಿರ್ವಹಣೆ ಕುರಿತು ಡಾ. ಜಿ.ಕೆ. ರಾಮೇಗೌಡ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್.ಕೇಶವಮೂರ್ತಿ, 9.30 ಪಂಡಿತ್ ರಾಮ್‌ಬಾವು ಬಿಜಾಪುರೇ– ಹಾರ್ಮೋನಿಯಂ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಬುಧವಾರ 25 ಅಕ್ಟೋಬರ್ 2023

ಅದ್ಧೂರಿ ಜಂಬೂಸವಾರಿ



ಮೈಸೂರಿನ ಅರಮನೆ ಆವರಣದಲ್ಲಿ ಮಂಗಳವಾರ ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಂಬಾರಿಯಲ್ಲಿದ್ದ ಚಾಮುಂಡೇಶ್ವರಿ ತಾಯಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಮೇಯರ್ ಶಿವಕುಮಾರ್, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮೈಸೂರು ಪೊಲೀಸ್ ಆಯುಕ್ತ ಬಿ. ರಮೇಶ್ ಈ ವೇಳೆ ಉಪಸ್ಥಿತರಿದ್ದರು.

ಮೈಸೂರು, ಅ.24(ಆರ್‌ಕೆ)–ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ, ವೈಭವದ ಜಂಬೂಸವಾರಿ ಮೆರವಣಿಗೆಯು ನಿರ್ವಿಘ್ನವಾಗಿ, ವಿಜೃಂಭಣೆಯಿಂದ ನೆರವೇರಿತು.

ನವರಾತ್ರಿ ಉತ್ಸವದ ಐತಿಹಾಸಿಕ ವಿಜಯದಶಮಿ ಮೆರವಣಿಗೆಯನ್ನು ಲಕ್ಷಾಂತರ ಮಂದಿ ಕಣ್ತುಂಬಿಕೊಂಡು ಪುನೀತರಾದರು. ಅರಮನೆ ಬಲರಾಮ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಧ್ಯಾಹ್ನ 1.50 ಗಂಟೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಜಂಬೂಸವಾರಿ ಮೆರವಣಿಗೆಗೆ ವಿಧ್ಯುಕ್ತ ಚಾಲನೆ ನೀಡಿದರು. ಮೈಸೂರಿನ ಶ್ರೀ ಗೌರಿಶಂಕರ ನಂದಿ ಧ್ವಜ ಸಂಘದ ಮಹದೇವಪ್ಪ ನೇತೃತ್ವದಲ್ಲಿ ಇದೇ ಮೊದಲ ಬಾರಿ 400 ಕಲಾವಿದರು 108 ನಂದಿ ಧ್ವಜಗಳ ಪ್ರದರ್ಶನ ನೀಡಿ ನೆರೆದಿದ್ದವರ ಗಮನ ಸೆಳೆದರು. ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಮೇಯರ್ ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು, ಕಲಾ ಪ್ರದರ್ಶನ ವೀಕ್ಷಿಸಿದರು.

ನಂತರ ಸಂಜೆ 5.09 ಗಂಟೆಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಹಾಗೂ ಮೈಸೂರು ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಪುಷ್ಪಾರ್ಚನೆ ಮಾಡಿದರು.

ಎಡ ಬದಿ ವರಲಕ್ಷ್ಮಿ, ಬಲಬದಿ ವಿಜಯ ಆನೆಗಳೊಂದಿಗೆ 750 ಕೆ.ಜಿ. ತೂಕದ ಚಿನ್ನದ ಅಂಬಾರಿ ಹೊತ್ತ ಅಲಂಕೃತ ಅಭಿಮನ್ಯು, ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡುತ್ತಿದ್ದಂತೆಯೇ ಸೊಂಡಿಲು ಎತ್ತಿ ನಮಸ್ಕರಿಸಿತು. ಆ ವೇಳೆ ರಾಷ್ಟ್ರಗೀತೆ ಮೊಳಗುತ್ತಿದ್ದಂತೆ, ಮತ್ತೊಂದೆಡೆ 21 ಸುತ್ತು ಕುಶಾಲತೋಪು ಸಿಡಿಸಿ ಗೌರವ ವಂದನೆ ಸಲ್ಲಿಸಲಾಯಿತು.

ಅರಮನೆ ಆವರಣದಲ್ಲಿ ಅಭಿಮನ್ಯು ಹೊತ್ತು ತಂದ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ತಾಯಿ ಶ್ರೀ ಚಾಮುಂಡೇಶ್ವರಿಯ ದರ್ಶನ ಮಾಡಿದ ಸಾವಿರಾರು ಮಂದಿ ಭಕ್ತಿ ಪರವಶರಾದರು. ಅದಕ್ಕೂ ಮುಂಚೆ ಮಧ್ಯಾಹ್ನ 1.35 ಗಂಟೆಗೆ ಕೆಎಸ್‌ಆರ್‌ಟಿಸಿ ಎರಡು ಐರಾವತ ಬಸ್ಸುಗಳಲ್ಲಿ ಅರಮನೆ ಆವರಣಕ್ಕೆ ಬಂದ ಸಿಎಂ, ಡಿಸಿಎಂ ಮತ್ತು ಸಚಿವ ಸಂಪುಟದ ಸದಸ್ಯರು, ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿದ ಬಳಿಕ ತೆರೆದ ವಾಹನದಲ್ಲಿ ಅರಮನೆ ಮುಂಭಾಗಕ್ಕೆ ಬಂದ ಸಿದ್ದರಾಮಯ್ಯ ಜನರತ್ತ ಕೈಬೀಸುತ್ತಿದ್ದಂತೆಯೇ ಹರ್ಷೋದ್ಗಾರ ಮೊಳಗಿತು.

49 ಸ್ತಬ್ಧಚಿತ್ರಗಳು: ಸುಸೂತ್ರವಾಗಿ ನೆರವೇರಿದ ಮೆರವಣಿಗೆಯಲ್ಲಿ ನಾಡಿನ ಕಲೆ, ಸಂಸ್ಕೃತಿ, ಪರಂಪರೆ ಬಿಂಬಿಸುವ 75 ಜಾನಪದ ಕಲಾ ತಂಡಗಳು ಹಾಗೂ ಸರ್ಕಾರದ ಗ್ಯಾರಂಟಿ ಯೋಜನೆಗಳು, ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಿತ್ತರಿಸುವ 49 ಸ್ತಬ್ಧಚಿತ್ರಗಳು ಸಾಗಿದವು.

ವೀರಗಾಸೆ ಕಲಾವಿದರ ವೀರಭದ್ರ ಕುಣಿತ, ಸಿ.ಹೆಚ್.ಶಿವಕುಮಾರ್ ಹಾಗೂ ತಂಡದ ಕೊಂಬು, ಕಹಳೆ, ಡೊಳ್ಳು ಕುಣಿತ, ಹಕ್ಕಿಪಿಕ್ಕಿ ನೃತ್ಯ, ಪೋಟಿ ವೇಶ, ಝಾಂಗ್ ಪಥಕ್, ಕಂಸಾಳೆ, ಸೋಮನ ಕುಣಿತ, ನವಿಲು ನೃತ್ಯ, ಗಾರುಡಿ ಗೊಂಬೆ, ಹಲಗೆ ಮೇಳ, ಗೊರವರ ಕುಣಿತ, ಕೊರಕಾನ್ ನೃತ್ಯ, ಕರಡಿ ಮಜಲು, ರಂಗ ಕುಣಿತ, ತಮಟೆ–ನಗಾರಿ, ಕಂಗಿಲು ಕುಣಿತ, ಸ್ಯಾಕ್ಸೋಫೋನ್, ಡೊಳ್ಳು ಕುಣಿತ, ಲಂಬಾಣಿ ನೃತ್ಯ ಕಂಡು ಜನರು ಮನಸೋತರು. ಮಲೆನಾಡು ಸುಗ್ಗಿ ಬುಡಕಟ್ಟಿನ ನೃತ್ಯ, ದೊಣ್ಣೆ ವರಸೆ, ಪಟ ಕುಣಿತ, ಪೂಜಾ ಕುಣಿತ, ಕೋಳಿ ನೃತ್ಯ, ಮಹಿಳಾ ಚಂಡೆ, ಬೇಡರ ವೇಷ, ಹೆಜ್ಜೆ ಮೇಳ, ಮುಳ್ಳು ಕುಣಿತ, ಚಿಟ್ಟೆ ಮೇಳ, ಜೋಗತಿ ನೃತ್ಯ, ನಂಟಿ ಕೋಲು, ಕೀಲು ಕುದುರೆ, ಡಮಾಯಿ ನೃತ್ಯ, ಹೂವಿನ ನೃತ್ಯ, ಕರ್ಬಲ್ ಕುಣಿತ, ಹುಲಿ ವೇಷ, ಚಿಲಿಪಿಲಿ ಗೊಂಬೆ, ಕಥಕ್ಕಳಿ ಗೊಂಬೆ, ಜಾನಪದ ಕಲಾ ತಂಡಗಳ ಪ್ರದರ್ಶನಗಳು ನೆರೆದಿದ್ದವರಿಗೆ ಕಲಾ ರಸದೌತಣ ನೀಡಿದವು.

ಬಾಗಲಕೋಟೆಯ ಬಾದಾಮಿ ಚಾಲುಕ್ಯ ರಾಜವಂಶ, ಬಳ್ಳಾರಿಯ ಕುಮಾರಸ್ವಾಮಿ ದೇವಾಲಯ, ಬೆಳಗಾವಿಯ ಮಹಾಲಿಂಗೇಶ್ವರ ದೇವಸ್ಥಾನ, ನೆಲಮಂಗಲದ ಶಿವಗಂಗೆ ದೇವಸ್ಥಾನ, ಇಸ್ರೋದ ಚಂದ್ರಯಾನ–3, ಬೀದರ್‌ನ ಕೃಷ್ಣಮೃಗ ಸಂರಕ್ಷಣಾ ಧಾಮ, ಚಾಮರಾಜನಗರದ ಆನೆ, ಹುಲಿಗಳ ಕಾಡು, ಚಿಕ್ಕಬಳ್ಳಾಪುರದ ಏಕತೆಯಲ್ಲಿ ವಿವಿಧತೆ ಸಾರುವ ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಸಾಗಿದವು.

ಚಿತ್ರದುರ್ಗದ ಶ್ರೀ ತಿಪ್ಪೇರುದ್ರಸ್ವಾಮಿ ದೇವಸ್ಥಾನ, ದಕ್ಷಿಣ ಕನ್ನಡದ ವಿವೇಕಾನಂದ ತಾರಾಲಯ, ದಾವಣಗೆರೆಯ ಬಂಜಾರ ಸಂಪ್ರದಾಯ, ಗದಗದ ಸಬರಮತಿ ಆಶ್ರಮ, ಹಾಸನದ ಹಾಸನಾಂಬ ದೇವಾಲಯ, ಹಾವೇರಿಯ ಗದ್ದಿಗೆ ಕಾಗಿನೆಲೆ, ಕಲ್ಬುರ್ಗಿಯ ಚಿಂಚೋಳಿ ಅರಣ್ಯ ಪ್ರದೇಶ, ಕೊಡಗಿನ ಪ್ರೇಕ್ಷಣೀಯ ಸ್ಥಳಗಳು, ಕೋಲಾರದ ವೀರಗಲ್ಲುಗಳ ಉತ್ಖನನ, ಕೊಪ್ಪಳದ ಕಿನ್ನಾಲ ಕಲೆ, ಮಂಡ್ಯ ಜಿಲ್ಲೆಯ ಸಾಂಪ್ರದಾಯಿಕ ಆಲೆಮನೆ ಬಿಂಬಿಸುವ ಎತ್ತಿನ ಗಾಡಿಯಲ್ಲಿ ಕಬ್ಬು ಅರೆದು ಬೆಲ್ಲ ತಯಾರಿಸುವ ಸ್ತಬ್ಧಚಿತ್ರ ಗಮನ ಸೆಳೆದವು. ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆಗಳು, ರಾಯಚೂರಿನ ನವರಂಗ ದರ್ವಾಜ, ರಾಮನಗರದ ಚನ್ನಪಟ್ಟಣ ಗೊಂಬೆಗಳು, ಶಿವಮೊಗ್ಗದ ಕುವೆಂಪು ಪುತ್ಥಳಿ, ತುಮಕೂರಿನ ಯಕ್ಷಗಾನ, ಉಡುಪಿಯ ತ್ಯಾಜ್ಯ ಮುಕ್ತ ಮತ್ಸ್ಯ ಸ್ನೇಹಿ ಸಮುದ್ರ, ವಿಜಯಪುರದ ಜ್ಞಾನ ಯೋಗಾಶ್ರಮ, ಸರ್ಕಾರದ ಗ್ಯಾರಂಟಿ ಯೋಜನೆಗಳು, ಮೈಸೂರು ಮೆಡಿಕಲ್ ಕಾಲೇಜಿನ ಶತಮಾನೋತ್ಸವ ಸೇರಿದಂತೆ ವಿವಿಧ ಇಲಾಖೆಗಳು, ನಿಗಮ ಮಂಡಳಿಗಳ ಅಭಿವೃದ್ಧಿ ಯೋಜನೆ ಪ್ರಸ್ತುತಪಡಿಸುವ ಸ್ತಬ್ಧ ಚಿತ್ರಗಳು ಅತ್ಯಾಕರ್ಷಕವಾಗಿದ್ದವು.

ನಾದಸ್ವರ ವಾದನ, ಅಶ್ವಾರೋಹಿ ದಳದ ಇಂಗ್ಲಿಷ್ ಬ್ಯಾಂಡ್, ಫಿರಂಗಿ ಗಾಡಿಗಳು, ಅಗ್ನಿಶಾಮಕ ದಳದ ಕಾರ್ಯಾಚರಣೆ ಸಲಕರಣೆಗಳು ವಿಜಯ ದಶಮಿ ಮೆರವಣಿಗೆಗೆ ಮೆರುಗು ನೀಡಿದವಲ್ಲದೇ, ಮೇಯರ್ ಶಿವಕುಮಾರ್ ಗೌನ್ ಧರಿಸಿ ಎರಡನೇ ಬಾರಿ ಇಂದು ಕುದುರೆ ಸವಾರಿ ಮಾಡಿ ಗಮನ ಸೆಳೆದರು.

ನಿರಾಯಾಸವಾಗಿ ಗುರಿ ತಲುಪಿದ ಅಭಿಮನ್ಯು: 750 ಕೆ.ಜಿ. ತೂಗುವ ಚಿನ್ನದ ಅಂಬಾರಿ ಹೊತ್ತು ವರಲಕ್ಷ್ಮಿ ಮತ್ತು ವಿಜಯಳೊಂದಿಗೆ ಗಜ ಗಾಂಭೀರ್ಯದಿಂದ ಹೆಜ್ಜೆ ಹಾಕಿದ ಅಭಿಮನ್ಯು, 5 ಕಿ.ಮೀ. ನಿರಾಯಾಸವಾಗಿ ರಾಜಮಾರ್ಗದಲ್ಲಿ ಸಾಗಿ ರಾತ್ರಿ 7.30 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿತು. ಅರಮನೆಯಿಂದ ಕೆ.ಆರ್.ಸರ್ಕಲ್, ಸಯ್ಯಾಜಿರಾವ್ ರಸ್ತೆ, ಬಂಬೂ ಬಜಾರ್, ಹೈವೇ ಸರ್ಕಲ್ ಮಾರ್ಗ ಗಜ ಗಾಂಭೀರ್ಯದಿಂದ ಅಂಬಾರಿ ಹೊತ್ತು ಸಾಗಿದ ಜಂಬೂಸವಾರಿಯಲ್ಲಿ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದ ಲಕ್ಷಾಂತರ ಮಂದಿ ಭಕ್ತಿಪರವಶರಾದರು. ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲಿ, ಮರ, ಕಟ್ಟಡಗಳ ಮೇಲೆ ನಿಂತು ಐತಿಹಾಸಿಕ ವಿಜಯದಶಮಿಯನ್ನು ಕಣ್ತುಂಬಿಕೊಂಡ ಜನಸ್ತೋಮ, ನಾಡಿನ ಜಾನಪದ ಕಲಾ ಲೋಕ, ವಿವಿಧ ಜಿಲ್ಲೆಗಳ ವಿಶೇಷತೆಗಳನ್ನು ಕಂಡು ಪುಳಕಿತವಾಯಿತು. ಎಲ್ಲಿ ನೋಡಿದರಲ್ಲಿ ಜನ ಜಂಗುಳಿ ಕಂಡು ಬಂದಿತು.

ಪಂಜಿನ ಕವಾಯತು: ರಾತ್ರಿ 7.50 ಗಂಟೆಗೆ ಬನ್ನಿಮಂಟಪದಲ್ಲಿ ಆರಂಭವಾದ ಆಕರ್ಷಕ ಪಂಜಿನ ಕವಾಯತು ಪ್ರದರ್ಶನ ನೋಡಿ ಜನರು ಮೂಕ ವಿಸ್ಮಿತರಾದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕವಾಯತು ವೀಕ್ಷಿಸಿ ಗೌರವ ವಂದನೆ ಸ್ವೀಕರಿಸಿದರು.

ಈ ಸಾಲಿನ ದಸರಾ ಉತ್ಸವಕ್ಕೆ ತೆರೆ: ಅದರೊಂದಿಗೆ ಅಕ್ಟೋಬರ್ 15ರಂದು ಆರಂಭವಾಗಿದ್ದ 2023ರ ನವರಾತ್ರಿ ಉತ್ಸವಕ್ಕೆ ತೆರೆ ಬಿದ್ದಂತಾಗಿದೆ. ಸಾಂಸ್ಕೃತಿಕ ಕಲಾ ಪ್ರದರ್ಶನ, ಕ್ರೀಡೆ, ಚಲನ ಚಿತ್ರೋತ್ಸವ, ಫಲ–ಪುಷ್ಪ ಪ್ರದರ್ಶನ, ಆಹಾರ ಮೇಳ, ಕುಸ್ತಿ, ವಸ್ತುಪ್ರದರ್ಶನ, ವಿದ್ಯುತ್ ದೀಪಾಲಂಕಾರ, ಯೋಗ, ಪಾರಂಪರಿಕ ನಡಿಗೆ ಸೇರಿದಂತೆ ಹತ್ತು–ಹಲವು ಕಾರ್ಯಕ್ರಮಗಳು 9 ದಿನಗಳ ಕಾಲ ಸಾಂಸ್ಕೃತಿಕ ನಗರಿಯಲ್ಲಿ ಜನರಿಗೆ ಕಲಾ ರಸದೌತಣ ನೀಡಿದವು.

ನವರಾತ್ರಿ ಉತ್ಸವದ ಪ್ರಮುಖ ಆಕರ್ಷಣೆಯಾದ ವೈಭವದ ವಿಜಯ ದಶಮಿ ಮೆರವಣಿಗೆಯು ಯಾವುದೇ ಗೊಂದಲ, ಗದ್ದಲಗಳಿಲ್ಲದೆ ಶಾಂತಿಯುತವಾಗಿ ನಡೆಯಿತು. ಈ ಐತಿಹಾಸಿಕ ಜಂಬೂ ಸವಾರಿಗೆ ಲಕ್ಷಾಂತರ ಮಂದಿ ಸಾಕ್ಷಿಯಾದರು. ಉರಿಬಿಸಿಲನ್ನೂ ಲೆಕ್ಕಿಸದೇ ಜನಸ್ತೋಮ ವೈಭವದ ಉತ್ಸವವನ್ನು ಕಣ್ತುಂಬಿಕೊಂಡಿತು. ಅರಮನೆ ಒಳ–ಹೊರ ಆವರಣ, ರಾಜಮಾರ್ಗ, ಪಂಜಿನ ಕವಾಯತು ಮೈದಾನದಲ್ಲಿ ಇನ್ನಿಲ್ಲದ ವ್ಯಾಪಕ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತಲ್ಲದೆ, ಕಟ್ಟೆಚ್ಚರ ವಹಿಸಿದ್ದ ಪೊಲೀಸರು, ಯಾವುದೇ ಅಹಿತಕರ ಘಟನೆಗಳಾಗದಂತೆ ವ್ಯವಸ್ಥೆ ಕಲ್ಪಿಸಿದ್ದರು.

ರೋಚಕ ಸಾಹಸದೊಂದಿಗೆ ಕಣ್ಮನ ತುಂಬಿದ ಪಂಜಿನ ಕವಾಯತು


ಅಶ್ವಾರೋಹಿಗಳ ಮೈನವಿರೇಳಿಸುವ ಸಾಹಸ ದೃಶ್ಯ; ಧ್ವನಿ–ಬೆಳಕಿನ ಚಿತ್ತಾರ; ಬೈಕ್ ಸವಾರರ ಸ್ಟಂಟ್; ನಡುವೆ ನಕ್ಕು ನಗಿಸುವ ಸಾಹಸಿಗರ ಚಮತ್ಕಾರ; ಅಂತೂ ಈ ದಸರಾಕ್ಕೆ ನಗುವಿನ ತೆರೆ





ಶ್ವೇತಾಶ್ವ ತಂಡ ನಿರ್ಮಿಸಿದ್ದ ಆಕರ್ಷಕ ಪಿರಮಿಡ್

ಮೈಸೂರು, ಅ.24(ಎಸ್‌ಬಿಡಿ)–ವಿಜಯದಶಮಿ ಮೆರವಣಿಗೆ ಸಂಪನ್ನಗೊಂಡ ನಂತರ ಬನ್ನಿಮಂಟಪ ಮೈದಾನದಲ್ಲಿ ಮಿಲಿಟರಿ ಪೊಲೀಸ್ ಹಾಗೂ ಅಶ್ವಾರೋಹಿ ದಳದ ಮೈನವಿರೇಳಿಸುವ ಸಾಹಸ, ಧ್ವನಿ ಮತ್ತು ಬೆಳಕಿನ ರಂಗಿನಾಟ, ಮನಮೋಹಕ ಪಂಜಿನ ಕವಾಯತಿನೊಂದಿಗೆ ಈ ಬಾರಿಯ ಮೈಸೂರು ದಸರಾ ಮಹೋತ್ಸವಕ್ಕೆ ವರ್ಣರಂಜಿತ ತೆರೆ ಬಿದ್ದಿತು. ಗಣ್ಯರ ಆಗಮನದೊಂದಿಗೆ ರಾತ್ರಿ 7.40ಕ್ಕೆ ಕಾರ್ಯಕ್ರಮ ಆರಂಭವಾಯಿತು. ರಾಷ್ಟ್ರೀಯ ಗೌರವ ವಂದನೆ ಬಳಿಕ ಕಿಂಗ್ ಪವರ್ ಅಶ್ವದೊಂದಿಗೆ ಆಗಮಿಸಿದ ಖಡ್ಗಧಾರಿ ಪ್ರಧಾನ ದಳಪತಿ ಕೆ.ಎನ್.ಸುರೇಶ್(ಮೌಟೆಂಡ್ ಎಸಿಪಿ) ಕವಾಯತು ವರದಿ ಸಲ್ಲಿಸಿ, ನಿಶ್ಚಲ ದಳಗಳ ಪರಿವೀಕ್ಷಣೆಗೆ ಗಣ್ಯರನ್ನು ಆಹ್ವಾನಿಸಿದರು. ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ತೆರೆದ ಜೀಪಿನಲ್ಲಿ ಪರಿವೀಕ್ಷಣೆ ಆರಂಭಿಸಿದರು. ಸಾಂಪ್ರದಾಯಕ ಬೆಂಗಾವಲು ಅಶ್ವಪಡೆಯೊಂದಿಗೆ ಸುಶ್ರಾವ್ಯ ಹಿನ್ನೆಲೆ ಸಂಗೀತದ ನಡುವೆ ಹದಿನೆಂಟು ನಿಶ್ಚಲ ದಳಗಳ ಪರಿವೀಕ್ಷಣೆ ಮಾಡಿ, ಗೌರವ ಸ್ವೀಕರಿಸಿದರು. ರಾಜ್ಯಪಾಲರೊಂದಿಗೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಇದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ. ಪರಮೇಶ್ವರ್, ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ, ಶಿವರಾಜ್ ಎಸ್.ತಂಗಡಗಿ, ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್ ಸೇರಿದಂತೆ ಅನೇಕ ಜನಪ್ರತಿನಿಧಿಗಳು ಗಣ್ಯರ ಗ್ಯಾಲರಿಯಲ್ಲಿ ಆಸೀನರಾಗಿದ್ದರು.



ಅಶ್ವಾರೋಹಿ ದಳದ ರೋಚಕ ಟೆಂಟ್ ಪೆಗ್ಗಿಂಗ್

ಡ್ರೋನ್ ಬೆಳಕಿನ ಹಬ್ಬ

ಈ ಬಾರಿಯೂ ಡ್ರೋನ್ ಎಲ್ಲರ ಮನಸೂರೆಗೊಂಡಿತು. ಡ್ರೋಣ್ ಬೆಳಕಿನ ರೇಖೆಗಳಿಂದ ಸೃಷ್ಟಿಯಾದ HAPPY DASARA, ಕರ್ನಾಟಕ ಭೂಪಟ, ನಾಲ್ವಡಿ ಕೃಷ್ಣರಾಜ ಒಡೆಯರ್, ಗಂಡಭೇರುಂಡ ಲಾಂಛನ ಚಿತ್ರ, KARNATAKA STATE POLICE, SEE YOU- 2024 ಅಕ್ಷರ ವಿನ್ಯಾಸ, ಭೂಮಂಡಲ, ಅಂಬಾವಿಲಾಸ ಅರಮನೆ, ಅಂಬಾರಿ ಹೊತ್ತ ಆನೆ, ನಂದಿ ಚಿತ್ರಗಳು ಡ್ರೋನ್ ಬೆಳಕಿನ ರೇಖೆಗಳಲ್ಲಿ ಸೃಷ್ಟಿಯಾಗಿದ್ದು ಮನಮೋಹಕವಾಗಿತ್ತು. ಕೊನೆಯಲ್ಲಿ ನಕ್ಷತ್ರ ವೃಷ್ಟಿಯಾದಂತೆ ಬೆಳಕಿನ ಬೆರಗು ಮೂಡಿಸಿತು.

21 ಕುಶಾಲತೋಪು: ನಿಶ್ಚಲ ತುಕಡಿಗಳ ಪರಿವೀಕ್ಷಣೆ ಬಳಿಕ ಅಶ್ವಾರೋಹಿ ದಳದ ರುದ್ರಪ್ಪ ಆಫ್ರಿಕನ್ ಕ್ಯಾಟ್ ಅಶ್ವದಲ್ಲಿ ಶರವೇಗದಲ್ಲಿ ತೆರಳಿ ಕುಶಾಲತೋಪು ಸಿಡಿಸಲು ನಿಶಾನೆ ನೀಡಿದರು. ಬಳಿಕ ಮೈದಾನದಲ್ಲಿ ಸಾಲುಗಳಲ್ಲಿ ನಿಂತಿದ್ದ ಪೊಲೀಸರು ಶಿಸ್ತುಬದ್ಧವಾಗಿ ಬಲದಿಂದ ಎಡಕ್ಕೆ ಚಾಲಿಸುವಂತೆ ಗಾಳಿಯಲ್ಲಿ ಗುಂಡು ಹಾರಿಸಿದರು. ನಂತರ 7 ಕುಶಾಲತೋಪುಗಳನ್ನು ಸಿಡಿಸಲಾಯಿತು. ಪೊಲೀಸ್ ವಾದ್ಯ ವೃಂದದವರು ರಾಷ್ಟ್ರಗೀತೆ ನುಡಿಸಿದರು. ಹೀಗೆ ಮೂರು ಸುತ್ತುಗಳಲ್ಲಿ ಸಿಡಿದ 21 ಕುಶಾಲತೋಪುಗಳ ಸದ್ದು ನೆರೆದಿದ್ದವರ ಎದೆ ಝಲ್ ಎನಿಸಿತ್ತು. ಈ ವೇಳೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಿದರು.

ಅತ್ಯಾಕರ್ಷಕ ಪರೇಡ್: ಪೊಲೀಸ್ ಬ್ಯಾಂಡ್ ಹಿನ್ನೆಲೆ ಸಂಗೀತಕ್ಕೆ ಎಂಟು ಸಶಸ್ತ್ರ ದಳ ಹಾಗೂ ಹತ್ತು ನಿಶಸ್ತ್ರ ದಳ ಸೇರಿ ಒಟ್ಟು ಹದಿನೆಂಟು ಪಡೆಗಳು ಶಿಸ್ತುಬದ್ಧ ಹೆಜ್ಜೆ ಹಾಕಿದವು. ಸಶಸ್ತ್ರ ದಳಗಳಾದ ಅಶ್ವಾರೋಹಿದಳ, ನಗರ ಸಶಸ್ತ್ರ ಮೀಸಲು ಪಡೆ, ಜಿಲ್ಲಾ ಸಶಸ್ತ್ರ ಮೀಸಲು ಪಡೆ, ರೈಲ್ವೆ ರಕ್ಷಣಾ ಪಡೆ, ಕೆಎಸ್‌ಆರ್‌ಪಿ ತುಕಡಿ, ಗೃಹ ರಕ್ಷಕ ದಳ ಮತ್ತು ನಿಶ್ಚಲ ದಳಗಳಾದ ಎನ್‌ಸಿಸಿ ಭೂದಳ, ನೌಕಾದಳ, ವಾಯುದಳ, ಪೊಲೀಸ್ ಪಬ್ಲಿಕ್ ಶಾಲೆ ಬಾಲಕಿಯರ ತಂಡ, ಬಾಲಕರ ತಂಡ, ನವೋದಯಾ ಶಾಲೆ ತಂಡ, ಸ್ಕೌಟ್ಸ್ ಬಾಲಕರ ತಂಡ, ಗ್ಲೈಡ್ಸ್ ತಂಡ, ಭಾರತ ಸೇವಾದಳ ಬಾಲಕರ ತಂಡ ಹಾಗೂ ಬಾಲಕಿಯರ ತಂಡಗಳು ಅತ್ಯಾಕರ್ಷಕ ಪಥಸಂಚಲನ (ಪರೇಡ್)ದೊಂದಿಗೆ ಗಣ್ಯರಿಗೆ ವಂದನೆ ಸಲ್ಲಿಸಿದರು. ರಿವ್ಯೂ ಆರ್ಡರ್‌ನಲ್ಲಿ ಶಸ್ತ್ರ ವಂದನೆ ಸಲ್ಲಿಸಿ, ರಾಷ್ಟ್ರಗೀತೆ ನುಡಿಸಿ ಗಣ್ಯರ ಅನುಮತಿಯೊಂದಿಗೆ ಎಲ್ಲಾ ತುಕಡಿಗಳೂ ಅಭಿಮುಖವಾಗಿ ಪಥ ಸಂಚಲನದಿಂದ ನಿರ್ಗಮಿಸಿದವು.

ಸಾಂಸ್ಕೃತಿಕ ವೈಭವ: ಸುಮಂತ್ ವಶಿಷ್ಠ ತಂಡದಿಂದ ನಾಡಗೀತೆ ಪ್ರಸ್ತುತಿ ಬಳಿಕ ಡಿಎನ್‌ಎ ಸಂಸ್ಥೆ ಧ್ವನಿ–ಬೆಳಕಿನ ರಂಗಿನೋಕುಳಿ ಸೃಷ್ಟಿಸಿತು. ಭಜರಂಗಿ ಮೋಹನ್ ಸಂಯೋಜನೆಯಲ್ಲಿ 350ಕ್ಕೂ ಹೆಚ್ಚು ಕಲಾವಿದ ಆಕರ್ಷಕ ನೃತ್ಯ ಪ್ರದರ್ಶಿಸಿದರು.

ಮೈನವಿರೇಳಿಸಿದ ಸಾಹಸ: ಮೂರ್‍ನಾಲ್ಕು ವರ್ಷಗಳ ಬಳಿಕ ಬೈಕ್ ಜನ ಸ್ಟಂಟ್ ಕಣ್ತುಂಬಿಕೊಂಡರು. ಶ್ವೇತಾಶ್ವ ಮಿಲಿಟರಿ ಪೊಲೀಸ್ ತಂಡದ ಸಾಹಸ ಪ್ರದರ್ಶನ ನೆರೆದಿದ್ದವರನ್ನು ಅವಕ್ಕಾಗಿಸಿತು. ಮೊದಲು ಅತಿಥಿ ಗಣ್ಯರಿಗೆ ವಂದನೆ ಸಲ್ಲಿಸಿ ನಂತರ ಗುಡು ಗುಡು ರಾಯಲ್ ಎನ್‌ಫೀಲ್ಡ್ ಬೈಕ್‌ಗಳಲ್ಲಿ ಕರಾರುವಕ್ಕಾಗಿ ಸಾಹಸ ಪ್ರದರ್ಶಿಸಿದರು. ಸಿಸರ್ ಕ್ರಾಸಿಂಗ್(ಕತ್ತರಿ ಮಾದರಿ), ಪ್ಯಾರಲಲ್ ಕ್ರಾಸಿಂಗ್, ಫೋರ್ತ್(4) ಕ್ರಾಸಿಂಗ್, ಸ್ಪೀಡ್ ಕ್ರಾಸಿಂಗ್, ವಿ ಕ್ರಾಸಿಂಗ್ ಮೂಲಕ ನಿಬ್ಬೆರಗಾಗಿಸಿದರು. ವ್ಯಕ್ತಿಯೊಬ್ಬರ ಎದೆಯ ಮೇಲೆ ಹಲಗೆ ಇಟ್ಟು ಅದರ ಮೇಲೆ ಬೈಕ್ ಓಡಿಸಿದ್ದು(ಚೆಸ್ಟ್ ಜಂಪ್), ಹವಾಲ್ದಾರ್ ಮಣಿಶೇಖರನ್ ಟ್ಯೂಬ್ ಲೈಟ್ ಗೋಡೆ ಪುಡಿಪುಡಿ ಮಾಡಿದ್ದು, ಮಣಿಶೇಖರ್, ಮೈಸೂರಿನ ಮಧುಸೂದನ್, ಎಂ.ಕೆ.ಸಿಂಗ್ ಅವರ ಫೈಯರ್ ಜಂಪ್, ಹದಿನೈದು ಮಂದಿ ಮಲಗಿಸಿ ಅವರ ಮೇಲೆ ಜಂಪಿಂಗ್ ಮಾಡಿಸಿದ್ದು ಮೈನಡುಗಿಸಿತು. ವೈಯಕ್ತಿಕವಾಗಿ ಲೆಗ್ ಕ್ರಾಸ್, ಸ್ಟಾಂಡಿಂಗ್ ಆನ್ ದಿ ಸೀಟ್, ಶೇಕಿಂಗ್ ರೈಡ್, ಹೀಗೆ ಹಲವು ರೀತಿಯಲ್ಲಿ ಸಾಹಸ ಪ್ರದರ್ಶಿಸಿದರು. ಈರಪ್ಪ ದೊಡ್ಡಿ ಬೈಕ್‌ನಲ್ಲಿ ಏಣಿಯನ್ನೇರಿ ಗಮನ ಸೆಳೆದರು. ಗುಂಪಾಗಿ ಎಕ್ಸ್‌ಮಸ್ ಟ್ರಿ, ಕಮಲ, ಏರೋಪ್ಲೇನ್, ಸುದರ್ಶನ ಚಕ್ರ ನಿರ್ಮಿಸಿದ್ದು ಅಮೋಘವಾಗಿತ್ತು. ಏನಾಗುವುದೋ ಏನೋ ಎಂಬ ಆತಂಕದಲ್ಲೇ ಸಾಹಸ ವೀಕ್ಷಿಸುತ್ತಿದ್ದವರಲ್ಲಿ ಜೋಕರ್ ವೇಷಧಾರಿಗಳು ನಗು ತರಿಸಿದರು. ಚೆಸ್ಟ್ ಜಂಪ್ ಮಾಡಲು ಹೋಗಿ ಆ ವ್ಯಕ್ತಿಯನ್ನೇ ಎಬ್ಬಿಸುವುದು, ಬೈಕ್ ಮೇಲೆ ಶಾಲೆಯಲ್ಲಿ ಪಿಟಿ ಟೀಚರ್ ಹೇಳಿ ಕೊಡುವ ವ್ಯಾಯಾಮ ಪ್ರದರ್ಶಿಸುವುದು, ಹಿಮ್ಮುಖವಾಗಿ ಮಲಗಿ ಕಾಲಿನ ಮೇಲೆ ಕಾಲು ಹಾಕಿಕೊಂಡು ಪತ್ರಿಕೆ ಓದುವುದು, ಹೀಗೆ ಕಸರತ್ತಿನ ಜೊತೆಗೆ ಎಲ್ಲರನ್ನೂ ನಕ್ಕು ನಗಿಸುವಲ್ಲಿ ಯಶಸ್ವಿಯಾದರು. ಎನ್.ಕೆ.ಸಿಂಗ್ ನೇತೃತ್ವದಲ್ಲಿ ಭಾರತದ ಧ್ವಜ ಹಿಡಿದು ಪಿರಮಿಡ್ ನಿರ್ಮಿಸಿ ವಂದನೆ ಸಲ್ಲಿಸಿದರು. ಈ ವೇಳೆ ನೆರೆದಿದ್ದವರೆಲ್ಲಾ ಎದ್ದು ನಿಂತು ಸಾಹಸ ಪ್ರದರ್ಶಿಸಿದ ವೀರ ಯೋಧರಿಗೆ ಗೌರವ ಸಲ್ಲಿಸಿದರು.



ಪಂಜಿನ ಬೆಳಕು: ಬೆಂಗಳೂರಿನ ಥಣಿಸಂದ್ರ ಪೊಲೀಸ್ ತರಬೇತಿ ಶಾಲೆಯಲ್ಲಿ ತರಬೇತಿ ಪಡೆದಿರುವ 300 ಮಂದಿ ಯುವ ಸಿಬ್ಬಂದಿ ಪಂಜಿನ ಕವಾಯತು ಪ್ರದರ್ಶಿಸಿದರು. ಹಲವು ಜನಪ್ರಿಯ ಕನ್ನಡ ಮತ್ತು ಹಿಂದೆ ಗೀತೆಗಳ ಹಿನ್ನೆಲೆ ಸಂಗೀತಕ್ಕೆ ಪಂಜು ಹಿಡಿದು ಆಕರ್ಷಕ ಹೆಜ್ಜೆ ಹಾಕಿ ವಿವಿಧ ಆಕೃತಿಗಳನ್ನು ನಿರ್ಮಿಸಿದರು. WELL COME TO HERITAGE CITY , KARNATAKA POLICE, HAPPY DASARA-413, JAI CHAMUNDI, SEE YOU IN 2024, JAI HIND ಅಕ್ಷರ ವಿನ್ಯಾಸ ರೂಪಿಸಿದರು. ಶಿಸ್ತುಬದ್ಧ ನಡಿಗೆ, ಕರಾರುವಕ್ಕಾದ ಕೈಚಳಕದಿಂದ ಚಮತ್ಕಾರವನ್ನೇ ಸೃಷ್ಟಿಸಿದರು.

ಟೆಂಟ್ ಪೆಗ್ಗಿಂಗ್: ಅಶ್ವಾರೋಹಿ ದಳದ ಸಾಹಸಮಯ ಪ್ರದರ್ಶನ ನೆರೆದಿದ್ದವರನ್ನು ನಿಬ್ಬೆರಗಾಗಿತು. ಅಶ್ವದಲ್ಲಿ ವೇಗವಾಗಿ ಬಂದು ಈಟಿಯಲ್ಲಿ ಭೂಮಿಗೆ ನಿಟ್ಟಿದ್ದ ಉರಿಗೂಟಗಳನ್ನು ಚುಚ್ಚಿ ಮೇಲೆತ್ತಿದ್ದು (ಟೆಂಟ್ ಪೆಗ್ಗಿಂಗ್) ರೋಮಾಂಚನಗೊಳಿಸಿತು. ಎಸ್.ಡಿ.ಸಾಸನೂರ, ಆನಂದ್ ಸಿಂಗ್, ಸೋಮಣ್ಣ, ರುದ್ರಪ್ಪ, ಮಹೇಶ್, ಸುರೇಶ್ ಮಳಲಿ, ಜಯಪ್ರಕಾಶ್, ಸಂದೇಶ್, ಚಂದ್ರು ವೈಯಕ್ತಿಕವಾಗಿ ಹಾಗೂ ನಾಲ್ಕು ಜನ ಗುಂಪಾಗಿ ಸಾಹಸ ಪ್ರದರ್ಶಿಸಿದರು. ರಮೇಶ್ ರಾವ್ ಹಾಗೂ ಕೃಷ್ಣ ಅವರು ಅಶ್ವಗಳಿಗೆ ನಿಶಾನೆ ನೀಡಿ ಯಶಸ್ಸಿಗೆ ಸಹಕರಿಸಿದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : "ರೀ, ನಿಮ್ಮ ಮಗಳು ದೊಡ್ಡವಳಾದ ಮೇಲೆ ಡಾಕ್ಟರ್ ಆಗ್ತಾಳೆ"
ಪತಿ : "ಹೇಗೆ ಅಷ್ಟು ಕರೆಕ್ಟ್ ಆಗಿ ಹೇಳ್ತೀಯಾ?"
ಪತ್ನಿ : "ಹೇಗೆ ಅಂದರೆ ಅವಳು ಬರೆದ ಅಕ್ಷರ ಅವಳಿಗೇ ಅರ್ಥ ಆಗಲ್ಲ!"

ಮೈಸೂರು ಮಿತ್ರ

ಬುಧವಾರ, 25 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜೀವನದಲ್ಲಿ ಎಲ್ಲಾ ಲಾಭಗಳನ್ನು ಒಮ್ಮೆಲೇ ಪಡೆಯಲು ಪ್ರಯತ್ನಿಸುವವನಿಗೆ ಏನೂ ದೊರೆಯದು. –ಬೂಮ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆನೆ ಭಾರ ಆನೆಗೆ / ಸೊಳ್ಳೆ ಭಾರ ಸೊಳ್ಳೆಗೆ

ನಿಮ್ಮ ಪತ್ರಗಳು

ವಿದ್ಯುತ್ ನಿರ್ವಹಣೆ ಸಮರ್ಪಕವಾಗಿರಲಿ!

ಮಾನ್ಯರೆ,

ನಮ್ಮ ರಾಜ್ಯದಲ್ಲಿ ಬೇಸಿಗೆ ಕಾಲ ಬರುವ ಮುನ್ನವೇ ವಿದ್ಯುತ್ ಕ್ಷಾಮ ಉಲ್ಬಣಿಸುತ್ತಿದೆ. ರೈತರ ಪಂಪ್‌ಸೆಟ್‌ಗಳಿಗೆ ನಿಯಮಿತವಾದ ವಿದ್ಯುತ್ ಸರಬರಾಜು ಇಲ್ಲದೇ ಸಾಲ ಸೋಲ ಮಾಡಿ ಬೆಳೆದ ಬೆಳೆಗಳು ಒಣಗುತ್ತಿವೆ. ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ನಮ್ಮ ಅನ್ನದಾತರು ನಿತ್ಯ ಕಣ್ಣೀರಿನಲ್ಲಿಯೇ ಕೈ ತೊಳೆಯುವಂತಾಗಿದೆ. ಪರಿಸ್ಥಿತಿ ಹೀಗಿದ್ದರೂ ನಮ್ಮ ರಾಜ್ಯದ ಕೆಲ ಪ್ರದೇಶಗಳಲ್ಲಿ ವಿದ್ಯುತ್ ನಿರ್ವಹಣೆ ಹೇಗಿದೆಯೆಂದರೆ, ನಗರ ಹಾಗೂ ಗ್ರಾಮದ ಕೆಲ ವಿದ್ಯುತ್ ಕಂಬಗಳಲ್ಲಿ ಹಗಲು ಹೊತ್ತಿನಲ್ಲೂ ವಿದ್ಯುತ್ ದೀಪ ಉರಿಯುತ್ತಿರುತ್ತದೆ!

ರಾತ್ರಿ ವೇಳೆ ವಿದ್ಯುತ್ ಕಂಬಗಳಿಗೆ ಅಳವಡಿಸಿರುವ ಸಾರ್ವಜನಿಕ ವಿದ್ಯುತ್ ದೀಪ ಬಳಸಿ, ಬೆಳಗಿನ ವೇಳೆ ಅದನ್ನು ಆರಿಸುವ ಸಮರ್ಪಕ ವ್ಯವಸ್ಥೆ ರಾಜ್ಯದ ಬಹುತೇಕ ನಗರ ಹಾಗೂ ಹಳ್ಳಿಗಳಲ್ಲಿ ಇಲ್ಲವಾಗಿದೆ. ಹೀಗಾಗಿ ಹಗಲು ಹೊತ್ತಿನಲ್ಲೂ ಸಾರ್ವಜನಿಕ ವಿದ್ಯುತ್ ದೀಪಗಳು ಉರಿದು ವಿದ್ಯುತ್ ಪೋಲಾಗುತ್ತಿದೆ. ಇದರಿಂದ ವಿದ್ಯುತ್ ಸಮಸ್ಯೆ ಇನ್ನಷ್ಟು ಹೆಚ್ಚಾಗುವುದರಿಂದ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳು ಇದನ್ನರಿತು ರಾತ್ರಿ ವೇಳೆ ಮಾತ್ರ ವಿದ್ಯುತ್ ಕಂಬಗಳಲ್ಲಿ ಅಳವಡಿಸಿರುವ ಸಾರ್ವಜನಿಕ ವಿದ್ಯುತ್ ದೀಪಗಳನ್ನ ಬೆಳಗಿಸಿ, ಹಗಲು ವೇಳೆ ಕಡ್ಡಾಯವಾಗಿ ಬಂದ್ ಮಾಡುವ ವ್ಯವಸ್ಥೆಯನ್ನು ರಾಜ್ಯದೆಲ್ಲೆಡೆ ಕಟ್ಟುನಿಟ್ಟಾಗಿ ತುರ್ತಾಗಿ ಜಾರಿಗೆ ತರಬೇಕಿದೆ. ಅಲ್ಲದೇ ರಾಜ್ಯಸರ್ಕಾರ ಗೃಹಜ್ಯೋತಿ ಯೋಜನೆಯಡಿ ಗ್ರಾಹಕರಿಗೆ ನೀಡಿರುವ ಉಚಿತ ವಿದ್ಯುತ್‌ನಲ್ಲಿ, ನಮ್ಮ ಜನರು ಎಷ್ಟು ಬೇಕೋ ಅಷ್ಟನ್ನು ಮಾತ್ರ ವಿದ್ಯುತ್ ಬಳಸಿ, ಅನವಶ್ಯಕವಾಗಿ ವಿದ್ಯುತ್ ಪೋಲಾಗದಂತೆ ಪ್ರತಿಯೊಬ್ಬರು ಎಚ್ಚರಿಕೆ ವಹಿಸುವ ಮನವರಿಕೆ ಕೂಡ ಎಲ್ಲಾ ಮನೆಮಂದಿಯ ಗ್ರಾಹಕರಲ್ಲೂ ಆಗಿ, ಪ್ರಸ್ತುತ ವಿದ್ಯುತ್ ಕ್ಷಾಮದ ಕಠಿಣ ಪರಿಸ್ಥಿತಿಯಲ್ಲಿ ವಿದ್ಯುತ್ ಉಳಿತಾಯದ ಕಡೆ ಹೆಚ್ಚು ಗಮನ ಕೊಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಪ್ರವಾಸಿಗರ ಚಿತ್ತ ಕುಪ್ಪಣ್ಣ ಉದ್ಯಾನವನದತ್ತ

ಮಾನ್ಯರೆ,

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ನವರಾತ್ರಿಯ ಕಾರ್ಯಕ್ರಮಗಳಲ್ಲಿ ಒಂದಾದ ಫ್ಲವರ್ ಶೋ ಮೈಸೂರಿನ ಕುಪ್ಪಣ್ಣ ಉದ್ಯಾನವನದಲ್ಲಿ ಆಯೋಜನೆಗೊಂಡಿದ್ದು, ವಿವಿಧ ಬಗೆಯ ಬಣ್ಣ ಬಣ್ಣದ ಚಿತ್ತಾರಗಳ ದೇಶಿ ತಳಿ ಹೂಗಳಿಂದ ಕಲಾಕೃತಿಗಳು ಪ್ರವಾಸಿಗರನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ. ಕುಟುಂಬ, ಸ್ನೇಹಿತರು, ಕಾಲೇಜಿನ ವಿದ್ಯಾರ್ಥಿಗಳು, ಹಿರಿಯರು, ವಿದೇಶಿಯರು ಸೇರಿದಂತೆ ರಾಜ್ಯದ ಬೇರೆ ಬೇರೆ ಭಾಗಗಳಿಂದ ಆಗಮಿಸಿ, ಈ ಮನಮೋಹಕ ದೃಶ್ಯಗಳನ್ನು ಕಣ್ತುಂಬಿಕೊಂಡರು. ಒಟ್ಟಿನಲ್ಲಿ ಜನಸಾಗರವೇ ಹರಿದು ಬಂದು ಜನಜಂಗುಳಿಯಿಂದ ಕಳೆಕಟ್ಟಿ ಝೇಂಕರಿಸುತ್ತಿತ್ತು. ಈ ಬಾರಿ ಫ್ಲವರ್ ಶೋನಲ್ಲಿ ಹಲವು ಬಗೆಯ ವಿಶೇಷಗಳಿದ್ದು. ಮೈಸೂರಿನ ತೋಟಗಾರಿಕಾ ಇಲಾಖೆಯು 4 ತಿಂಗಳಿಂದ ತುಂಬಾ ಶ್ರಮವಹಿಸಿ, ಇದರೊಂದಿಗೆ ರಾಜ್ಯದ ನಾನಾ ಕಂಪನಿಗಳು ಕೈಜೋಡಿಸಿ ಸುಮಾರು ಎರಡು ಕೋಟಿಗೂ ಹೆಚ್ಚು ಬಜೆಟ್‌ನಲ್ಲಿ ವೈವಿಧ್ಯ ಮತ್ತು ಬಹುಸುಂದರವಾಗಿ ಹೂವಿನ ಲೋಕವನ್ನೇ ನಿರ್ಮಿಸಿದ್ದವು. ವಿಭಿನ್ನ ಹೂವುಗಳಿಂದ ಸ್ವರ್ಗದಂತೆ ಕಾಣುತ್ತಿತ್ತು. ಇದು ಹೂಗಳ ಲೋಕವಯ್ಯ ಎಂಬಂತೆ ಪ್ರವಾಸಿಗರನ್ನು ತನ್ನತ್ತ ಕೈಬೀಸಿ ವಿಸ್ಮಯದಂತೆ ಆಕರ್ಷಿಸಿತು. ಹೂವುಗಳಿಂದ ಅರಳಿದ ಚಂದ್ರಯಾನ 3. ಖಾಸಗಿ ದರ್ಬಾರ್‌ನ ರಾಜನ ಸಿಂಹಾಸನ. ಆಕರ್ಷಕ ತಲೆಗಳಿಲ್ಲದ ಸೆಲ್ಫಿ ಸ್ಪಾಟ್, ಸರ್ಕಾರದ ಪಂಚ ಗ್ಯಾರಂಟಿ ಯೋಜನೆ. ಚಾಮುಂಡಿಬೆಟ್ಟದ ಗೋಪುರ ಮತ್ತು ತಾಯಿಯ ಕಲಾಕೃತಿ... ಇವಿಷ್ಟೇ ಅಲ್ಲದೆ ಸ್ಟಾರ್ ಸುವರ್ಣ ಚಾನೆಲ್ ವತಿಯಿಂದ ಅ ಆ ಇ ಈ, ಹಳದಿ ಮತ್ತು ಕೆಂಪು ಬಣ್ಣದಿಂದ ಕೂಡಿದ ಕರ್ನಾಟಕದ ನಕ್ಷೆ, ಪುಟ್ಟ ಮನೆ ಹೂಗಳಿಂದ ಅಲಂಕೃತಗೊಂಡಿದ್ದು ಕನ್ನಡವನ್ನು ಉಳಿಸಿ ಬೆಳೆಸಿ, ಕನ್ನಡದ ಕೀರ್ತಿಯನ್ನು ವಿಶ್ವದಾದ್ಯಂತ ಪರಿಸರಿಸಿ ಎಂಬ ಕಲ್ಪನೆಯುಳ್ಳಂತಹ ಕಲಾಕೃತಿ ಎಲ್ಲರ ಗಮನ ಸೆಳೆಯಿತು. ಒಟ್ಟಿನಲ್ಲಿ ಪ್ರವಾಸಿಗರು ವಿಭಿನ್ನ ಬಣ್ಣ ಬಣ್ಣದ ಹೂವುಗಳನ್ನು ವೀಕ್ಷಿಸಿ ಫಿದಾ ಆದರು.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಇಸ್ರೇಲ್–ಪ್ಯಾಲೇಸ್ತಿನ್ ವಿವಾದಕ್ಕೆ ಶಾಶ್ವತ ಪರಿಹಾರ ಅಗತ್ಯ

ಮಾನ್ಯರೆ,

ಪ್ರಸ್ತುತ ಇಸ್ರೇಲ್ ಮತ್ತು ಪ್ಯಾಲೇಸ್ತಿನ್ ನಡುವಿನ ವಿವಾದ ಕದನ ಸ್ವರೂಪ ಪಡೆದಿದ್ದು, ಅಪಾರ ಪ್ರಮಾಣದ ಜೀವ ಹಾನಿ ಸಂಭವಿಸಿರುವುದು ದುರದೃಷ್ಟಕರವಾಗಿದೆ. ಮೊದಲ ಮಹಾಯುದ್ಧದಲ್ಲಿ ಬ್ರಿಟನ್ ಆಟೋಮನ್ ಸಾಮ್ರಾಜ್ಯವನ್ನು ಸೋಲಿಸಿ ಇಂದಿನ ಪ್ಯಾಲೇಸ್ತಿನ್ ಪ್ರದೇಶವನ್ನು ವಶಪಡಿಸಿಕೊಂಡಿತು. ಮಾಹಿತಿಯ ಪ್ರಕಾರ ಬ್ರಿಟನ್‌ಗೆ ಮೊದಲ ಮಹಾಯುದ್ಧದ ಸಮಯದಲ್ಲಿ ಯಹೂದಿಗಳು ಹಣ ಸಹಾಯ ಮಾಡಿದ್ದರು. ಇದಕ್ಕೆ ಪ್ರತಿಯಾಗಿ ಯಹೂದಿಗಳಿಗೆ ಪ್ರತ್ಯೇಕ ರಾಷ್ಟ್ರವನ್ನು ಕಲ್ಪಿಸುವ ಭರವಸೆ ನೀಡಿತ್ತು ಬ್ರಿಟನ್.

ಎರಡನೇ ಮಹಾಯುದ್ಧ ಮುಗಿದ ನಂತರ 1948 ರಲ್ಲಿ ಇಂದಿನ ಪ್ಯಾಲೇಸ್ತಿನ್ ಪ್ರದೇಶದಲ್ಲಿ ಯಹೂದಿಗಳಿಗೆ ಇಸ್ರೇಲ್ ದೇಶದ ಸ್ಥಾಪನೆಗೆ ಬ್ರಿಟನ್, ಅಮೆರಿಕ ಮುಂತಾದ ರಾಷ್ಟ್ರಗಳು ಅವಕಾಶ ಕಲ್ಪಿಸಿದ್ದು, ಅಲ್ಲಿನ ಮೂಲ ನಿವಾಸಿಗಳಾದ ಪ್ಯಾಲೇಸ್ತಿನ್ ನಾಗರಿಕರ ಆಕ್ರೋಶಕ್ಕೆ ಕಾರಣವಾಗಿದ್ದು ಯುದ್ಧದ ರೂಪ ತಾಳಿತು.

ಸೈನ್ಯ ಬಲದಲ್ಲಿ, ಆಧುನಿಕ ಆಯುಧಗಳಲ್ಲಿ ತುಂಬಾ ಮುಂದಿರುವ ಇಸ್ರೇಲ್ ದೇಶ ಎಲ್ಲಾ ಯುದ್ಧಗಳಲ್ಲಿ ಜಯಗಳಿಸಿತು. ಇತ್ತೀಚೆಗೆ ಗಾಜಾ ಪಟ್ಟಿಯಿಂದ ಪ್ಯಾಲೆಸ್ತೀನ್ 17 ನಿಮಿಷಗಳಲ್ಲಿ 5000 ರಾಕೆಟ್‌ಗಳನ್ನು ಇಸ್ರೇಲ್ ಮೇಲೆ ಪ್ರಯೋಗಿಸಿ ಅಪಾರ ಪ್ರಮಾಣದ ಸಾವು, ಆಸ್ತಿಪಾಸ್ತಿ ನಾಶವಾಗಿದ್ದು, ಅಂದಾಜಿನ ಪ್ರಕಾರ ಸುಮಾರು 700 ಇಸ್ರೇಲ್ ನಾಗರಿಕರು ಹತ್ಯೆಯಾಗಿದ್ದು, ಇದಕ್ಕೆ ಪ್ರತಿಯಾಗಿ ಇಸ್ರೇಲ್ ಕೂಡ ಗಾಜಾ ಪ್ರದೇಶದ ಮೇಲೆ ವೈಮಾನಿಕ ದಾಳಿ ನಡೆಸಿದ್ದು, ಗಾಜಾದಲ್ಲಿ ಸಾವಿನ ಪ್ರಮಾಣ ಏರಿಕೆಯಾಗಿದೆ.

ಈ ವಿವಾದಕ್ಕೆ ಸಂಬಂಧಿಸಿದಂತೆ ಇಸ್ರೇಲ್ ದೇಶಕ್ಕೆ ಅಮೆರಿಕ, ಭಾರತ, ಫ್ರಾನ್ಸ್ ಮುಂತಾದ ಐರೋಪ್ಯ ದೇಶಗಳು ಬೆಂಬಲ ವ್ಯಕ್ತಪಡಿಸಿವೆ. ಪ್ಯಾಲೆಸ್ತೀನ್‌ಗೆ ಇರಾನ್, ಲೆಬನಾನ್, ಯೆಮನ್, ಟರ್ಕಿ, ಪಾಕಿಸ್ತಾನ ದೇಶಗಳು ಬೆಂಬಲ ವ್ಯಕ್ತಪಡಿಸಿದ್ದು ಶೀಘ್ರವಾಗಿ ವಿಶ್ವಸಂಸ್ಥೆ ಮಧ್ಯಪ್ರವೇಶ ಮಾಡಿ ಯುದ್ಧವನ್ನು ತಡೆಯದಿದ್ದರೆ ಇದು ಮುಂದೆ ಮೂರನೇ ಮಹಾಯುದ್ಧಕ್ಕೆ ಕಾರಣವಾಗುವ ಎಲ್ಲಾ ಲಕ್ಷಣಗಳು ಕಾಣುತ್ತಿದೆ.

ವಿಶ್ವಸಂಸ್ಥೆ ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ನಡುವಿನ ವಿವಾದವನ್ನು ಎರಡು ಪಕ್ಷಗಳಿಂದ ಆಲಿಸಿ ಅದಕ್ಕೆ ಶಾಶ್ವತ ಪರಿಹಾರ ನೀಡುವ ಮೂಲಕ ಮಧ್ಯಪ್ರಾಚ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕೆಂದು ವಿಶ್ವಸಂಸ್ಥೆಯನ್ನು ಆಗ್ರಹಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಜಗತ್ತೇಕೆ ಹೀಗಾಗುತ್ತಿದೆ?

ಜಗತ್ತು ಶಾಂತಿಮಯವಾಗಿರಬೇಕೆಂಬುದು ಎಲ್ಲರ ಆಶೆ, ಅಪೇಕ್ಷೆ ಶಾಂತಿಯಿಂದ ಬಾಳಿದರೆ ಎಲ್ಲರೂ ನಿರಾತಂಕವಾಗಿ ಬದುಕಬಹುದು. ಶಾಂತಿ ಇದ್ದಾಗಲೇ ಪ್ರಗತಿ, ಅಭಿವೃದ್ಧಿ, ಏಳಿಗೆ ಸಾಧ್ಯ ಎನ್ನುವುದು ಸರ್ವರಿಗೂ ತಿಳಿದಿದೆ. ಋಷಿಗಳು ಪ್ರತಿಯೊಂದು ಮಾತಿನ ಕೊನೆಯಲ್ಲಿ 'ಓಂ ಶಾಂತಿಃ, ಶಾಂತಿಃ, ಶಾಂತಿಃ' ಎಂದು ಹೇಳಿ ಆಧ್ಯಾತ್ಮಿಕ, ಆಧಿ ಭೌತಿಕ ಮತ್ತು ಆಧಿ ದೈವಿಕ ವಿಪತ್ತುಗಳು ದೂರವಾಗಲೆಂದು ಹೇಳಿದರು. ಯಾವ ಮತಾಚಾರ್ಯರೂ, ಯಾವ ಗ್ರಂಥಗಳೂ 'ನೀವು ಹೊಡೆದಾಡಿಕೊಂಡು ಸಾಯಿರಿ' ಎಂದು ಹೇಳಲಿಲ್ಲ. ಯಾವ ದೇವರನ್ನು ಪೂಜಿಸಿ ದರೂ ಯಾವ ಭಾಷೆಯನ್ನು ಆಡಿದರೂ ಎಲ್ಲರಲ್ಲಿ ಸ್ನೇಹ ಇರಲಿ, ಯಾರಲ್ಲೂ ದ್ವೇಷ ವನ್ನು ಬೆಳೆಸಿಕೊಳ್ಳಬೇಡಿ ಎಂಬುದೇ ದೊಡ್ಡವರೆಲ್ಲರ ಉಪದೇಶ.

ಆದರೂ ಈ ಪ್ರಪಂಚದಲ್ಲಿ ಪರಸ್ಪರ ವೈರ ಏಕೆ ಹುಟ್ಟಿ ಬೆಳೆಯುತ್ತಿದೆ? ಆಹಾರ, ವಿದ್ಯಾಭ್ಯಾಸ, ಆರೋಗ್ಯ ಮುಂತಾದ ಅತ್ಯಂತ ಆವಶ್ಯಕ ವಿಷಯಗಳಿಗೆ ವೆಚ್ಚ ಮಾಡುತ್ತಿರುವ ಹಣಕ್ಕಿಂತ ಹೆಚ್ಚು ಹಣವನ್ನು ಜಗತ್ತಿನ ಪ್ರತಿಯೊಂದು ರಾಷ್ಟ್ರವೂ ಸೇನೆಗಳನ್ನು ಬಲಿಷ್ಠಗೊಳಿಸಲು ಮತ್ತು ಆಯುಧಗಳನ್ನು ಉತ್ಪಾದಿಸಲು ಏಕೆ ಖರ್ಚು ಮಾಡುತ್ತಿವೆ? ಈಗಾಗಲೇ ನಿರ್ಮಿಸಿರುವ ಅಣ್ವಸ್ತ್ರಗಳು, ಸಮಸ್ತ ಭೂಮಿಯನ್ನು ಒಂದು ಬಾರಿ ಮಾತ್ರವಲ್ಲ, ಹತ್ತು ಬಾರಿ ಸುಟ್ಟು ಇಲ್ಲಿ ಯಾವ ಜೀವವೂ ಉಳಿಯದಂತೆ ಮಾಡಲು ಶಕ್ತವಾಗಿವೆಯೆಂದು ಬಲ್ಲವರು ಹೇಳಿದ್ದಾರೆ. ಆದರೂ ಆ ಅಣ್ವಸ್ತ್ರಗಳಿಗಿಂತ ಹೆಚ್ಚು ವಿನಾಶ ಶಕ್ತಿಯುಳ್ಳ ಹೊಸ ಅಸ್ತ್ರಗಳನ್ನು ಕಂಡು ಹಿಡಿಯಲು ದೊಡ್ಡ ರಾಷ್ಟ್ರಗಳು ಯತ್ನಿಸುತ್ತಿರುವುದೇಕೆ? ಇಂಥ ಅಸ್ತ್ರಗಳು ಇತರ ದೇಶಗಳಿಗೆ ಮಾಡುವಷ್ಟು ಹಾನಿಯನ್ನು ತಮ್ಮ ದೇಶಕ್ಕೂ ಮಾಡಬಹುದು ಎಂಬುದನ್ನು ತಿಳಿದುಕೊಂಡಿದ್ದರೂ, ಅವುಗಳನ್ನು ಮಾಡುವ ಹಠ ಏಕೆ? ನಾವೂ ಬದುಕೋಣ, ಬೇರೆಯವರಿಗೂ ಚೆನ್ನಾಗಿ ಬದುಕಲು ಅವಕಾಶವನ್ನು ಕೊಡೋಣ ಎಂಬ ಬುದ್ಧಿ ಬಲಿಷ್ಠರಿಗೆ ಏಕೆ ಬರುತ್ತಿಲ್ಲ? ಯಾವುದೋ ಒಂದು ನೆವವನ್ನು ಇಟ್ಟುಕೊಂಡು ರಾಷ್ಟ್ರಗಳು ಏಕೆ ಯುದ್ಧಗಳನ್ನು ಆರಂಭಿಸುತ್ತಿವೆ? ಏಕೆ ಮುಗ್ಧ ಜನರು ನೋವು–ಸಾವುಗಳನ್ನು ಅನುಭವಿಸುತ್ತಿದ್ದಾರೆ? ಏಕೆ ಸುಂದರ ತೋಟವಾಗಬಹುದಾದ ಭೂಮಿ ಸುಡುಗಾಡಾಗುತ್ತಿದೆ? ರಾಮಾಯಣದಲ್ಲಿ ಅಷ್ಟು ದೊಡ್ಡ ಘೋರ ಭಯಂಕರ ಯುದ್ಧ ಏಕಾಯಿತು? ಕಿಷ್ಕಿಂಧೆಯಲ್ಲಿದ್ದ ವಾನರರಿಗೂ ಲಂಕೆಯಲ್ಲಿದ್ದ ರಾಕ್ಷಸರಿಗೂ ಪರಸ್ಪರ ವೈರವಿರಲಿಲ್ಲ. ರಾಮ, ಲಕ್ಷ್ಮಣ ಕಾಡಿನಲ್ಲಿ ಹದಿನಾಲ್ಕು ವರ್ಷ ವಾಸ ಮಾಡಿ ಹೋಗಲು ಬಂದಿದ್ದರು. ಅಷ್ಟೆ ರಾವಣನ ವಾರ್ತೆಯನ್ನೇ ಅವರು ಕೇಳಿರಲಿಲ್ಲ. ಸೀತೆಯನ್ನು ಎತ್ತಿಕೊಂಡು ಹೋಗಬೇಕು, ಅವಳನ್ನು ತನ್ನ ಪ್ರೇಯಸಿಯನ್ನಾಗಿ ಮಾಡಿಕೊಳ್ಳಬೇಕು ಎಂಬ ರಾವಣನ ದುರಾಶೆ, ಎಷ್ಟು ಜನ ಬುದ್ಧಿ ಹೇಳಿದರೂ ಕೇಳೆನು ಎಂಬ ಅವರ ಹಠ ಯುದ್ಧಕ್ಕೆ ಕಾರಣವಾಯಿತು. ಒಬ್ಬ ದುಷ್ಟನ ಅಹಂಕಾರ ಸಾವಿರಾರು ಜನರ ನಾಶಕ್ಕೆ ಮೂಲವಾಯಿತು.

ಮಹಾಭಾರತದಲ್ಲೂ ದುರ್ಯೋಧನನ ದುರಾಶೆ, ದಾಯಾದಿಗಳ ಮೇಲಿನ ಮತ್ಸರ ಯುದ್ಧಕ್ಕೆ ಕಾರಣವಾಯಿತು. ಮಹಾಭಾರತ ಯುದ್ಧದಲ್ಲಿ ಭಾಗವಹಿಸಿದ್ದ ನೂರಾರು ರಾಜರಿಗೆ, ಸಾವಿರಾರು ಯೋಧರಿಗೆ ಪರಸ್ಪರ ಶತ್ರುತ್ವವಾಗಲೀ, ದ್ವೇಷವಾಗಲೀ ಇರಲಿಲ್ಲ. ಅವರು ಯಾರೂ ಆ ಯುದ್ಧದಲ್ಲಿ ಗಳಿಸಿಕೊಳ್ಳಬೇಕಾದುದಿರಲಿಲ್ಲ. ಆದರೂ ಎಲ್ಲರೂ ತಮ್ಮ ಪ್ರಾಣಗಳನ್ನು ಕಳೆದುಕೊಂಡರು. ಮಿತ್ರರನ್ನೂ, ಬಂಧುಗಳನ್ನೂ ಕೊಂದು ತಾವೂ ಸತ್ತು ಏನನ್ನು ಸಾಧಿಸಿದರು? ಎಷ್ಟು ಜನ ಸ್ತ್ರೀಯರು ಗಂಡಂದಿರನ್ನೂ, ಅಣ್ಣಂದಿರನ್ನೂ, ತಮ್ಮಂದಿರನ್ನೂ ಕಳೆದುಕೊಂಡು ದುಃಖವನ್ನು ಅನುಭವಿಸಿದರು? ಯಾವ ತಪ್ಪೂ ಇಲ್ಲದೆ ಅವರು ಅನುಭವಿಸಿದ ಶೋಕಕ್ಕೆ ಒಬ್ಬ ದುಷ್ಟ ವ್ಯಕ್ತಿಯ ದುರ್ಭಾವನೆ ಕಾರಣವಾಯಿತಲ್ಲವೆ?

ಪುರಾಣ ಕಾಲದಲ್ಲಿ ಮಾತ್ರವಲ್ಲ, ಐತಿಹಾಸಿಕ ಕಾಲದಲ್ಲೂ ನಡೆದ ದಾರುಣ ಯುದ್ಧಗಳಿಗೆ ಕಾರಣ ಯಾವನೋ ರಾಜನ ರಾಜ್ಯ ವಿಸ್ತರಣಾಕಾಂಕ್ಷೆ ತಾನೇ ಚಕ್ರವರ್ತಿ, ಉಳಿದ ಎಲ್ಲರೂ ತನಗೆ ಆಳಾಗಿ ಇರಬೇಕೆಂಬ ಗರ್ವದ ಬಯಕೆ ಯುದ್ಧಕ್ಕೆ ಕಾರಣ ಆಗಿರುವ ಸಂದರ್ಭಗಳೇ ಹೆಚ್ಚು. ಚದುರಂಗದ ಕಾಯಿಗಳಂತೆ ಸೈನಿಕರು ಹೋರಾಡಿ ಸಾಯುವುದು ಮಾತ್ರ. ಕೊಲ್ಲುವ ವನಿಗೂ ಕೊಲ್ಲಿಸಿಕೊಂಡವನಿಗೂ ವೈಯಕ್ತಿಕ ದ್ವೇಷ ತುಣುಕಿನಷ್ಟೂ ಇರುವುದಿಲ್ಲ. ಯಾರೋ ಮಾಡಿದ ತೀರ್ಮಾನದಿಂದ ಹೊಟ್ಟೆಪಾಡಿಗಾಗಿ ಸೈನಿಕರಾಗಿ ಸೇರಿಕೊಂಡವರು ಜೀವವನ್ನು ತೆತ್ತರು ಎಂಬುದನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಯಹೂದಿಗಳ ಮೇಲೆ ಹಿಟ್ಲರ ನಿಗಿದ್ದ ಹಗೆ ನಾನಾ ರೂಪಗಳನ್ನು ತಾಳಿ ಎರಡನೆಯ ಮಹಾಯುದ್ಧಕ್ಕೆ ಕಾರಣವಾಯಿತು. ಅವನ ಜೊತೆಗೆ ಇಟಲಿ, ಜಪಾನ್ ಸೇರಿಕೊಂಡವು. ಅದರಿಂದ ಇಡೀ ಮಾನವ ಕುಲ ಬವಣೆ ಪಡುವಂತಾಯಿತು. ಈಗ ಮತ್ತೆ ಯೆಹೂದಿಗಳಿಗೂ ಪ್ಯಾಲೆಸ್ಟಿನೀಯರಿಗೂ ಯುದ್ಧ ನಡೆಯುತ್ತಿದೆ. ಯದ್ಯಪಿ ನಾವು 'ಯುದ್ಧದಲ್ಲಿ ಇವರು ಗೆದ್ದರು, ಅವರು ಸೋತರು' ಎಂದು ಹೇಳುತ್ತೇವೆ. ಆದರೆ ವಾಸ್ತವದಲ್ಲಿ ಇಬ್ಬರೂ ಸೋತಿರುತ್ತಾರೆ. ಇಡೀ ಮನುಕುಲವೇ ಸೋತಿರುತ್ತದೆ. ಈ ಮಾತು ಅಣ್ವಸ್ತ್ರ ಯುಗದಲ್ಲಿ ಸತ್ಯಸ್ಯ ಸತ್ಯ. ಯುದ್ಧವಾದ ಮೇಲೂ ವೈರವು ಅಣಗುವುದಿಲ್ಲ. ಧಮ್ಮಪದದ ಎರಡು ಪದ್ಯಗಳನ್ನು ನಾವು ಇಲ್ಲಿ ಗಮನಿಸಬೇಕು.

ಅಕ್ಕೋಚ್ಛಿಮಂ ಅವಧಿ ಮಂ
ಅಜಿನಿ ಮಂ ಅಹಾಸಿ ಮೇ ।
ಯೇ ತಂ ಉಪನಯ್ಹಂತಿ
ವೇರಂ ತೇಸಂ ನ ಸಮ್ಮತಿ ॥

(ಅವನು ನನ್ನನ್ನು ಆಕ್ರೋಶದಿಂದ ಹೆದರಿಸಿದನು, ನನಗೆ ಹೊಡೆದನು, ನನ್ನದ್ದನ್ನೆಲ್ಲ ಕಿತ್ತುಕೊಂಡು ಲೂಟಿ ಮಾಡಿದನು ಎಂದು ಚಿಂತಿಸುವವನ ವೈರವು ಎಂದೂ ಶಾಂತವಾಗುವುದಿಲ್ಲ.)

ನ ಹಿ ವೇರೇನ ವೇರಾನಿ
ಸಮ್ಮಂತೀಧ ಕುದಾಚನಂ ।
ಅವೇರೇನ ಚ ಸಮ್ಮಂತಿ
ಏಸ ಧಮ್ಮೋ ಸನಂತನೋ ॥

(ವೈರದಿಂದ ವೈರಗಳು ಎಂದೂ ಶಾಂತ ವಾಗುವುದಿಲ್ಲ. ಅವೈರದಿಂದಲೇ ಎಲ್ಲ ವೈರಗಳೂ ಶಾಂತವಾಗುತ್ತವೆ. ಇದೇ ಸನಾತನ ಧರ್ಮ.).

ಬೆಂಕಿಗೆ ಬೆಂಕಿ ಶಾಮಕವಲ್ಲ. ಬೆಂಕಿಯಿಂದ ಬೆಂಕಿಯನ್ನು ಆರಿಸಲು ಸಾಧ್ಯವಾಗದು. ಬೆಂಕಿಗೆ ವಿರುದ್ಧವಾದ ಗುಣವನ್ನು ಹೊಂದಿರುವ ನೀರಿನಿಂದಲೇ ಬೆಂಕಿಯನ್ನು ಆರಿಸಬೇಕು, ಅದರ ಕಾವನ್ನು ಅಡಗಿಸಬೇಕು. ವೈರವನ್ನು ವೈರದಿಂದ ಅಳಿಸಲಾಗದು. ತಾತ್ಕಾಲಿಕವಾಗಿ ವೈರಿಯನ್ನು ಪಾಶವೀ ಶಕ್ತಿಯಿಂದ ಸೋಲಿಸಿದರೂ, ಕೆಳಗೆ ದಬ್ಬಿದರೂ ಅವನ ಮನಸ್ಸಿನಲ್ಲಿ ವೈರ ಉಳಿದುಕೊಂಡಿರುತ್ತದೆ. ಆ ವೈರಿಯನ್ನು ಕೊಂದರೂ ಅವನ ಸಂತತಿಯಲ್ಲಿ ನಮ್ಮ ಮೇಲೆ ವೈರ ಇದ್ದೇ ಇರುತ್ತದೆ. ಆದ್ದರಿಂದ ವೈರವನ್ನು ಗೆಲ್ಲಲು ಸ್ನೇಹವೇ ಮಾರ್ಗ. ಅದು ವೈರವನ್ನು ಅಡಗಿಸಿ ಸ್ನೇಹವೇ ಚಿಗುರುವಂತೆ ಮಾಡಿ ಬೆಳೆಸುತ್ತದೆ. ಇದನ್ನು ಪತಂಜಲಿ ಮಹರ್ಷಿಯೂ ಒಂದು ಯೋಗ ಸೂತ್ರದಲ್ಲಿ ನಿರೂಪಿಸಿದ್ದಾನೆ –

ಮೈತ್ರೀಕರುಣಾ ಮುದಿತೋಪೇಕ್ಷಾಣಾಂ
ಸುಖದುಃಖ ಪುಣ್ಯಾಪುಣ್ಯ
ವಿಷಯಾಣಾಂ ಭಾವನಾತಃ ಚಿತ್ತ
ಪ್ರಸಾದನಮ್ ॥

ಪ್ರಪಂಚದಲ್ಲಿ ಸುಖಿಗಳು ವಿರಳ. ಪೂರ್ವ ಜನ್ಮ ಪುಣ್ಯದಿಂದ ಹಲವರು ಪೂರ್ಣ ಸುಖಿಗಳಾಗಿರಬಹುದು. ಅಂತಹವರಲ್ಲಿ ಮೈತ್ರಿಯನ್ನು, ಎಂದರೆ ಸ್ನೇಹವನ್ನು ಬೆಳೆಸಿಕೊಳ್ಳಬೇಕು. ದುಃಖಿಗಳು ಎಲ್ಲೆಲ್ಲೂ ಇದ್ದಾರೆ. ಆಕಾಶದಲ್ಲಿ ಕತ್ತಲೆ ವ್ಯಾಪಿಸಿದಂತೆ ಪ್ರಪಂಚದಲ್ಲಿ ದುಃಖ ತುಂಬಿದೆ. ಅವರಲ್ಲಿ ಕರುಣೆಯನ್ನು ಹೊಂದಿರಬೇಕು. ಇನ್ನು ಕೆಲವರು ಪುಣ್ಯವಂತರೂ ಇದ್ದಾರೆ. ಪೂರ್ವಜನ್ಮದಲ್ಲಿ ಅವರು ಮಾಡಿದ ಪುಣ್ಯದಿಂದ ಈಗ ಅವರು ಬುದ್ಧಿಯಲ್ಲಿ, ಪ್ರತಿಭೆಯಲ್ಲಿ, ರೂಪದಲ್ಲಿ, ಶಕ್ತಿಯಲ್ಲಿ ಉತ್ಕೃಷ್ಟರಾಗಿದ್ದಾರೆ. ಲೋಕಕ್ಕೆಲ್ಲ ಒಳ್ಳೆಯದನ್ನು ಮಾಡಿ ಇನ್ನೂ ಹೆಚ್ಚಿನ ಪುಣ್ಯವನ್ನು ಗಳಿಸುತ್ತಿದ್ದಾರೆ. ಅಂತಹವರನ್ನು ನೋಡಿ ಅವುಗಳಿಲ್ಲದ ನಾವು ಹೊಟ್ಟೆಕಿಚ್ಚು ಪಡದೆ ಹರ್ಷ ಪಡಬೇಕು. ಇದನ್ನೇ ಪತಂಜಲಿ ಮುದಿತಾ ಎಂದು ಕರೆದಿದ್ದಾನೆ. ಇದರ ವಿರುದ್ಧವಾಗಿ ಕೆಲವರು ಪಾಪವನ್ನೇ ಮಾಡಲು ಕಂಕಣ ಬದ್ಧರಾಗಿರುವವರೂ ಇದ್ದಾರೆ. ಉಗ್ರಗಾಮಿಗಳು, ಭಯೋತ್ಪಾದಕರು, ಸಮಾಜ ದ್ರೋಹಿಗಳು ಇತ್ಯಾದಿ. ಅವರಲ್ಲೂ ನಾವು ವೈರವನ್ನು ಸಾಧಿಸ ಬಾರದು ಎಂದು ಪತಂಜಲಿ ಹೇಳಿದ್ದಾನೆ. ಅವರಲ್ಲಿ ಉಪೇಕ್ಷೆಯೇ ಸಾಕು. ಇಂತಹ ಭಾವನೆ ಯನ್ನು ಎಲ್ಲ ಮನುಷ್ಯರೂ ಬೆಳೆಸಿಕೊಂಡರೆ, ಜಗತ್ತಿನಲ್ಲಿ ಯುದ್ಧದ ಪ್ರಸಂಗವೇ ಇರುವುದಿಲ್ಲ. ವಿನಾಶದ ಬದಲಾಗಿ ಎಲ್ಲ ಮಾನವರೂ ಉತ್ಕರ್ಷವನ್ನು ಸಾಧಿಸಬಲ್ಲರೆನಿಸುತ್ತದೆ.

ಭೂಮಿಯು ಎಲ್ಲ ಮಾನವರಿಗೂ, ಪ್ರಾಣಿಗಳಿಗೂ, ಪಕ್ಷಿಗಳಿಗೂ, ಕೀಟಗಳಿಗೂ, ಅಣುಜೀವಿಗಳಿಗೂ ಆಶ್ರಯವಾಗಿದೆ. ಭೂಮಿಯನ್ನು ಬಿಟ್ಟು ಬೇರೆ ಯಾವ ಗ್ರಹದಲ್ಲೂ ಜೀವೋತ್ಪತ್ತಿಯಾಗಿ ಇಷ್ಟೊಂದು ಬೌದ್ಧಿಕ ಪ್ರಗತಿಯನ್ನು ಸಾಧಿಸಿರುವುದರ ಬಗೆಗೆ ಯಾವ ಖಚಿತ ಸುಳಿವೂ ಪ್ರಮಾಣವೂ ಇದುವರೆಗೆ ಯಾರಿಗೂ ಸಿಕ್ಕಿಲ್ಲ. ಭೂಮಿಯ ಮೇಲೆ ಆಗಿರುವ ವಿಕಾಸವು ಲಕ್ಷಾಂತರ ವರ್ಷಗಳನ್ನು ತೆಗೆದುಕೊಂಡಿರಬಹುದು. ಯಾವುದೋ ಅಲ್ಪ ಕಾರಣಕ್ಕಾಗಿ ಕ್ಷುದ್ರ ಬುದ್ಧಿಯ ಜನರು ಯುದ್ಧವನ್ನು ಆರಂಭಿಸಿ ಸಕಲ ಮಾನವ ಕುಲವನ್ನೇ ಅಳಿಸಿ ಹಾಕಬಹುದು, ಭೂಮಿಯು ನಿರ್ಜೀವವಾಗುವಂತೆ ಮಾಡಬಹುದು ಎಂಬ ಭೀತಿ ವಿವೇಕಿಗಳನ್ನು ಕಾಡುತ್ತಿದೆ. ವಿಜ್ಞಾನದ ಪ್ರಗತಿ ಅಣ್ವಸ್ತ್ರಗಳ ಅನ್ವೇಷಣೆಯನ್ನು ಮಾಡಿ ಸಮಸ್ತ ಪ್ರಾಣಿವರ್ಗವನ್ನಷ್ಟೇ ಅಲ್ಲ, ಎಲ್ಲ ಸಸ್ಯ ಸಂಕುಲವನ್ನೂ ಇಲ್ಲವಾಗಿಸುವ ಸಂಭವ ಎದುರಾಗಿದೆ.

ಸರ್ವೇ ಭವಂತು ಸುಖಿನಃ ಸರ್ವೇ ಸಂತು
ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿದ್ ದುಃಖಭಾಗ್ ಭವೇತ್

"ಎಲ್ಲರೂ ಸುಖಿಗಳಾಗಿರಲಿ, ಎಲ್ಲರೂ ಆರೋಗ್ಯವಂತರಾಗಲಿ, ಎಲ್ಲರೂ ಶುಭಗಳನ್ನು ಕಾಣಲಿ, ಯಾರೂ ದುಃಖಕ್ಕೆ ಈಡಾಗದಿರಲಿ" ಎಂಬ ಪ್ರಾರ್ಥನೆ ಅರ್ಥವತ್ತಾಗಲಿ ಎಂಬುದು ನಮ್ಮ ಆಶಯ. ನಾವು ಮಾತ್ರ ಸುಖಿಗಳಾಗಿರೋಣ ಎಂಬುದು ತಪ್ಪು. ಎಲ್ಲರೂ ಎಂದರೆ ಮನುಷ್ಯರು ಮಾತ್ರ ಅಲ್ಲ, ಎಲ್ಲ ಜೀವಿಗಳೂ ಕ್ಷೇಮದಿಂದಿರಲಿ ಎಂಬುದೇ ಅಲ್ಲಿ ವಿವಕ್ಷಿತ.

ಸಿಬ್ಬಂದಿಯ ಸಮನ್ವಯ ಕೊರತೆ; ರಾಜಮಾರ್ಗದಲ್ಲಿ ಕಸದ ಮೇಲೆ ಕಲಾತಂಡಗಳ ಪ್ರದರ್ಶನ

ಮೈಸೂರು, ಅ.24(ಎಸ್‌ಪಿಎನ್)– ಮೆರವಣಿಗೆ ಸಾಗುವ ಸಂದರ್ಭದಲ್ಲಿ ಆನೆ ಲದ್ದಿ ಹಾಗೂ ಇತರೆ ತ್ಯಾಜ್ಯವನ್ನು ಸ್ವಚ್ಛಗೊಳಿಸಲು ಪೊಲೀಸರು ಅಡ್ಡಿಪಡಿಸುತ್ತಿದ್ದಾರೆ ಎಂಬ ಆರೋಪ ಮೇಲೆ ಪಾಲಿಕೆ ಸಿಬ್ಬಂದಿ ಮೆರವಣಿಗೆ ಸಾಗುವ ಮಾರ್ಗದಲ್ಲಿ ಸ್ವಚ್ಛತಾ ಕಾರ್ಯ ನಿಲ್ಲಿಸಿ, ದಸರಾ ಉಪ ಸಮಿತಿಗೆ ಬಿಸಿ ಮುಟ್ಟಿಸಿದ್ದಾರೆ.

ಮೆರವಣಿಗೆ ಮಾರ್ಗದಲ್ಲಿ ಸ್ವಚ್ಛತೆಗೆ ನಿಯೋಜನೆಗೊಳಿಸಿದ್ದ ಸಿಬ್ಬಂದಿಗೆ, ಪೊಲೀಸ್ ಹಾಗೂ ಭದ್ರತಾ ಸಿಬ್ಬಂದಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅಲ್ಲದೆ, ಜಂಬೂಸವಾರಿ ಹಾಗೂ ಜಾನಪದ ತಂಡ, ಸ್ತಬ್ಧಚಿತ್ರ ಸಾಗುವ ಸಂದರ್ಭದಲ್ಲಿ ಪದೇಪದೆ ಬಂದು ಸ್ವಚ್ಛತೆ ಕಾರ್ಯ ಮಾಡದಂತೆ ಪೊಲೀಸ್ ಅಧಿಕಾರಿಗಳು ಸೂಚಿಸಿದ್ದಾರಂತೆ. ಹಾಗಾಗಿ ಮೆರವಣಿಗೆ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿಯ ಗುರುತಿನ ಚೀಟಿ ವಶಕ್ಕೆ ಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಪೊಲೀಸರೇ ಸ್ವಚ್ಛತಾ ಕಾರ್ಯಕ್ಕೆ ಅಡ್ಡಿಪಡಿಸಿರುವುದರಿಂದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಿಂದ ಬನ್ನಿಮಂಟಪದವರೆಗೆ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ತ್ಯಾಜ್ಯ ಇದ್ದರೂ ತೆಗೆಯದೇ ನಿಯೋಜನೆಗೊಂಡಿದ್ದ ಜಾಗದಲ್ಲಿ ಕುಳಿತು ಮೆರವಣಿಗೆ ವೀಕ್ಷಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗ, ಚಾಮರಾಜ ಒಡೆಯರ್ ವೃತ್ತ ಕೆ.ಆರ್.ವೃತ್ತ, ನ್ಯೂ ಸಂಯ್ಯಾಜಿರಾವ್ ರಸ್ತೆಯ ದೇವರಾಜ ಮಾರುಕಟ್ಟೆ ಸಮೀಪ,



ಕೆ.ಆರ್.ಆಸ್ಪತ್ರೆ ಮುಂಭಾಗ, ಸರ್.ಎಂ. ವಿಶ್ವೇಶ್ವರಯ್ಯ ವೃತ್ತ, ಪಂಚಮುಖಿ ಗಣಪತಿ ದೇವಸ್ಥಾನ ಸಮೀಪ, ಸುಭಾಷ್ ಚಂದ್ರಬೋಸ್ ವೃತ್ತ, ತಿಲಕನಗರದ ಕಿವುಡ ಮತ್ತ ಮೂಗರ ಶಾಲೆ, ಹೈವೇ ವೃತ್ತ ಸೇರಿದಂತೆ ಜಂಜೂಸವಾರಿ ಕೊನೆಗೊಳ್ಳುವ ತನಕ ಅಲ್ಲಲ್ಲಿ ಆನೆ ಲದ್ದಿ, ಪ್ಲಾಸ್ಟಿಕ್ ಬಾಟೆಲ್ ಸೇರಿದಂತೆ ಇತರೆ ತ್ಯಾಜ್ಯಗಳು ಚೆಲ್ಲಾಪಿಲ್ಲಿಯಾಗಿ ಬಿದ್ದು, ಜಂಬೂಸವಾರಿ ವೀಕ್ಷಣೆಗೆ ಬಂದಿದ್ದ ಪ್ರೇಕ್ಷಕರ ಬೇಸರಕ್ಕೂ ಕಾರಣವಾಯಿತು.

ನಗರ ಪಾಲಿಕೆ ಪರಿಸರ ಇಂಜಿನಿಯರ್‌ಯೊಬ್ಬರು ಮಾಧ್ಯಮಗಳಿಗೆ ಮಾಹಿತಿ ನೀಡಿ, ಚಾಮರಾಜ ಒಡೆಯರ್ ವೃತ್ತದಲ್ಲಿ ಸ್ವಚ್ಛತಾ ಸಿಬ್ಬಂದಿ ಸೇರಿದಂತೆ ಪಾಲಿಕೆ ಸಿಬ್ಬಂದಿಗಳನ್ನು ಮೆರವಣಿಗೆಗಳ ಮಾರ್ಗದಲ್ಲಿ ನಿಂತು ಸ್ವಚ್ಛತೆಯ ಕುರಿತು ವೀಕ್ಷಿಸಲು ಬಿಡುತ್ತಿಲ್ಲ. ನಮ್ಮನ್ನು ವೀಕ್ಷಕರ ಗ್ಯಾಲರಿಗೆ ಬಲವಂತವಾಗಿ ಎಳೆದು ತಂದು ಬಿಡುತ್ತಿದ್ದಾರೆ. ಅದರಲ್ಲೂ ಈ ವೃತ್ತಕ್ಕೆ ಭದ್ರತಾ ನಿರ್ವಹಣೆಗೆ ನಿಯೋಜನೆಗೊಂಡಿರುವ ಹಿರಿಯ ಅಧಿಕಾರಿ ಜೆ.ಲೋಕೇಶ್ ಎಂಬುವರು ಸುಖಾಸುಮ್ಮನೆ ಪಾಲಿಕೆ ಸಿಬ್ಬಂದಿಗೆ ಸೊಂಟ ಕೆಳಗಿನ ಭಾಷೆ ಪ್ರಯೋಗಿಸಿ,

> ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ, ವಿಚಾರ ತಿಳಿದುಕೊಂಡು ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುತ್ತೇನೆ.
> – ಅಸಾದ್ ಉರ್ ರೆಹಮಾನ್ ಷರೀಫ್, ಆಯುಕ್ತರು,



ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ. ಹಾಗಾಗಿ ಮೆರವಣಿಗೆ ಮಾರ್ಗದಲ್ಲಿ ಬಿದ್ದಿರುವ ಆನೆ ಲದ್ದಿ, ಮೆರವಣಿಗೆ ವೀಕ್ಷಿಸಲು ಬಂದಿರುವವರು ಕುಡಿದು ಬಿಸಾಡಿರುವ ಪ್ಲಾಸ್ಟಿಕ್ ಶೇಖರಣೆ ಮಾಡುವುದೇ ಹೇಗೆ? ಈ ತ್ಯಾಜ್ಯ ಗಾಳಿ ಬಂದಾಗ ಮೆರವಣಿಗೆ ವೇಳೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದೆ. ಪೊಲೀಸರು ನಮಗೆ ಸ್ವಚ್ಛತೆ ಮಾಡುವಂತೆ ಸೂಚಿಸಿದರೆ ಮಾತ್ರ ಮೆರವಣಿಗೆಯಲ್ಲಿರುವ ತ್ಯಾಜ್ಯವನ್ನು ತೆಗೆಯುತ್ತೇವೆ. ಇಲ್ಲದಿದ್ದರೆ ಇಲ್ಲ ಎಂದು ಮಾಧ್ಯಮಗಳಿಗೆ ತಿಳಿಸಿದರು.

ಬಾಂಗ್ಲಾ ವಿರುದ್ಧ ದಕ್ಷಿಣ ಆಫ್ರಿಕಾಕ್ಕೆ 149 ರನ್ ಜಯ



ಮುಂಬೈ, ಅ.24– ಕ್ವಿಂಟನ್ ಡಿಕಾಕ್ ಅವರ ಭರ್ಜರಿ ಶತಕದ ನೆರವಿನಿಂದ ದಕ್ಷಿಣ ಆಫ್ರಿಕಾ ಬಾಂಗ್ಲಾದೇಶದ ವಿರುದ್ಧ 149 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಅಂಕಪಟ್ಟಿಯಲ್ಲಿ ಆಡಿರುವ 5 ಪಂದ್ಯಗಳಲ್ಲಿ 4ರಲ್ಲಿ ಗೆಲುವು ಸಾಧಿಸಿ ಒಂದರಲ್ಲಿ ಸೋಲು ಅನುಭವಿಸಿ 8 ಅಂಕಗಳೊಂದಿಗೆ 2ನೇ ಸ್ಥಾನಕ್ಕೇರಿದೆ.

ಇಲ್ಲಿನ ವಾಂಖೆಡೆ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ನಿಗದಿತ 50 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 382 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರೀಜಾ ಹೆಂಡ್ರಿಕ್ಸ್ 12 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ನಂತರ ಬಂದ ವ್ಯಾನ್ ಡೆರ್ ಡಸ್ಸೆನ್ 1 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ಕ್ವಿಂಟನ್ ಡಿಕಾಕ್ ಹಾಗೂ ಏಡನ್ ಮಾರ್ಕ್ರಾಮ್ 3ನೇ ವಿಕೆಟ್‌ಗೆ 131 ರನ್ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಮಾರ್ಕ್ರಾಮ್ 60 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ಕ್ವಿಂಟನ್ ಡಿಕಾಕ್ ಶತಕ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ 140 ಎಸೆತಗಳಲ್ಲಿ 7 ಸಿಕ್ಸರ್, 15 ಬೌಂಡರಿ ಒಳಗೊಂಡ 174 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಹೆನ್ರಿಕ್ ಕ್ಲಾಸೆನ್ ಮಿಂಚಿನ ಬ್ಯಾಟಿಂಗ್ ನಡೆಸಿ ತಂಡದ ಬೃಹತ್ಕ್ಕೆ ಕಾರಣರಾದರು. 49 ಎಸೆತಗಳಲ್ಲಿ 8 ಸಿಕ್ಸ್, 2 ಬೌಂಡರಿ ಒಳಗೊಂಡ 90 ರನ್ ಗಳಿಸಿ ಔಟಾದರು. ಉಳಿದಂತೆ ಡೇವಿಡ್ ಮಿಲ್ಲರ್ 34 ರನ್ ಗಳಿಸಿದರು. ಬಾಂಗ್ಲಾದೇಶದ ಪರ ಹಸನ್ ಮಹಮೂದ್ 2, ಶಕೀಬ್ ಅಲ್ ಹಸನ್, ಶೋರಿಫುಲ್ ಇಸ್ಲಾಂ ಹಾಗೂ ಮೆಹದಿ ಹಸನ್ ಮಿರಾಜ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ದಕ್ಷಿಣ ಆಫ್ರಿಕಾ ನೀಡಿದ 383 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಬಾಂಗ್ಲಾದೇಶ 46.4 ಓವರ್‌ಗಳಲ್ಲಿ 233 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಮಹಮ್ಮದುಲ್ಲಾ 111, ಲಿಟನ್ ದಾಸ್ 22, ತಂಜಿದ್ ಹಸನ್ 12, ನಸುಮ್ ಅಹಮದ್ 19 ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಪರ ಜೆರಾಲ್ಡ್ ಕೋಟ್ಜಿ 3, ಮಾರ್ಕೊ ಜಾನ್ಸೆನ್, ಕಗಿಸೊ ರಬಡಾ, ಲಿಜಾಡ್ ವಿಲಿಯಮ್ಸ್ ತಲಾ 2 ಹಾಗೂ ಕೇಶವ್ ಮಹಾರಾಜ್ 1 ವಿಕೆಟ್ ಪಡೆದು. ದಕ್ಷಿಣಾ ಆಫ್ರಿಕಾ ಪರ ಕ್ವಿಂಟನ್ ಡಿಕಾಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.


ಹರ್ಷವರ್ಧನ್‌ಗೆ ಮೇಯರ್ ಕಪ್

ಮೈಸೂರು ದಸರಾ–2023 ಉಪಸಮಿತಿ ವತಿಯಿಂದ ನಡೆದ ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಅಶೋಕಪುರಂನ ದೊಡ್ಡ ಗರಡಿಯ ಪೈಲ್ವಾನ್ ಹರ್ಷವರ್ಧನ್ (ಸಮರ್ಥ್) ಈ ಬಾರಿಯ ಮೇಯರ್ ಕಪ್ ಅನ್ನು ಪಡೆದುಕೊಂಡರು. ಪೈಲ್ವಾನ್ ಅಭಿಷೇಕ್ ಅವರನ್ನು ಚಿತ್ರದಲ್ಲಿ ಕಾಣಬಹುದು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com









'ಶಕ್ತಿ'ಯಿಂದ ಮೈಸೂರು ದಸರಾಗೆ ಜನವೋ ಜನ

10 ಲಕ್ಷ ಜನರಿಂದ ದಸರಾ ವೀಕ್ಷಣೆ

- ನಂದಿ ಧ್ವಜ ಪೂಜೆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ
- ಸ್ತಬ್ಧಚಿತ್ರದ ಮೂಲಕ ಪರಿಣಾಮಕಾರಿ ಜಾಗೃತಿ
- ದಸರಾ ಪ್ರಾಧಿಕಾರ ರಚನೆಯ ಚಿಂತನೆ ಇಲ್ಲ
- ಮಳೆಗಾಗಿ ದೇವರನ್ನು ಬೇಡಿದ್ದೇನೆ

ಮೈಸೂರು, ಅ.24(ಬಿಎಲ್‌ಯು)– ಶಕ್ತಿ ಯೋಜನೆಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ವ್ಯವಸ್ಥೆ ಇರುವ ಕಾರಣ ಈ ಬಾರಿ ಹೆಚ್ಚು ಜನರು ಮೈಸೂರು ದಸರಾ ಮಹೋತ್ಸವಕ್ಕೆ ಆಗಮಿಸಿದ್ದು, 10 ಲಕ್ಷಕ್ಕೂ ಅಧಿಕ ಜನರು ವೀಕ್ಷಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಂಕಿ ಅಂಶಗಳ ವಿವರ ನೀಡಿದರು. ಮೈಸೂರು ಅರಮನೆಯ ಬಲರಾಮ ದ್ವಾರದಲ್ಲಿ ಸಂಪ್ರದಾಯದಂತೆ ನಂದಿ ಧ್ವಜಕ್ಕೆ ಅಗ್ರಪೂಜೆ ಸಲ್ಲಿಸಿದ ನಂತರ ಮಾತನಾಡಿದ ಅವರು, ನಾಡಿನ ಜನರಿಗೆ ವಿಜಯದಶಮಿಯ ತುಂಬು ಹೃದಯದ ಶುಭಾಶಯಗಳನ್ನು ತಿಳಿಸಿದರು.

ಕರ್ನಾಟಕದ 31 ಜಿಲ್ಲೆಗಳಿಂದ ಜಾನಪದ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಗಳು ದಸರಾದಲ್ಲಿ ಭಾಗವಹಿಸಿ ಜನರನ್ನು ಆಕರ್ಷಿಸಿವೆ. ಹಲವು ಪರಿಣಾಮಕಾರಿ ವಿಚಾರಗಳ ಬಗ್ಗೆ ಜನರಿಗೆ ಈ ಮೂಲಕ ಜಾಗೃತಿ ಮೂಡಿಸಲಾಗಿದೆ. ಸರ್ಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ಸ್ತಬ್ಧಚಿತ್ರಗಳು ಕೂಡ ಜಂಬೂಸವಾರಿ ಮೆರವಣಿಗೆಯಲ್ಲಿ ಜನರನ್ನು ಅತ್ಯಾಕರ್ಷಿಸಲಿವೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು. ಈ ವರ್ಷ ಬರದ ಛಾಯೆ ಇರುವ ಕಾರಣ ಅದ್ದೂರಿಯಲ್ಲದ, ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಣೆ ಮಾಡಲಾಗಿದೆ. ದೇಶ–ವಿದೇಶದ ಜನರು ಉತ್ಸಾಹ ಹಾಗೂ ಸಂಭ್ರಮದಿಂದ ದಸರಾ ವೀಕ್ಷಿಸಿದ್ದಾರೆ. ಸುಮಾರು 10 ಲಕ್ಷ ಜನರು ದಸರಾ ವೀಕ್ಷಿಸಿದ್ದಾರೆ ಎಂದರು. ಮೈಸೂರು ದಸರಾ ಪ್ರಾಧಿಕಾರ ರಚನೆ ಮಾಡುವ ಬಗ್ಗೆ ಸರ್ಕಾರ ಇನ್ನೂ ಚಿಂತನೆ ನಡೆಸಿಲ್ಲ ಎಂದು ಇದೇ ವೇಳೆ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ವಿಜಯನಗರ ಸಾಮ್ರಾಜ್ಯದಲ್ಲಿದ್ದ ದಸರಾ ವೈಭವವನ್ನು ಮೈಸೂರು ಅರಸರು ಮುಂದುವರೆಸಿಕೊಂಡು ಬಂದಿದ್ದರು. ಈ ಮೊದಲು ಚಿನ್ನದ ಅಂಬಾರಿಯಲ್ಲಿ ರಾಜರು ಆಸೀನರಾಗಿರುತ್ತಿದ್ದರು. ಆದರೆ ಈಗ ರಾಜಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದಿರುವ ಕಾರಣ ಚಿನ್ನದ ಅಂಬಾರಿಯಲ್ಲಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಯನ್ನು ಪ್ರತಿಷ್ಠಾಪಿಸಿ ಪುಷ್ಪಾರ್ಚನೆ ಮಾಡುವ ಸಂಪ್ರದಾಯ ಪಾಲಿಸಿಕೊಂಡು ಬರಲಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದರು. ರಾಜ್ಯದಲ್ಲಿ ಬರಗಾಲ ಇರುವ ಕಾರಣ ಉತ್ತಮ ಮಳೆಯಾಗಿ ಬೆಳೆ ರೈತನ ಕೈ ಸೇರಲಿ ಎಂದು ನಾಡಿನ ಜನರ ಪರವಾಗಿ ದೇವರನ್ನು ಬೇಡಿಕೊಂಡಿದ್ದೇನೆ ಎಂದು ಹೇಳಿದರು. ಮೈಸೂರು ದಸರಾ ನಾಡಹಬ್ಬದ ಜೊತೆಗೆ ಜನರ ಹಬ್ಬ ಕೂಡ ಆಗಿದ್ದು, ಎಲ್ಲರೊಡನೆ ಸೇರಿ ಆಚರಿಸಲಾಗುತ್ತಿದೆ ಎಂದು ಸಿದ್ದರಾಮಯ್ಯ ತಿಳಿಸಿದರು. ಇದೇ ವೇಳೆ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೈಸೂರು ದಸರಾ ಅಂತಾರಾಷ್ಟ್ರೀಯ ಮಹೋತ್ಸವವಾಗಿದ್ದು, ನಾಡಿನ ಜನರಿಗೆ ಶಾಂತಿ, ನೆಮ್ಮದಿ ತರಲಿ ಎಂದು ಹಾರೈಸಿದರು.





ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಿದ ಅತ್ಯದ್ಭುತ 49 ಸ್ತಬ್ಧಚಿತ್ರಗಳು

■ಪ್ರತಿಯೊಂದು ಜಿಲ್ಲೆಯ ಮಹತ್ವ ಸಾರಿದ ಸಾಧನಗಳು ■13 ದೇವಾಲಯ, ಪಂಚ ಗ್ಯಾರಂಟಿ ಯೋಜನೆಗಳ ಸ್ತಬ್ಧಚಿತ್ರ

ಮೈಸೂರು,ಅ.24(ಎಂಟಿವೈ)- ಜಂಬೂ ಸವಾರಿ ಮೆರವಣಿಗೆಯಲ್ಲಿ ಒಂದೆಡೆ ಕಲಾತಂಡ ಗಳ ಮೆರಗು ಮೇಳೈಸಿದರೆ, ಮತ್ತೊಂದೆಡೆ ರಾಜ್ಯದ ಎಲ್ಲಾ 31 ಜಿಲ್ಲೆಗಳನ್ನು ಪ್ರತಿನಿಧಿಸುವ, ನಿಗಮ ಮಂಡಳಿ ಕಾರ್ಯವ್ಯಾಪ್ತಿ ಪರಿಚಯಿಸುವ 49 ಸ್ತಬ್ಧಚಿತ್ರಗಳು ಸಾಗಿ ಗಮನ ಸೆಳೆದವು.

ಪ್ರತಿವರ್ಷದಂತೆ ಈ ಬಾರಿಯೂ ಜಂಬೂ ಸವಾರಿ ಮೆರವಣಿಗೆ ಕಳೆಕಟ್ಟುವಂತೆ ಮಾಡಿದವು. ಈ ಬಾರಿ ಸಾಗಿದ 49 ಸ್ತಬ್ಧಚಿತ್ರಗಳಲ್ಲಿ, ಎಲ್ಲಾ ಜಿಲ್ಲೆಗಳಿಂದ 31, ಸ್ತಬ್ಧಚಿತ್ರ ಉಪ ಸಮಿತಿಯಿಂದ 2 ಹಾಗೂ ವಿವಿಧ ಇಲಾಖೆ ಹಾಗೂ ನಿಗಮ ಮಂಡಳಿಗಳಿಂದ 14 ಸ್ತಬ್ಧಚಿತ್ರಗಳು ರೂಪು ಗೊಂಡಿದ್ದವು. ಅದರೊಂದಿಗೆ ಆನೆಗಾಡಿಯ ಸ್ತಬ್ಧಚಿತ್ರವೂ ಸೇರಿದ್ದು, ಜಂಬೂಸವಾರಿ ಮೆರ ವಣಿಗೆಯ ಮೆರಗು ಹೆಚ್ಚಿಸಿದವು. 49 ಸ್ತಬ್ಧಚಿತ್ರ ಗಳಲ್ಲಿ 13 ಸ್ತಬ್ಧಚಿತ್ರಗಳು ವಿವಿಧ ದೇವಾಲಯ ಗಳ ಪ್ರತಿರೂಪವಾದರೆ, ಮೂರು ಸ್ತಬ್ಧಚಿತ್ರಗಳು ರಾಜ್ಯ ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳ ಅನಾವರಣಕ್ಕೆ ಸಂಬಂಧಿಸಿದಂತೆ ರೂಪಿಸಲಾಗಿತ್ತು. ಇದರಿಂದ ದಾರಿಯುದ್ದಕ್ಕೂ ನೆರೆದಿದ್ದ ಜನರನ್ನು ಸ್ತಬ್ಧಚಿತ್ರಗಳು ಮಂತ್ರಮುಗ್ಧರನ್ನಾಗಿಸಿದವು.

ದೇವಾಲಯಗಳ ಸ್ತಬ್ಧಚಿತ್ರ: ಜಂಬೂಸವಾರಿ ಮೆರವಣಿಗೆಯಲ್ಲಿ ಬಾಗಲಕೋಟೆ ಜಿ.ಪಂ ನಿರ್ಮಿಸಿದ್ದ ಬಾದಾಮಿ ಚಾಲುಕ್ಯರ ರಾಜವಂಶ ಹಾಗೂ ಶ್ರೀ ಬನಶಂಕರಿ ದೇವಾಲಯದ ಸ್ತಬ್ಧಚಿತ್ರ ಗಮನ ಸೆಳೆಯಿತು. ಶಕ್ತಿದೇವತೆಯ ಕ್ಷೇತ್ರಗಳಲ್ಲಿ ಒಂದಾಗಿರುವ ಬನಶಂಕರಿ ದೇವಾಲಯ ಜನ ರನ್ನು ಭಕ್ತಿಲೋಕದತ್ತ ಕೊಂಡೊಯ್ಯುವಂತಿತ್ತು. ಬಳ್ಳಾರಿ ಜಿ.ಪಂ ವತಿಯಿಂದ ಶ್ರೀ ಕುಮಾರಸ್ವಾಮಿ ದೇವಾಲಯ, ಪಾರ್ವತಿ ದೇವಿ ದೇವಾಲಯದ ಚಿತ್ರಣದೊಂದಿಗೆ ಕಸೂತಿ ಕಲೆ ನಾರಿಹಳ್ಳ ಅಣೆ ಕಟ್ಟು ಸ್ತಬ್ಧಚಿತ್ರದಲ್ಲಿ ದೇವಾಲಯಗಳೇ ಪ್ರಮುಖ ವಾಗಿ ಗಮನ ಸೆಳೆದವು. ಬೆಳಗಾವಿ ಜಿ.ಪಂನಿಂದ ಮಹಾಲಿಂಗೇಶ್ವರ ದೇವಾಲಯ, ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ, ಗೋಕಾಕ್ ಫಾಲ್ಸ್ ಸ್ತಬ್ಧಚಿತ್ರ ಸಾಗಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರತಿನಿಧಿಸಿದ್ದ ಸ್ತಬ್ಧಚಿತ್ರದಲ್ಲಿ ದಕ್ಷಿಣಕಾಶಿ ಶಿವಗಂಗೆ ದೇವಾಲಯವನ್ನು ಪ್ರತಿಬಿಂಬಿಸಲಾಗಿತ್ತು. ನೆರೆಯ ಚಾಮರಾಜನಗರ ಜಿಲ್ಲೆಯಿಂದ ಗೊರವರ ಕುಣಿತದೊಂದಿಗೆ ಮಲೆ ಮಹಾದೇಶ್ವರ ಬೆಟ್ಟವನ್ನು ಪ್ರತಿಬಿಂಬಿಸುವ ಸ್ತಬ್ಧಚಿತ್ರ ನಿರ್ಮಿಸಲಾಗಿತ್ತು. ಚಿತ್ರದುರ್ಗ ಜಿಲ್ಲೆಯಿಂದ ಗುರು ತಿಪ್ಪೇರುದ್ರಸ್ವಾಮಿ ದೇವಾಲಯದ ಸ್ತಬ್ಧಚಿತ್ರ ನಿರ್ಮಿಸಲಾಗಿತ್ತು.

ಹಾಸನ ಜಿಲ್ಲೆಯು ಹಾಸನಾಂಬೆ ದೇವಾ ಲಯ, ಅರಸೀಕೆರೆ ಈಶ್ವರ ದೇವಾಲಯ, ಜೇನು ಕಲ್ಲು ಸಿದ್ಧೇಶ್ವರ ದೇವಾಲಯದ ಸ್ತಬ್ಧಚಿತ್ರ ನಿರ್ಮಿಸಿತ್ತು. ಹಾವೇರಿ ಜಿಲ್ಲೆಯಿಂದ ಸಂತಕವಿ ಭಕ್ತಕನಕದಾಸರು ಶಂಖನಾದ ಮೊಳಗಿಸುವ ಚಿತ್ರಣದೊಂದಿಗೆ ಕಾಗಿನೆಲೆ ಗದ್ದಿಗೆ ದೇವಾಲ ಯದ ಸ್ತಬ್ಧಚಿತ್ರ ನಿರ್ಮಿಸಿತ್ತು. ರಾಮನಗರ ಜಿಲ್ಲೆಯ ಚನ್ನಪಟ್ಟಣದ ಗೊಂಬೆಗಳು ಸ್ತಬ್ಧ ಚಿತ್ರದಲ್ಲಿ ಕಬ್ಬಾಳಮ್ಮ ದೇವಾಲಯ ಪ್ರತಿಬಿಂಬ ಮೂಡಿಸಲಾಗಿತ್ತು. ವಿಜಯಪುರ ಜಿಲ್ಲೆಯು ಸಿದ್ದೇಶ್ವರಸ್ವಾಮಿ ಅವರ ಜೀವನ ಸಂದೇಶ ಸಾರುವ ಜ್ಞಾನಾಶ್ರಮದ ಸ್ತಬ್ಧಚಿತ್ರ ನಿರ್ಮಿಸಿತ್ತು. ವಿಜಯನಗರ ಜಿಲ್ಲೆಯು ವಿಠ್ಠಲ ದೇವಾಲಯದ ತದ್ರೂಪವನ್ನೇ ಸ್ತಬ್ಧಚಿತ್ರದ ಮೂಲಕ ಜಂಬೂ ಸವಾರಿ ಮೆರವಣಿಗೆಯಲ್ಲಿ ಕೊಂಡೊಯ್ಯಿತು. ಯಾದವಗಿರಿ ಜಿಲ್ಲೆಯು ವೇಣುಗೋಪಾಲ ಸ್ವಾಮಿ ದೇವಾಲಯದ ಸ್ತಬ್ಧಚಿತ್ರದ ನಿರ್ಮಿಸಿತ್ತು. ಸ್ತಬ್ಧಚಿತ್ರ ಉಪಸಮಿತಿಯು ಯುನೆಸ್ಕೋದಿಂದ ಗುರುತಿಸಲ್ಪಟ್ಟಿರುವ ಬೇಲೂರಿನ ಚನ್ನಕೇಶವ ದೇವಾಲಯ, ಹಳೇಬೀಡಿನ ಸೋಮನಾಥಪುರ ದೇವಾಲಯ, ಹೊಯ್ಸಳೇಶ್ವರ ದೇವಾಲಯದ ಸ್ತಬ್ಧಚಿತ್ರ ನಿರ್ಮಿಸಿತ್ತು. ಈ ಎಲ್ಲಾ ಸ್ತಬ್ಧಚಿತ್ರಗಳು ಭಕ್ತಿ ಮೂಡಿಸುವುದರೊಂದಿಗೆ ಆಯಾ ಜಿಲ್ಲೆಗಳ ಮಹತ್ವ ಸಾರುವ ಪ್ರಯತ್ನ ಮಾಡಿದವು.

ಗಮನ ಸೆಳೆದ ಸ್ತಬ್ಧಚಿತ್ರಗಳು: ಜಂಬೂಸವಾರಿ ಮೆರವಣಿಗೆಯಲ್ಲಿ ಮಂಡ್ಯ ಜಿಲ್ಲೆಯ ಸಾಂಪ್ರದಾ ಯಿಕ ಉದ್ಯಮ ಆಲೆಮನೆ ಸ್ತಬ್ಧಚಿತ್ರ ಗಮನ ಸೆಳೆಯಿತು. ಸಕ್ಕರೆ ಕಾರ್ಖಾನೆಗೆ ಎತ್ತಿನ ಬಂಡಿ ಯಲ್ಲಿ ಕಬ್ಬನ್ನು ತುಂಬಿಕೊಂಡು ಹೋಗುವಂತೆ ವಿನ್ಯಾಸಗೊಳಿಸಿದ್ದ ಸ್ತಬ್ಧಚಿತ್ರದಲ್ಲಿ ಆಲೆಮನೆಯಲ್ಲಿ ಕಬ್ಬನ್ನು ಗಾಣದಿಂದ ಅರೆಯುವಂತೆ, ಪಾಕ ಉಕ್ಕಿಸುವ ಹಾಗೂ ಬೆಲ್ಲದ ಚಿತ್ರಣ ಮೂಡಿಸಲಾಗಿತ್ತು.

ಕೊಡಗು ಜಿಲ್ಲೆಯ ಪ್ರೇಕ್ಷಣೀಯ ತಾಣಗಳ ಬಗ್ಗೆ ಮಾಹಿತಿ ನೀಡುವ ಸ್ತಬ್ಧಚಿತ್ರದಲ್ಲಿ ರಾಜಾ ಸೀಟ್, ದುಬಾರೆ ಆನೆ ಶಿಬಿರ, ಶಾಂತಿನಾಥರ ತ್ರಿವಳಿ ಬಸದಿ ಹಾಗೂ ಇನ್ನಿತರ ತಾಣಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಗಮನ ಸೆಳೆಯಿತು. ಕಲಬುರಗಿ ಜಿಲ್ಲೆಯ ಸ್ತಬ್ಧಚಿತ್ರದಲ್ಲಿ ಚಿಂಚೋಳಿ ಅರಣ್ಯ ಪ್ರದೇಶ, ರಾಜವಂಶಸ್ಥರ ಕೋಟೆ, ಬುದ್ಧನ ಸ್ತೂಪ, ತೊಗರಿ ಕಣಜ, ಸಿಮೆಂಟ್ ಕಾರ್ಖಾನೆಯ ಚಿತ್ರಣ ಮೂಡಿಸ ಲಾಗಿತ್ತು. ಗದಗ್ ಜಿಲ್ಲೆಯ ಸ್ತಬ್ಧಚಿತ್ರದಲ್ಲಿದಲ್ಲಿ ಸಬರ್‌ಮತಿ ಆಶ್ರಮ, ಧಾರವಾಡ ಜಿಲ್ಲೆಯ ಸ್ತಬ್ಧಚಿತ್ರದಲ್ಲಿ ಧಾರವಾಡ ಪೇಡ, ಧಾರವಾಡ ಎಮ್ಮೆ ತಳಿಯ ಬಗ್ಗೆ ಮಾಹಿತಿ ಒದಗಿಸಿತು.

ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯ್ತಿಯ ಸ್ತಬ್ಧಚಿತ್ರ ಏಕತೆ ಸಂದೇಶ ಸಾರುತ್ತಿತ್ತು. ಬೀದರ್ ಜಿಲ್ಲೆಯ ಸ್ತಬ್ಧಚಿತ್ರ ಕೃಷ್ಣಮೃಗ ಸಂರಕ್ಷಾಧಾಮದ ಚಿತ್ರಣ ಮೂಡಿಸಿದರೆ, ಚಿಕ್ಕಮಗಳೂರು ಜಿಲ್ಲೆಯ ಬೆಟ್ಟದಿಂದ ಬಟ್ಟಲಿಗೆ ಸ್ತಬ್ಧಚಿತ್ರ, ದಕ್ಷಿಣ ಕನ್ನಡ ಜಿಲ್ಲೆಯ ಸ್ತಬ್ಧಚಿತ್ರ ಪಿಲಿಕುಳ ನಿಸರ್ಗಧಾಮ, ಕೊಪ್ಪಳ ಜಿಲ್ಲೆಯ ಸ್ತಬ್ಧಚಿತ್ರ ಕಿನ್ನಾಳ ಕಲೆ ಮತ್ತು ಕೈಮಗ್ಗದ ಮಹತ್ವ ಸಾರುತ್ತಿತ್ತು.

ಗ್ಯಾರಂಟಿ ಯೋಜನೆಗಳು

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಯಿಂದ ಗೃಹಲಕ್ಷ್ಮಿ ಯೋಜನೆಯ ಮಹತ್ವ ಸಾರುವ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಅನ್ನಭಾಗ್ಯ ಯೋಜನೆ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜ ನಿಗಮ ನಿಯಮಿತವು ಗೃಹಜ್ಯೋತಿ ಯೋಜನೆಯ ಬಗ್ಗೆ ಬೆಳಕು ಚೆಲ್ಲುವ ಸ್ತಬ್ಧಚಿತ್ರ ನಿರ್ಮಿಸಿತ್ತು.



ಗದಗ್ ಜಿಲ್ಲೆಯ ಶಬರಮತಿ ಆಶ್ರಮ ಸ್ತಬ್ಧಚಿತ್ರ



ರಾಜವಂಶಸ್ಥರ ಕೋಟೆ ಚಿಂತೊಳ್ಳಿ ಅರಣ್ಯ ಪ್ರದೇಶವನ್ನು ಬಿಂಬಿಸಿದ ಕಲ್ಬುರ್ಗಿ ಜಿಲ್ಲೆಯ ಸ್ತಬ್ಧಚಿತ್ರ



ಕೊಡಗು ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳ ಅನಾವರಣ



ನರೇಗಾ ಯೋಜನೆಯಡಿ ವೀರಗಲ್ಲುಗಳ ಉತ್ಖನನ ಮಾಡಿ ಮರುಸ್ಥಾಪಿಸಿದ್ದನ್ನು ಬಿಂಬಿಸಿದ ಕೋಲಾರದ ಸ್ತಬ್ಧಚಿತ್ರ



ಕೊಪ್ಪಳ ಜಿಲ್ಲೆಯ ಕಿನ್ನಾಳ ಕಲೆ ಹಾಗೂ ಕೈಮಗ್ಗ ಅನಾವರಣ



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳನ್ನು ಬಿಂಬಿಸಿದ ಮೈಸೂರು ಜಿಪಂ ಸ್ತಬ್ಧಚಿತ್ರ



ಹಾಸನಾಂಬ ದೇವಾಲಯ ಹಾಗೂ ಇತರ ಯಾತ್ರಾಸ್ಥಳಗಳ ಮಾಹಿತಿಯನ್ನೊಳಗೊಂಡ ಹಾಸನದ ಸ್ತಬ್ಧಚಿತ್ರ




ರೈತರ ಬದುಕು ಹಾಗೂ ಸಾಂಪ್ರದಾಯಿಕ ಉದ್ಯಮವಾದ ಆಲೆಮನೆ ಸ್ತಬ್ಧಚಿತ್ರ ಜಂಬೂಸವಾರಿಯಲ್ಲಿ ಸಾಗಿತು.



ಯುನೆಸ್ಕೋದಿಂದ ಘೋಷಿಸಲ್ಪಟ್ಟ ಪುರಾತನ ದೇವಾಲಯಗಳ ಅನಾವರಣಗೊಳಿಸಿದ ಸ್ತಬ್ಧಚಿತ್ರ



ರಾಮನಗರ ಜಿಲ್ಲೆಯ ಚನ್ನಪಟ್ಟಣ ಗೊಂಬೆಗಳು ಹಾಗೂ ಕಬ್ಬಾಳಮ್ಮ ದೇವಸ್ಥಾನ



ರಾಯಚೂರು ಜಿಲ್ಲೆಯ ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಕಣ್ಮುಂದೆ ತಂದ ಸ್ತಬ್ಧಚಿತ್ರ



ಕುವೆಂಪು ಅವರ ಕುಪ್ಪಳ್ಳಿ ಹಾಗೂ ಶಿವಮೊಗ್ಗ ಜಿಲ್ಲೆಯ ಅರಣ್ಯ ಸಂಪತ್ತನ್ನು ಕಣ್ಮುಂದೆ ತಂದ ಶಿವಮೊಗ್ಗ



ಸ್ತಬ್ಧ ಚಿತ್ರ ಉಪ ಸಮಿತಿಯಿಂದ ಸಿದ್ಧಪಡಿಸಲಾದ ಅರಮನೆ ವಾದ್ಯಗೋಷ್ಠಿ



ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳು ಪ್ರವಚನ ಮಾಡುತ್ತಿರುವ ವಿಜಯಪುರ ಜಿಲ್ಲೆಯ ಸ್ತಬ್ಧಚಿತ್ರ



ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ಪ್ರತಿಯನ್ನು ಜವಹರಲಾಲ್ ನೆಹರು ಅವರಿಗೆ ಹಸ್ತಾಂತರಿಸುತ್ತಿರುವ ಬಗೆಗಿನ ಸ್ತಬ್ಧಚಿತ್ರ



ವಿಜಯನಗರ ಜಿಲ್ಲೆಯ ವಿಠಲ ದೇವಸ್ಥಾನ ಸ್ತಬ್ಧ ಚಿತ್ರ



ಶರಾವತಿ ಮಡಿಲಲ್ಲಿ ಸಿಂಹಬಾಲದ ಸಿಂಗಲೀಕಗಳ ಸಂರಕ್ಷಣೆ ಜಾಗೃತಿ ಮೂಡಿಸಿದ ಉತ್ತರ ಕನ್ನಡ ಜಿಲ್ಲೆ



ತ್ಯಾಜ್ಯಮುಕ್ತ ಮತ್ಸ್ಯಸ್ನೇಹಿ ಸಮುದ್ರದ ಬಗ್ಗೆ ಅರಿವು ಮೂಡಿಸಿದ ಉಡುಪಿ ಜಿಲ್ಲೆ.

ಮೈಸೂರು ಮಿತ್ರ

ಅತ್ಯದ್ಭುತ 49 ಸ್ತಬ್ಧಚಿತ್ರಗಳು


ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನು ಬಿಂಬಿಸಿದ ವಾರ್ತಾ ಮತ್ತು ಪ್ರಚಾರ ಇಲಾಖೆ



ಯಾದಗಿರಿ ಜಿಲ್ಲೆಯ ವೇಣುಗೋಪಾಲಸ್ವಾಮಿ ದೇವಸ್ಥಾನ


ಶೌರ್ಯ, ನ್ಯಾಯ ಹಾಗೂ ರಕ್ಷಣೆಯನ್ನು ಪ್ರದರ್ಶಿಸಿದ ಪೊಲೀಸ್ ಇಲಾಖೆ



ಚರ್ಮ ಉತ್ಪನ್ನಗಳ ಬಗ್ಗೆ ಮಾಹಿತಿ ಒದಗಿಸಿದ ಲಿಡ್ಕರ್


ವಾಕ್‌ಶ್ರವಣ ದೋಷ ಸಂಬಂಧಿತ ಮಾಹಿತಿ ಒದಗಿಸಿದ ಆಯುಷ್ ಸಂಸ್ಥೆ ಸ್ತಬ್ಧ ಚಿತ್ರ



ಕ್ಷೀರಭಾಗ್ಯ ಯೋಜನೆಯನ್ನು ಪ್ರಸ್ತುತಪಡಿಸಿದ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ



ವಿವಿಧ ಯೋಜನೆಗಳ ಮಾಹಿತಿಯೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸ್ತಬ್ಧ ಚಿತ್ರ

ಕಿಡಿಗೇಡಿಗಳ ನೂಕಾಟಕ್ಕೆ ನರಕ ಯಾತನೆ ಅನುಭವಿಸಿದ ಮಕ್ಕಳು, ಮಹಿಳೆಯರು



ಮೈಸೂರು,ಅ.24(ಪಿಎಂ)– ಈ ಬಾರಿಯ ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ ಅಂಬಾರಿಯಲ್ಲಿರುವ ತಾಯಿ ಚಾಮುಂಡೇಶ್ವರಿ ದರ್ಶನದ ಜೊತೆಗೆ ಕಲಾತಂಡಗಳ ಸಾಂಸ್ಕೃತಿಕ ಪ್ರದರ್ಶನ, ಸ್ತಬ್ಧಚಿತ್ರಗಳನ್ನು ಕಣ್ತುಂಬಿಕೊಳ್ಳಲು ಕಾದು ಕುಳಿತ್ತಿದ್ದ ಮಾರ್ಗದಲ್ಲಿ ಕೆಲವೆಡೆ ಕಿಡಿಗೇಡಿಗಳ ನೂಕಾಟದಿಂದ ಮಕ್ಕಳು ಮತ್ತು ಮಹಿಳೆಯರು ನರಕ ಯಾತನೆ ಅನುಭವಿಸಿದರು.

ಮಾರ್ಗದಲ್ಲಿ ಮುಂಬದಿಯಲ್ಲಿ ಹಾಕಿದ್ದ ಬ್ಯಾರಿಗೇಡ್‌ಗೆ ಮುಖ ಮಾಡಿ ನಿಂತ್ತಿದ್ದ ಮಕ್ಕಳು ಮತ್ತು ಮಹಿಳೆಯರು ಹಿಂಬದಿಯಿಂದ ತಳ್ಳುತ್ತಿದ್ದ ಕಾರಣಕ್ಕೆ ಭಾರೀ ಯಾತನೆ ಅನುಭವಿಸಿದರು. ಹಿಂಬದಿ ನಿಂತ್ತಿದ್ದ ಕಿಡಿಗೇಡಿಗಳು ನೂಕುತ್ತಿದ್ದರಿಂದ ಮುಂಬದಿಯಲ್ಲಿದ್ದ ಮಕ್ಕಳು, ಮಹಿಳೆಯರು ಒತ್ತಡ ತಡೆಯಲಾರದೇ ಪರಿತಪಿಸಿದರು. ಇಂತಹ ಸಂಕಷ್ಟಕ್ಕೆ ಸಿಲುಕಿದ್ದ ಮಕ್ಕಳು ನೋವಿನಿಂದ ಚೀರಾಡುತ್ತಾ ಸ್ಥಳದಿಂದ ಕರೆದೊಯ್ಯುವಂತೆ ತಮ್ಮ ಪೋಷಕರಲ್ಲಿ ಒತ್ತಡ ಹಾಕುತ್ತಿದ್ದರು.

ಚಾಮರಾಜ ಒಡೆಯರ್ ವೃತ್ತ ಮತ್ತು ಕೆಆರ್ ವೃತ್ತದ ನಡುವಿನ ಆಲ್ಬರ್ಟ್–ವಿಕ್ಟರ್ ರಸ್ತೆಯಲ್ಲಿ ನಗರ ಬಸ್ ನಿಲ್ದಾಣದ ಆವರಣದಲ್ಲಿ ಮುಂಭಾಗದಲ್ಲಿದ್ದ ಮಕ್ಕಳು ಮತ್ತು ಮಹಿಳೆಯರು ತಮ್ಮ ಹಿಂದಿರುವ ಕೆಲ ಕಿಡಿಗೇಡಿಗಳ ತಳ್ಳಾಟಕ್ಕೆ ಪರಿತಪಿಸಬೇಕಾಯಿತು. ಇದೇ ರೀತಿ ಕೆಆರ್ ವೃತ್ತದ ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ವೃತ್ತದ ಇರ್ವಿನ್ ರಸ್ತೆಯಲ್ಲಿ ಮುಂದುಗಡೆ ಆಸಿನರಾಗಿದ್ದ ಹಾಗೂ ನಿಂತಿದ್ದ ಮಕ್ಕಳು, ಮಹಿಳೆಯರು ಮಾತ್ರವಲ್ಲದೆ, ಪುರುಷರೂ ಯಾತನೆ ಅನುಭವಿಸಿದರು. ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ ಇರ್ವಿನ್ ರಸ್ತೆಯಲ್ಲಿ (ಕೆಆರ್ ಆಸ್ಪತ್ರೆ ಬಳಿ) ಮುಂಬದಿಯಲ್ಲಿದ್ದ ಮಹಿಳೆಯರು ಮತ್ತು ಮಕ್ಕಳು ಹಿಂಬದಿಯಲ್ಲಿದ್ದ ಕೆಲ ಕಿಡಿಗೇಡಿಗಳ ನೂಕಾಟಕ್ಕೆ ಹೈರಣಾದರು.

ಇಂತಹ ಸ್ಥಳಗಳಲ್ಲಿ ತಳ್ಳಾಟ ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು. ಎಷ್ಟೇ ಪ್ರಯತ್ನಿಸಿದರೂ ನಿಯಂತ್ರಣಕ್ಕೆ ಬಾರದ ಹಿನ್ನೆಲೆಯಲ್ಲಿ ಅಳುತ್ತಿದ್ದ ಪುಟ್ಟ ಮಕ್ಕಳನ್ನು ಪೊಲೀಸರು ಬ್ಯಾರಿಕೇಡ್‌ನಿಂದ ಒಳಕ್ಕೆ ಕರೆದುಕೊಂಡು ಬಂದು ಕೂರಿಸಿದರು. ಈ ಪೈಕಿ ಕೆಲ ಮಕ್ಕಳು ತಮ್ಮ ಪೋಷಕರ ಬಳಿಗೆ ಹೋಗಬೇಕೆಂದು ಪಟ್ಟು ಹಿಡಿದು, ಅಳುತ್ತಿದ್ದದ್ದೂ ಕಂಡು ಬಂದಿತು. ಈ ರೀತಿಯ ಸ್ಥಳಗಳಲ್ಲಿ ವೀಕ್ಷಣೆಗೆ ಅವಕಾಶ ನೀಡಬಾರದು. ಒಂದು ವೇಳೆ ನೀಡಿದರು ಹಿಂಬದಿಯೂ ಬ್ಯಾರಿಕೇಡ್ ಅಳವಡಿಸಿ ಸೀಮಿತ ಸ್ಥಳಾವಕಾಶದಲ್ಲಿ ಮಾತ್ರ ವೀಕ್ಷಣೆಗೆ ಅವಕಾಶ ನೀಡಬೇಕು. ಜೊತೆಗೆ ಹಿಂಬದಿಯಲ್ಲಿಯೂ ಪೊಲೀಸರನ್ನು ನಿಯೋಜಿಸಬೇಕೆಂಬುದು ಪ್ರಜ್ಞಾವಂತರ ಸಲಹೆಯಾಗಿದೆ. ಇಂತಹ ಸನ್ನಿವೇಶದ ನಡುವೆ ಹಲವೆಡೆ ಮಕ್ಕಳು ಸಂಭ್ರಮದಿಂದ ಕಲಾತಂಡಗಳ ಪ್ರದರ್ಶನ, ಸ್ತಬ್ಧಚಿತ್ರ ಹಾಗೂ ಜಂಬೂ ಸವಾರಿಯನ್ನು ಕಣ್ತುಂಬಿಕೊಂಡರು. ಅಲ್ಲದೆ, ಕಲಾತಂಡಗಳ ತಮಟೆ, ವಾದ್ಯಗಳ ಸಂಗೀತಕ್ಕೆ ನರ್ತಿಸಿ ನಲಿದಾಡಿದರು.

ಬಿಸಿಲಿನ ತಾಪಕ್ಕೆ ಬಸವಳಿದ ಜನಸ್ತೋಮ



ಮೈಸೂರು,ಅ.24(ಪಿಎಂ)– ಅರಮನೆ ಆವರಣದಲ್ಲಿ ಮುಖ್ಯ ಆಕರ್ಷಣೆಯಾದ ಜಂಬೂ ಸವಾರಿ ಸೇರಿದಂತೆ ಕಲಾ ತಂಡಗಳ ಸಾಂಸ್ಕೃತಿಕ ವೈಭವ, ಸ್ತಬ್ಧಚಿತ್ರಗಳ ವೈವಿಧ್ಯತೆ ಕಣ್ತುಂಬಿಕೊಳ್ಳಲು ಕಾದು ಕುಳಿತಿದ್ದ ಜನಸ್ತೋಮ ಬಿಸಿಲಿನ ತಾಪಕ್ಕೆ ಬಸವಳಿದರು.

ಬೆಳಗ್ಗೆಯಿಂದಲೇ ಅರಮನೆ ಆವರಣಕ್ಕೆ ತಂಡೋಪ ತಂಡವಾಗಿ ಆಗಮಿಸಿ ಆಸೀನರಾದ ಜನಸ್ತೋಮ ಹಲವು ತಾಸುಗಳ ಕಾಲ ಬಿಸಿಲಿನ ತಾಪದಲ್ಲಿ ಬೆಂದರು. ಈ ಪೈಕಿ ಹಲವರು ಕೊಡೆಗಳ ಆಶ್ರಯದಲ್ಲಿ ಬಿಸಿಲಿನ ತಾಪದಿಂದ ತಪ್ಪಿಸಿಕೊಂಡರು. ಬಹುತೇಕ ಮಂದಿ ಟೋಪಿಗಳನ್ನು ಹಾಕಿಕೊಂಡು ಸೂರ್ಯನ ಶಾಖದಿಂದ ಪಾರಾದರು. ಈ ನಡುವೆ ಮುಂಭಾಗದಲ್ಲಿ ಕೊಡೆ ಹಿಡಿದು ಕುಳಿತವರ ವಿರುದ್ಧ ಹಿಂಬದಿಯಲ್ಲಿದ್ದವರು ಆಕ್ರೋಶ ವ್ಯಕ್ತಪಡಿಸಿದರು. ಕೊಡೆಗಳ ಮರೆಯಿಂದ ಏನೂ ಕಾಣುವುದಿಲ್ಲ ಎಂದು ಕಿಡಿಕಾರಿದರು. ಇದರಿಂದ ಆಗಾಗ್ಗೆ ಪರಸ್ಪರ ಮಾತಿನ ಚಕಮಕಿಯೂ ನಡೆಯಿತು. ಅಲ್ಲದೆ, ಕಲಾತಂಡಗಳ ಪ್ರದರ್ಶನ ಹಾಗೂ ಸ್ತಬ್ಧಚಿತ್ರ ಕಾಣದೆಂದು ಹಿಂಬದಿಯಲ್ಲಿದ್ದವರು ಎದ್ದು ನಿಂತಿದ್ದ ಮುಂದಿನ ಸಾಲಿನವರಿಗೆ ಕುಡಿಯುವ ನೀರಿನ ಪ್ಲಾಸ್ಟಿಕ್ ಖಾಲಿ ಬಾಟಲಿಗಳನ್ನು ಎಸೆದು ಅಸಮಾಧಾನ ವ್ಯಕ್ತಪಡಿಸಿದ್ದೂ ಸಾಮಾನ್ಯವಾಗಿತ್ತು. ಇಂತಹ ಎಲ್ಲಾ ಜಂಜಾಟದ ನಡುವೆ ಅಂತಿಮವಾಗಿ ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ವಿಗ್ರಹಕ್ಕೆ ಭಕ್ತಿಭಾವದಿಂದ ನಮಿಸಿ, ಸಂಭ್ರಮದಿಂದ ಮರಳಿದರು.

ಹಲವು ವರ್ಷದ ಬಳಿಕ ಪಥಸಂಚಲನದಲ್ಲಿ ಎನ್‌ಸಿಸಿ ಕೆಡೆಟ್‌ಗಳಿಗೆ ಅವಕಾಶ

ಮೈಸೂರು,ಅ.24(ಎಂಟಿವೈ)– ಜಂಬೂಸವಾರಿ ಮೆರವಣಿಗೆಯಲ್ಲಿ ಹಲವು ವರ್ಷಗಳಿಂದ ಪಥಸಂಚಲನದ ಅವಕಾಶ ಕಳೆದುಕೊಂಡಿದ್ದ ಎನ್‌ಸಿಸಿ ಕೆಡೆಟ್‌ಗಳಿಗೆ ಈ ಬಾರಿ ಮತ್ತೆ ಪಥಸಂಚಲನಕ್ಕೆ ಅವಕಾಶ ನೀಡಲಾಗಿತ್ತು. ಕೇವಲ ಒಂದು ತುಕಡಿಯಲ್ಲಿ 35ಕ್ಕೂ ಹೆಚ್ಚು ಎನ್‌ಸಿಸಿ ಕೆಡೆಟ್‌ಗಳು ಪಥಸಂಚಲನ ನಡೆಸಿ ಗಮನ ಸೆಳೆದರು. ಎನ್‌ಸಿಸಿ ಭೂದಳ ಕೆಡೆಟ್‌ಗಳ ತಂಡ ಮಾತ್ರ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಿತು.

ಪುಷ್ಪಾರ್ಚನೆಗೆ ಈ ಬಾರಿ ಇಬ್ಬರು ಹೆಚ್ಚುವರಿ ಗಣ್ಯರು

ಮೈಸೂರು, ಅ.24(ಆರ್‌ಕೆ)–ಈ ಬಾರಿಯ ದಸರಾ ಮಹೋತ್ಸವದ ವಿಜಯ ದಶಮಿ ಮೆರವಣಿಗೆಯಲ್ಲಿ ಮೂವರು ಹೆಚ್ಚುವರಿ ಗಣ್ಯರು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರಿಗೆ ಅರಮನೆ ಮುಂದೆ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಿದ್ದ ನಾಡಿನ ಅಧಿದೇವತೆ, ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಯೋಗ ಪ್ರಾಪ್ತವಾಯಿತು.

ಈವರೆಗೆ ಮುಖ್ಯಮಂತ್ರಿಗಳು, ರಾಜ ವಂಶಸ್ಥ, ಜಿಲ್ಲಾ ಉಸ್ತುವಾರಿ ಸಚಿವ ಮೇಯರ್, ಜಿಲ್ಲಾಧಿಕಾರಿ ಹಾಗೂ ನಗರ ಪೊಲೀಸ್ ಕಮೀಷ್ನರ್ ಮಾತ್ರ ವೇದಿಕೆ ಏರಿ ಆನೆ ಮೇಲಿನ ಅಂಬಾರಿಯಲ್ಲಿ ವಿರಾಜಮಾನಳಾದ ನಾಡ ದೇವತೆ ಶ್ರೀ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುತ್ತಿದ್ದರು. ಹಲವು ಬಾರಿ ಹೈಕೋರ್ಟ್ ಮುಖ್ಯ ನ್ಯಾಯಾಧೀಶರೂ ಈ ಕಾರ್ಯದಲ್ಲಿ ಭಾಗಿಯಾಗುತ್ತಾರೆ. ಅದರಂತೆ ಇಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ಅವರು ಪಾಲ್ಗೊಂಡಿದ್ದರು. ಆದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಹಾಗೂ ಉಪ ಮುಖ್ಯಮಂತ್ರಿಗಳು ಪುಷ್ಪಾರ್ಚನೆ ಮಾಡಿರುವುದು ಇದೇ ಮೊದಲಾಗಿದೆ.


ಜಾನಪದ ಬೀಡು, ಹುಲಿ, ಆನೆಗಳ ಸಂತೃಪ್ತಿಯ ಕಾಡನ್ನು ಪರಿಚಯಿಸಿದ ಚಾಮರಾಜನಗರ ಸ್ತಬ್ಧಚಿತ್ರ.


ಕಾವೇರಿ ನೀರಾವರಿ ನಿಗಮದಿಂದ ನೀರಿನ ಮಿತವ್ಯಯ ಬಳಕೆ ಬಗ್ಗೆ ಜಾಗೃತಿ ಸ್ತಬ್ಧ ಚಿತ್ರ


ಪ್ರವಾಸೋದ್ಯಮ ಇಲಾಖೆಯ ಲಕ್ಕುಂಡಿಯ ಬ್ರಹ್ಮಜಿನಾಲಯ ಅನಾವರಣ



ಮೈಸೂರು ವೈದ್ಯಕೀಯ ಮಹಾವಿದ್ಯಾಲಯದ ಬೆಳವಣಿಗೆ ಬಗ್ಗೆ ಮಾಹಿತಿ ನೀಡಿದ ಸ್ತಬ್ಧ ಚಿತ್ರ



ಅನ್ನಭಾಗ್ಯ ಯೋಜನೆ ಬಗ್ಗೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಮಾಹಿತಿ.


ಸಂವಿಧಾನ ಪೀಠಿಕೆ ಬಗ್ಗೆ ಜಾಗೃತಿಗೊಳಿಸಿದ ಸಮಾಜ ಕಲ್ಯಾಣ ಇಲಾಖೆ ಸ್ತಬ್ಧ ಚಿತ್ರ


ಗೃಹಜ್ಯೋತಿ ಯೋಜನೆ ಬಗ್ಗೆ ಪ್ರಚುರಪಡಿಸಿದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ



ಶ್ರೀ ಮಹರ್ಷಿ ವಾಲ್ಮೀಕಿ ಅವರ ಬಗ್ಗೆ ಮಾಹಿತಿ ನೀಡಿದ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ



ಮಡಿಕೇರಿಯಲ್ಲಿ ವೈಭವದ ದಸರಾ ಉತ್ಸವ

ಅಸುರರನ್ನು ಸಂಹರಿಸಿದ ದೇವತೆಗಳು ಸಂದೇಶ ಸಾರಿದ ದಶಮಂಟಪಗಳ ಮೆರವಣಿಗೆ

▶ ಬಣ್ಣ-ಬಣ್ಣದ ವಿದ್ಯುತ್ ದೀಪಗಳ ಆಕರ್ಷಣೆ ▶ ಹರಿದು ಬಂದ ಜನಸಾಗರ



ಮಡಿಕೇರಿ, ಅ.24– ಕಠೋರ ತಪಗೈದು ದೇವಾನು ದೇವತೆಗಳಿಂದ ವಿಶೇಷ ವರ ಪಡೆದ ಅಸುರ ಕುಲ.. ತ್ರಿಲೋಕದಲ್ಲಿ ಅಟ್ಟಹಾಸ ಮೆರೆಯುತ್ತಾ ವರ ನೀಡಿದ ದೈವೀ ಶಕ್ತಿಗಳನ್ನೇ ಸಂಹರಿಸುವುದಾಗಿ ಸವಾಲು ಎಸೆಯುವ ರಾಕ್ಷಸ ವೃಂದ... ದುಷ್ಟಶಕ್ತಿಗಳಿಂದ ಶಿಷ್ಟರನ್ನು ರಕ್ಷಿಸುವಂತೆ ದೇವಾನು ದೇವತೆಗಳ ಮೊರೆ ಹೋದ ಋಷಿ ಮುನಿಗಣ...ವಿವಿಧ ಅವತಾರ ತಳೆದು ಅಸುರರನ್ನು ಸಂಹರಿಸಿದ ದೇವಾನು ದೇವತೆಗಳು.. ಶಂಖ ನಾದದೊಂದಿಗೆ ತ್ರಿಲೋಕದಲ್ಲಿ ಮೊಳಗಿದ ಶಾಂತ್ರಿಯ ವಿಜಯ ಮಂತ್ರಘೋಷ...

ಇದು ಐತಿಹಾಸಿಕ ಮಡಿಕೇರಿ ದಸರಾ ಉತ್ಸವದ ಕೇಂದ್ರಬಿಂದುವಾದ ದಶ ಮಂಟಪ ಶೋಭಾಯಾತ್ರೆಯಲ್ಲಿ ಕಂಡು ಬಂದ ದೃಶ್ಯಗಳು. ಮಂಜು ಮುಸುಕಿದ ಚಳಿಯ ವಾತಾವರಣದಲ್ಲಿ ಐತಿಹಾಸಿಕ ಹಿನ್ನೆಲೆಯ ಮಡಿಕೇರಿ ದಸರಾ ಉತ್ಸವದ ದಶಮಂಟಪಗಳ ಶೋಭಾಯಾತ್ರೆ ವಿಜೃಂಭಣೆಯಿಂದ ನಡೆಯಿತು. ಜಿಲ್ಲೆ ಸೇರಿದಂತೆ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಪ್ರೇಕ್ಷಕರ ಸಮ್ಮುಖದಲ್ಲಿ ದಶ ಮಂಟಪಗಳು ದೇವ ಲೋಕವನ್ನೇ ಧರೆಗಿಳಿಸುವ ಮೂಲಕ 'ದುಷ್ಟ ಸಂಹಾರ ಶಿಷ್ಟ ಪರಿಪಾಲನೆಯ' ಸಂದೇಶ ಸಾರಿದವು.

ಐತಿಹಾಸಿಕ ಸಂಪ್ರದಾಯದಂತೆ ನಗರದ ಪೇಟೆ ಶ್ರೀ ರಾಮ ಮಂದಿರದ ಆಕರ್ಷಕ ಮಂಟಪಕ್ಕೆ ಮಂಗಳವಾರ ರಾತ್ರಿ 8.30 ಗಂಟೆಗೆ ಮೂಲ ನೆಲೆಯಲ್ಲಿ ಪೂಜೆ ಸಲ್ಲಿಸಿ ಶೋಭಾಯಾತ್ರೆ ಹೊರಡುವ ಮೂಲಕ ದಶಮಂಟಪಗಳನ್ನು ಶೋಭಾಯಾತ್ರೆಗೆ ಆಹ್ವಾನಿಸಿತು. ಒಂದೂವರೆ ಶತಮಾನದ ಭವ್ಯ ಇತಿಹಾಸ ಹೊಂದಿರುವ ಪೇಟೆ ಶ್ರೀರಾಮಮಂದಿರದ ಮಂಟಪದಲ್ಲಿ ಈ ಬಾರಿ 'ವೈಕುಂಠ ದರ್ಶನ' ಎಂಬ ಪೌರಾಣಿಕ ಕಥೆಯನ್ನಾಧರಿಸಿದ ಚಲನ ವಲನಗಳನ್ನು ಅಳವಡಿಸಲಾಗಿತ್ತು. ಮೊದಲಿಗೆ ಶ್ರೀ ಪೇಟೆ ರಾಮಮಂದಿರ ಮಂಟಪ ನಾಲ್ಕು ಶಕ್ತಿ ದೇವತೆಗಳ ದೇಗುಲಕ್ಕೆ ತೆರಳಿ ಪೂಜೆ ಸ್ವೀಕರಿಸಿತು.

ವೈಭವದ ಶೋಭಾಯಾತ್ರೆ: ಪೇಟೆ ಶ್ರೀ ರಾಮಮಂದಿರರ ಮಂಟಪದ ಆಗಮನದೊಂದಿಗೆ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯದಿಂದ ಆರಂಭಗೊಂಡ ಮಂಟಪ 'ಶ್ರೀ ದುರ್ಗಾ ಸಪ್ತಶತಿ ಪುರಾಣದ ಕದಂಬ ಕೌಶಿಕೆ' ಕಥಾ ಭಾಗವನ್ನಾಧರಿಸಿದ ಕಲಾಕೃತಿಗಳೊಂದಿಗೆ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿತು. ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯದ ಮಂಟಪದಲ್ಲಿ ಈ ಬಾರಿ 'ಶಿವನಿಂದ ತ್ರಿಪುರಾಸುರರ ವಧೆ' ಎಂಬ ಕಥಾಹಂದರವನ್ನು ಮಂಟಪದಲ್ಲಿ ಅಳವಡಿಸಲಾಗಿತ್ತು. ಶ್ರೀ ಕೋಟೆ ಮಾರಿಯಮ್ಮ ದೇವಾಲಯ 'ಪಂಚಮುಖಿ ಆಂಜನೇಯನಿಂದ ಅಹಿರಾವಣ-ಮಹಿರಾವಣ ವಧೆ' ಎಂಬ ಪೌರಾಣಿಕ ಹಿನ್ನೆಲೆಯ ಮಂಟಪ ಸಿದ್ಧಪಡಿಸಿ ಶೋಭಾಯಾತ್ರೆಯಲ್ಲಿ ಪಾಲ್ಗೊಂಡರೆ, ಶ್ರೀದಂಡಿನ ಮಾರಿಯಮ್ಮ ದೇವಾಲಯ 'ಶಿವನಿಂದ ಜಲಂಧರನ ಸಂಹಾರ' ಎಂಬ ಕಥಾಭಾಗವನ್ನು ಮಂಟಪದಲ್ಲಿ ಅಳವಡಿಸಿ, ಶೋಭಾಯಾತ್ರೆ ನಡೆಸಿತು.

ಶ್ರೀಕೋಟೆ ಮಹಾಗಣಪತಿ ದೇವಾಲಯ ಮಂಟಪದಲ್ಲಿ 'ಮಹಾ ಗಣಪತಿಯಿಂದ ಶತಮಹಿಷಿಯ ಸಂಹಾರ' ಎಂಬ ಕಥಾ ಸಾರಾಂಶವನ್ನು ಅಳವಡಿಸಲಾಗಿತ್ತು. ಶ್ರೀ ಕೋದಂಡರಾಮ ದೇವಾಲಯ 'ಮಣಿಕಂಠನಿಂದ ಮಹಿಶಿಯ ಶಾಪ ವಿಮೋಚನೆ' ಎಂಬ ಸಾರಾಂಶ ಹೊಂದಿದ್ದರೆ, ಶ್ರೀಕರವಲೆ ಭಗವತಿ ಮಹಿಷ ಮರ್ಧಿನಿ ದೇವಾಲಯದ 'ಉಗ್ರ ನರಸಿಂಹನಿಂದ ಹಿರಣ್ಯಕಶ್ಯಪ ಸಂಹಾರ' ದೇಚೂರು ಶ್ರೀ ರಾಮ ಮಂದಿರದ 'ವಿಷ್ಣುವಿನಿಂದ ಮಧು ಖೈಟಬರ ಸಂಹಾರ', ಶ್ರೀ ಚೌಡೇಶ್ವರಿ ದೇವಾಲಯದ ಮಂಟಪದಲ್ಲಿ 'ಶ್ರೀ ಕಟೀಲು ಕ್ಷೇತ್ರ ಮಹಾತ್ಮೆ' ಕಥಾಭಾಗವನ್ನು ಹೊಂದಿದ ಮಂಟಪಗಳು ಜನ ಮನವನ್ನು ಸೆಳೆಯುವಲ್ಲಿ ಸಫಲವಾದವು. ಎಲ್ಲಾ 10 ಮಂಟಪಗಳಲ್ಲೂ ಪೌರಾಣಿಕ ಕಥಾ ಹಂದರಕ್ಕೆ ತಕ್ಕಂತೆ ಕಲಾಕೃತಿಗಳನ್ನು ಅಳವಡಿಸಲಾಗಿತ್ತಲ್ಲದೇ, ಆಕರ್ಷಕ ದಿಂಡಿಗಲ್ ಲೈಟ್ ಬೋರ್ಡ್, ಕಥಾ ಸಾರಾಂಶದ ಕಲಾಕೃತಿಗಳ ಚಲನವಲನ ಆಧರಿಸಿ ಸ್ಪಾಟ್‌ಲೈಟ್‌ಗಳು, ಕೂಲ್ ಫೈಯರ್, ದೇವಾನು ದೇವತೆಗಳು ಹಾಗೂ ದುಷ್ಟ ಶಕ್ತಿಗಳ ನಡುವಿನ ಸಂಹಾರ ಯುದ್ಧದ ಸನ್ನಿವೇಶಗಳಲ್ಲಿ ಸಂಭಾಷಣೆಗೆ ಹೊಂದಿಕೆಯಾಗುವ ರೀತಿಯಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಲಾಗಿತ್ತು.

ಭಾರಿ ಜನಸ್ತೋಮ: ಮಡಿಕೇರಿ ನಗರದಲ್ಲಿ ಸಂಜೆ 5 ಗಂಟೆಯ ಬಳಿಕ ಭಾರಿ ಜನಸ್ತೋಮ ಕಂಡು ಬಂತಲ್ಲದೇ, 10 ಗಂಟೆಯ ಬಳಿಕ ಈ ಸಂಖ್ಯೆಯಲ್ಲಿ ಭಾರಿ ಏರಿಕೆ ಕಾಣುವುದರೊಂದಿಗೆ ದಶ ಮಂಟಪಗಳ ಶೋಭಾಯಾತ್ರೆ ಅದ್ದೂರಿಗೆ ಸಾವಿರಾರು ಸಂಖ್ಯೆಯ ಪ್ರೇಕ್ಷಕರು ಸಾಕ್ಷಿಯಾದರು.

ಕೋರ್ಟ್ ನಿಯಮಾವಳಿಗಳನ್ನು ಪಾಲಿಸುವ ಮೂಲಕ ದಶಮಂಟಪ ಸಮಿತಿಗಳು ದಶ ಮಂಟಪಗಳಲ್ಲಿ ಡಿ.ಜೆ. ಧ್ವನಿವರ್ಧಕಗಳನ್ನು ಅಳವಡಿಸಿದ್ದವು. ದಶ ಮಂಟಪಗಳ ಪೂರ್ವ ನಿರ್ಧಾರದಂತೆ ಎಲ್ಲಾ ಮಂಟಪಗಳಲ್ಲೂ ಲೇಸರ್ ಲೈಟ್ ಹಾಗೂ ಪ್ಲಾಸ್ಟಿಕ್ ಬ್ಲಾಸ್ಟ್‌ಗಳನ್ನು ನಿಷೇಧ ಮಾಡಲಾಗಿತ್ತು. ಈ ಬಾರಿಯ ಮಡಿಕೇರಿ ದಸರಾದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಯುವ ಸಮೂಹ ಪಾಲ್ಗೊಂಡು ಸಂಭ್ರಮಿಸಿದ್ದು ಕಂಡು ಬಂತು. ದಶಮಂಟಪಗಳ ಡಿ.ಜೆ. ಧ್ವನಿವರ್ಧಕಗಳ ಮುಂದೆ ವಿವಿಧ ಹಾಡುಗಳಿಗೆ ಯುವ ಸಮೂಹ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಮೇಜರ್ ಮಂಗೇರಿರ ಮುತ್ತಣ್ಣ ವೃತ್ತ, ನಗರ ಪೊಲೀಸ್ ಠಾಣೆ, ಹಳೇ ಖಾಸಗಿ ಬಸ್ ನಿಲ್ದಾಣ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸೇರಿದಂತೆ ಮುಖ್ಯ ರಸ್ತೆಗಳಲ್ಲಿ ಭಾರಿ ಜನದಟ್ಟಣೆ ಏರ್ಪಟ್ಟಿತ್ತಲ್ಲದೇ, ನೂಕು ನುಗ್ಗಲು ಕಂಡುಬಂತು.

ಪೊಲೀಸ್ ಸರ್ಪಗಾವಲು: ಕಾನೂನು ಸುವ್ಯವಸ್ಥೆ ಮತ್ತು ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಈ ಬಾರಿ ನಗರದಲ್ಲಿ ಭಾರಿ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು. ಕೇಂದ್ರೀಯ ಗುಪ್ತ ದಳ, ರಾಜ್ಯ ಮತ್ತು ಜಿಲ್ಲಾ ಗುಪ್ತದಳದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಜಿಲ್ಲಾ ಅಪರಾಧ ಪತ್ತೆ ದಳದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಮಫ್ತಿಯಲ್ಲಿ ಆಯಕಟ್ಟಿನ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸಿದರು. ನಗರದ ಸೂಕ್ಷ್ಮ ಮತ್ತು ಹೆಚ್ಚು ಜನದಟ್ಟಣೆ ಏರ್ಪಡುವ ಸ್ಥಳಗಳಲ್ಲಿ ಹೈ ರೆಸಲ್ಯೂಷನ್ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಜನರ ಚಲನ ವಲನಗಳ ಮೇಲೆ ಕಣ್ಣಿಡಲಾಗಿತ್ತು. ಹೊರ ಜಿಲ್ಲೆಗಳಿಂದಲೂ ನೂರಾರು ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಅದರೊಂದಿಗೆ ಕೆಎಸ್‌ಆರ್‌ಪಿ, ರ್‍ಯಾಪಿಡ್ ಆ್ಯಕ್ಷನ್ ಫೋರ್ಸ್, ಹೋಂ ಗಾರ್ಡ್, ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಕೂಡ ಕರ್ತವ್ಯಕ್ಕೆ ನಿಯೋಜಿಸಲ್ಪಟ್ಟಿದ್ದರು. ನಗರದ ಹೊರವಲಯದ ಪ್ರದೇಶಗಳಾದ ಸಂಪಿಗೆಕಟ್ಟೆ, ತಾಳತ್ತಮನೆ, ಮೇಕೇರಿ ಕಡೆಗಳಲ್ಲಿ ಪೊಲೀಸ್ ಚೆಕ್ ಪೋಸ್ಟ್‌ಗಳನ್ನು ತೆರೆಯಲಾಗಿತ್ತು.

ಕರಗ ಪ್ರದಕ್ಷಿಣೆ

ವಿಜಯ ದಶಮಿಯ ದಿನ ನಗರದ 4 ಶಕ್ತಿ ದೇವತೆಗಳ ಕರಗಗಳು ಕೂಡ ನಗರ ಪ್ರದಕ್ಷಿಣೆ ನಡೆಸಿದವು. ಶಕ್ತಿ ದೇವಾಲಯಗಳಿಂದ ಪೂಜೆ ಸ್ವೀಕರಿಸಿ ಹೊರಟ ಕರಗಗಳು ದಶ ಮಂಟಪಗಳ ಬಳಿಗೆ ಆಗಮಿಸಿ ಮಂಟಪಗಳಿಂದ ಪೂಜೆ ಸ್ವೀಕರಿಸಿದವು. ಕರಗ ವೃತಧಾರಿಗಳು ಮಂಟಪಗಳ ಮುಂದೆ ನರ್ತಿಸುವ ಮೂಲಕ ಶೋಭಾಯಾತ್ರೆಯ ಯಶಸ್ವಿಗೆ ಹರಸಿದವು. ಮಂಟಪದ ಬಳಿ ಹಾಜರಿದ್ದ ಜನಸ್ತೋಮ ಕರಗಗಳಿಗೆ ನಮಿಸುವ ಮೂಲಕ ತಮ್ಮ ಭಕ್ತಿ ಪ್ರದರ್ಶಿಸಿದರು. ಬಳಿಕ ಕರಗಗಳು ಬೆಳಗಿನ ಜಾವ ಬನ್ನಿ ಮಂಟಪಕ್ಕೆ ತೆರಳಿ ಬನ್ನು ಕಡಿದು ಸ್ವಸ್ಥಾನಕ್ಕೆ ಮರಳಿದವು.

ಯೂತ್‌ಗ್ರೂಪ್‌ನಿಂದ ಮಂಡ್ಯ ದಸರಾ ಆಚರಣೆ



ಮಂಡ್ಯ, ಅ.24– ಹಲವು ವರ್ಷಗಳಿಂದ ವಿಜಯದಶಮಿ ದಿನದಂದು ಮಂಡ್ಯ ದಸರಾ ಮೂಲಕ ಹೊಸ ಸಾಂಸ್ಕೃತಿಕ ಪರಂಪರೆಗೆ ನಾಂದಿ ಹಾಡಿದ ಮಂಡ್ಯ ಯೂತ್ ಗ್ರೂಪ್ ಈ ಬಾರಿ ಸರಳವಾಗಿ ದಸರಾ ಆಚರಿಸಿದೆ. ಬರ ಪರಿಸ್ಥಿತಿ, ಕಾವೇರಿ ವಿವಾದ ಹಿನ್ನೆಲೆಯಲ್ಲಿ ಬನ್ನಿ ಮರಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸುವುದಕ್ಕಷ್ಟೇ ದಸರಾವನ್ನು ಸೀಮಿತಗೊಳಿಸಲಾಗಿತ್ತು.

ನಗರದ ಶ್ರೀಕಾಳಿಕಾಂಬ ದೇವಸ್ಥಾನ ಸಮೀಪದ ಗಜೇಂದ್ರ ಮೋಕ್ಷ ಕೊಳದ ಬಳಿಯ ಬನ್ನಿಮರದ ಬಳಿ ಸೇರಿದ ಗ್ರೂಪ್‌ನ ಪದಾಧಿಕಾರಿಗಳು, ಬೆಳಗ್ಗೆ 11ರಿಂದ 11.30ರವರೆಗೆ ಸಲ್ಲುವ ಧನುರ್ ಲಗ್ನದಲ್ಲಿ ಬನ್ನಿಮರಕ್ಕೆ ಪೂಜೆ ಸಲ್ಲಿಸಿದರು.

ಗ್ರೂಪ್ ಅಧ್ಯಕ್ಷ ಡಾ.ಅನಿಲ್ ಆನಂದ್ ಮಾತನಾಡಿ, ಬರಗಾಲ, ಕಾವೇರಿ ವಿವಾದ ಎದುರಾಗಿರುವ ಕಾರಣ ಅತ್ಯಂತ ಸರಳವಾಗಿ ಈ ಬಾರಿ ದಸರಾ ಆಚರಿಸಲಾಗುತ್ತಿದೆ. ಜನರು ಸಂಕಷ್ಟದಲ್ಲಿರುವಾಗ ಅದ್ಧೂರಿ ದಸರಾ ಆಚರಿಸುವುದು ಸರಿಯಲ್ಲ. ಬರ ಪರಿಸ್ಥಿತಿ ದೂರವಾಗಿ, ಕಾವೇರಿ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಲೆಂದು ಪ್ರಾರ್ಥಿಸುತ್ತಾ ಬನ್ನಿಮರಕ್ಕೆ ಪೂಜೆ ಸಲ್ಲಿಸಿ ಈ ಬಾರಿಯ ದಸರಾ ಅಂತ್ಯಗೊಳಿಸಲಾಗುತ್ತಿದೆ. ಮುಂದಿನ ವರ್ಷ ಜನರಿಗೆ ಎದುರಾಗಿ ರುವ ಸಂಕಷ್ಟಗಳೆಲ್ಲಾ ದೂರವಾಗಿ, ಉತ್ತಮ ಮಳೆಯಿಂದ ಎಲ್ಲೆಡೆ ಸಮೃದ್ಧಿ ನೆಲೆಸು ವಂತಾದರೆ ಅದ್ಧೂರಿಯಾಗಿ ಮಂಡ್ಯ ದಸರಾ ಆಚರಿಸಲಾಗುವುದು ಎಂದರು.

ದಸರಾ ಪ್ರಯುಕ್ತ ಬನ್ನಿ ಪೂಜೆಗೆ ಆಗಮಿಸಿದ್ದವರಿಗೆ ಸಿಹಿ ವಿತರಿಸಲಾಯಿತು. ಯೂತ್‌ಗ್ರೂಪ್‌ನ ಡಾ.ಯಾಶಿಕಾ, ದರ್ಶನ್, ರಾಜಣ್ಣ, ಮಲ್ಲೇಶ್, ನವೀನ್, ಅಪ್ಪಾಜಪ್ಪ, ನಿಂಗೇಗೌಡ, ಕೃಷ್ಣ ಪ್ರಸಾದ್, ಮಂಜು, ಸೀನಪ್ಪ ಸೇರಿದಂತೆ ಇತರರಿದ್ದರು.

ಗೋಣಿಕೊಪ್ಪದಲ್ಲಿ ಜನರನ್ನಾಕರ್ಷಿಸಿದ ವೈಭವದ ದಸರಾ



ಗೋಣಿಕೊಪ್ಪ, ಅ.24– ಗೋಣಿಕೊಪ್ಪ ದಸರಾ ಮಹೋತ್ಸವವು ವೈಭವದಿಂದ ನಡೆದು, ಸ್ತಬ್ಧಚಿತ್ರ ಸಾವಿರಾರು ಸಂದೇಶ ಸಾರಿದವು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಿಂದ ಆರಂಭಗೊಂಡ ಮೆರವಣಿಗೆ ಉಮಾಮಹೇಶ್ವರಿ ದೇವಸ್ಥಾನ ಸಮೀಪ ಸಮಾರೋಪಗೊಂಡಿತು. ಸಾಮಾಜಿಕ ಸಂದೇಶ ಸಾರುವ 7 ಚಿತ್ರಗಳು, ಇಲಾಖೆಗಳ 6 ಚಿತ್ರಗಳು ಪಾಲ್ಗೊಂಡಿದ್ದವು. ಚಿಲಿಪಿಲಿ ಕಲಾ ತಂಡದ ಗೊಂಬೆಯಾಟ ಜನಮನ ಗೆದ್ದಿತು. ಮೆರವಣಿಗೆಯ ಮುಂದಿನ ಸಾಲಿನಲ್ಲಿ ಗೊಂಬೆಗಳ ನರ್ತನ ವಿಶೇಷವಾಗಿತ್ತು.

ಸಾಮಾಜಿಕ ಸಂದೇಶ: ತಿತಿಮತಿ ಶ್ರೀರಾಮ ಮಂದಿರ ಪ್ರಸ್ತುತ ಪಡಿಸಿದ ಸನಾತನ ಧರ್ಮದ ಗುರುಕುಲ ಶಿಕ್ಷಣದ ಕಲಾಕೃತಿ ವಿಶೇಷವಾಗಿ ಆಕರ್ಷಿಸಿತು. ಆಲದ ಮರ, ಕೊಟ್ಟಿಗೆ, ಗುರುಕುಲ ಶಿಕ್ಷಣದಲ್ಲಿನ ಪ್ರಾಮುಖ್ಯತೆ, ಕಿತ್ತೂರುರಾಣಿ ಚೆನ್ನಮ್ಮ, ಸ್ವಾಮಿ ವಿವೇಕಾನಂದ, ಶಂಕರಾಚಾರ್ಯ, ಛತ್ರಪತಿ ಶಿವಾಜಿ ಮಹಾನ್ ಚೇತನಗಳ ಸಂದೇಶ ಸಾರಿತು.

ಸರ್ವಂ ತಂಡದ ಚಂದ್ರಯಾನ-3 ವಿಶೇಷವಾಗಿ ರೂಪಿಸಲಾಗಿತ್ತು. ಉಡಾವಣೆ, ವಿಕ್ರಂ ಲ್ಯಾಂಡರ್, ಶಿವಶಕ್ತಿ ಸಂದೇಶ ನೀಡಲಾಯಿತು. ಕಲಾಕೃತಿಗೆ ವಿಶೇಷ ಪ್ರಯತ್ನ ಗಮನ ಸೆಳೆಯಿತು. ಜೆ. ಬಿ. ಪುರುಷರ ಸ್ವಸಹಾಯ ಸಂಘದ ಬುಡಕಟ್ಟು ಜನಾಂಗ ಸಮಸ್ಯೆಯನ್ನು ಬಿತ್ತರಿಸಿತು. ಹುಲ್ಲಿನ ಜೋಪಡಿ, ಭದ್ರತೆ ಇಲ್ಲದ ವಾಸಸ್ಥಾನ, ಮೂಲಭೂತ ವ್ಯವಸ್ಥೆಗಳಿಲ್ಲದ ಶಿಕ್ಷಣ ವ್ಯವಸ್ಥೆ, ಪ್ಲಾಸ್ಟಿಕ್ ಬಳಕೆ ಇಲ್ಲದೆ ನಿರ್ಮಿಸಿದ ಚಿತ್ರಣ ವಿಶೇಷವಾಗಿ ಗಮನ ಸೆಳೆಯಿತು.

ಇದರೊಂದಿಗೆ ಭಗತ್‌ಸಿಂಗ್ ಸಂಘದ ಪಟಾಕಿ ಬಿಟ್ಬಾಕಿ ಸಂದೇಶ, ಪರಿಸರ ಪ್ರೇಮಿಯ ಸೈನಿಕ ಮತ್ತು ರೈತ ದೇಶದ ಬೆನ್ನೆಲುಬು ಎಂಬ ಸಂದೇಶ, ರುದ್ರ ಬಾಯ್ಸ್ ತಂಡದ ಪರಿಸರ ರಕ್ಷಣೆ, ಹಿಂದೂಸ್ಥಾನ್ ಫ್ರೆಂಡ್ಸ್ ತಂಡದ ಕಲಿತ ಶಿಕ್ಷಣ ಬೆಳಕಾಗಲಿ ಎಂಬ ಸಂದೇಶದ ಚಿತ್ರ ಗಮನ ಸೆಳೆಯಿತು.

ಪೊನ್ನಂಪೇಟೆ ತೋಟಗಾರಿಕಾ ಇಲಾಖೆ ವತಿಯಿಂದ ಪ್ರಸ್ತುತ ಪಡಿಸಿದ ತೋಟಗಾರಿಕೆ ಚಿತ್ರ ವಿಶೇಷ ಆಕರ್ಷಣೆಯಾಗಿತ್ತು. ಮಣ್ಣು, ಗಿಡಗಳ ಪೋಷಣೆ, ಜೇನು ಸಾಕಣೆ, ನೀರು ಸಿಂಪಡಣೆ, ಮಾನವನಿಂದ ಔಷಧ ಸಿಂಪಡಣೆ ಸೇರಿದಂತೆ ತೋಟಗಾರಿಕೆಯ ನೈಜತೆಯನ್ನು ಬಿಂಬಿಸಲಾಯಿತು. ಶಿಕ್ಷಣ ಇಲಾಖೆ ಹೆಣ್ಣು ಕಲಿತರೆ ಶಿಕ್ಷಣ, ಸಮಾಜ ಬೆಳಗುತ್ತದೆ ಎಂಬ ವಿಶೇಷ ಕಲಾಕೃತಿ, ಆರೋಗ್ಯ ಇಲಾಖೆ ವಿವಿಧ ರೋಗಗಳ ತಪಾಸಣೆ, ಆರೋಗ್ಯದ ಕಾಳಜಿ ಬಿಂಬಿಸಿತು. ಉಳಿದಂತೆ ಕೃಷಿ ಇಲಾಖೆ, ಜಲಜೀವನ್ ಮಿಷನ್, ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗಖಾತ್ರಿ ಯೋಜನೆಗಳ ಮಹತ್ವ, ಸರ್ಕಾರದ ಅಭಿವೃದ್ಧಿ ಪರ ಚಿಂತನೆ, ಮಹಿಳಾ ಸಬಲೀಕರಣದ ಮಾಹಿತಿಯನ್ನು ತಿಳಿಸಲಾಯಿತು.

ಫಲಿತಾಂಶ: ಸಾರ್ವಜನಿಕ ವಿಭಾಗದಲ್ಲಿ ತಿತಿಮತಿ ಶ್ರೀರಾಮ ಮಂದಿರ ಪ್ರಸ್ತುತ ಪಡಿಸಿದ ಸನಾತನ ಧರ್ಮದ ಗುರುಕುಲ ಶಿಕ್ಷಣ ಚಿತ್ರ ಪ್ರಥಮ, ಸರ್ವಂ ತಂಡದ ಚಂದ್ರಯಾನ-3 ದ್ವಿತೀಯ, ಜೆ. ಬಿ. ಪುರುಷರ ಸ್ವಸಹಾಯ ಸಂಘದ ಬುಡಕಟ್ಟು ಜನಾಂಗ ಸಮಾಜದಲ್ಲಿ ಎದುರಿಸುವ ಚಿತ್ರ ತೃತೀಯ ಸ್ಥಾನ ಗಿಟ್ಟಿಸಿಕೊಂಡಿತು.

ತೋಟಗಾರಿಕೆ ಪ್ರಥಮ: ಇಲಾಖೆಗಳಿಗೆ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಪೊನ್ನಂಪೇಟೆ ತೋಟಗಾರಿಕಾ ಇಲಾಖೆ ವತಿಯಿಂದ ಪ್ರಸ್ತುತ ಪಡಿಸಿದ್ದ ತೋಟಗಾರಿಕೆ ಚಿತ್ರ ಪ್ರಥಮ ಬಹುಮಾನ ಪಡೆದುಕೊಂಡಿತು. ಶಿಕ್ಷಣ ಇಲಾಖೆಯ ಹೆಣ್ಣೊಂದು ಕಲಿತರೆ ಎಂಬ ಸಂದೇಶದ ಚಿತ್ರಕ್ಕೆ ದ್ವಿತೀಯ, ಆರೋಗ್ಯ ಇಲಾಖೆಯ ಚಿತ್ರ ತೃತಿಯ ಸ್ಥಾನ ಪಡೆದುಕೊಂಡಿತು.

ಎಂಎಲ್‌ಸಿ ಸುಜಾ ಕುಶಾಲಪ್ಪ, ಸೌಮ್ಯ ಬಾಲು, ಕೋಣಿಯಂಡ ಅಪ್ಪಣ್ಣ, ಡಾ. ಯತಿರಾಜ್, ಅಕ್ಷರ ದಾಸೋಹ ಕೆ ರಾಜೇಶ್, ಕೃಷಿ ಇಲಾಖೆ ಶಿವಮೂರ್ತಿ, ಬಿಇಒ ಪ್ರಕಾಶ್, ದಸರಾ ಸಮಿತಿ ಅಧ್ಯಕ್ಷ ಕುಜಿತಂಡ ಪ್ರವೀಣ್, ಗೌ.ಅಧ್ಯಕ್ಷ ಪ್ರಭಾಕರ್ ನೆಲ್ಲಿತ್ತಾಯ, ಗೋಪಿ ಚೆಣ್ಣಪ್ಪ ಸುದೀಶ್, ಟಿ. ಎಲ್. ಶ್ರೀನಿವಾಸ್ ಇದ್ದರು.

ಬಸ್‌ನಿಂದ ಬಿದ್ದು ಪ್ರಯಾಣಿಕ ಸಾವು



ಹಿರಿಕ್ಯಾತನಹಳ್ಳಿ, ಅ.24–ಚಲಿಸುತ್ತಿದ್ದ ಬಸ್‌ನಿಂದ ಬಿದ್ದು ಪ್ರಯಾಣಿಕನೋರ್ವ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಹುಣಸೂರು ತಾಲೂಕಿನ ಕಟ್ಟೆ ಮಳಲವಾಡಿ ಬಸ್ ನಿಲ್ದಾಣದಲ್ಲಿ ಮಂಗಳವಾರ ನಡೆದಿದೆ.

ಹುಣಸೂರು ತಾಲೂಕಿನ ಹರವೆ ಗ್ರಾಮದ ರವಿ (35) ಮೃತ ಪ್ರಯಾಣಿಕ. ಈತ ಕೆ.ಆರ್.ನಗರ ತಾಲೂಕಿನ ಹಂಪಾಪುರ ಗ್ರಾಮದ ಅಕ್ಕನ ಮನೆಗೆ ಹಬ್ಬಕ್ಕೆ ಹೋಗಲು ಕಟ್ಟೆಮಳಲವಾಡಿ ಬಸ್ ನಿಲ್ದಾಣಕ್ಕೆ ಬಂದಿದ್ದ. ಈ ವೇಳೆ ಹುಣಸೂರಿನಿಂದ ಕೆ.ಆರ್.ನಗರ ಕಡೆಗೆ ತೆರಳುತ್ತಿದ್ದ ಬಸ್ ಹತ್ತುವಾಗ ಜಾರಿ ಬಿದ್ದು ಮುಂದಿನ ಚಕ್ರಕ್ಕೆ ಸಿಲುಕಿದ್ದಾನೆ. ಪರಿಣಾಮ ಈತನ ತಲೆಯ ಮೇಲೆ ಚಕ್ರ ಹರಿದು ಛಿದ್ರಗೊಂಡು ಮೆದುಳು ಹೊರಬಂದುಮೃತಪಟ್ಟಿದ್ದಾನೆ. ಮೃತನಿಗೆ ಪತ್ನಿ, ಪುತ್ರಿ ಹಾಗೂ ಪುತ್ರ ಇದ್ದಾರೆ. ಮೃತನ ಕುಟುಂಬಕ್ಕೆ ಹುಣಸೂರು ಡಿಪೋ ಮ್ಯಾನೇಜರ್ ಸುಬ್ರಹ್ಮಣ್ಯ ಕೆಎಸ್‌ಆರ್‌ಟಿಸಿಯಿಂದ 25 ಸಾವಿರ ರೂ. ನೀಡಿದರು. ಮತ್ತೆ 25 ಸಾವಿರ ರೂ. ಅನ್ನು ಬ್ಯಾಂಕ್ ಖಾತೆಗೆ ಹಾಕುವುದಾಗಿ ತಿಳಿಸಿದರು. ಈ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು

ಭಾರತೀನಗರ, ಅ.24– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಗುಡಿಗೆರೆ ಗೇಟ್ ಬಳಿ ನಡೆದಿದೆ.

ಆಲದಹಳ್ಳಿ ಗ್ರಾಮದ ನಿವಾಸಿ ಎ.ಎಂ.ಮಹೇಶ್‌ಕುಮಾರ್(30) ಸಾವನ್ನಪ್ಪಿದವರು. ಈತ ತನ್ನ ಮಾವನ ಉತ್ತರ ಕ್ರಿಯಾದಿ ಕಾರ್ಯಕ್ಕೆ ಅಗತ್ಯ ವಸ್ತುಗಳನ್ನು ಖರೀದಿಸಿ ಕೆ.ಎಂ.ದೊಡ್ಡಿಯಿಂದ ಬಿದರಹಳ್ಳಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಗುಡಿಗೆರೆ ಬಳಿ ಮಳವಳ್ಳಿ ಕಡೆಯಿಂದ ಎದುರಿಗೆ ಬಂದ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮಹೇಶ್ ಕುಮಾರ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆ.ಎಂ.ದೊಡ್ಡಿ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಾವೇರಿ ಹೋರಾಟ 50 ದಿನ ಪೂರೈಸಿದ ಹಿನ್ನೆಲೆ

ಕಪ್ಪು ಬಾವುಟ ಪ್ರದರ್ಶಿಸಿ ಕರಾಳ ದಿನ ಆಚರಣೆ



ಮಂಡ್ಯ, ಅ.24– ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸೂಚನೆ ಮೇರೆಗೆ ತಮಿಳುನಾಡಿಗೆ ನಿತ್ಯ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ನಡೆಯುತ್ತಿರುವ ಹೋರಾಟ 50 ದಿನ ಪೂರೈಸಿದ ಹಿನ್ನೆಲೆಯಲ್ಲಿ ಹೋರಾಟಗಾರರು ವಿಜಯದಶಮಿಯಂದು ಕಪ್ಪು ಬಾವುಟ ಪ್ರದರ್ಶಿಸಿ ಕರಾಳ ದಿನ ಆಚರಿಸಿದರು.


ಮಂಗಳವಾರ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಸರ್‌ಎಂವಿ ಪ್ರತಿಮೆವರೆಗೆ ನಡೆದ ಪಾದಯಾತ್ರೆಯಲ್ಲಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹೋರಾಟಗಾರರಿಗೆ ರೈತ, ದಲಿತ, ಪ್ರಗತಿಪರ ಹಾಗೂ ಕನ್ನಡಪರ ಸಂಘಟನೆ ಕಾರ್ಯಕರ್ತರು ಸಾಥ್ ನೀಡಿದರು. ಬಳಿಕ ಕಪ್ಪು ಬಾವುಟ ಪ್ರದರ್ಶಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿಗಾಗಿ ಮಂಡ್ಯ ಸೇರಿದಂತೆ ನಾಡಿನ ಎಲ್ಲಾ ಜಿಲ್ಲೆಗಳಲ್ಲಿ ಹೋರಾಟ ನಡೆಯುತ್ತಿದ್ದರೂ ಸರ್ಕಾರ ನೀರು ನಿಲ್ಲಿಸದೆ ನಿರ್ಲಕ್ಷ್ಯ ತೋರಿದ್ದು, ಸರ್ಕಾರದ ಮೌನ ನಡೆ ಹೋರಾಟಗಾರರ ಪಾಲಿಗೆ ವಿಜಯದಶಮಿ ಕರಾಳ ದಿನವಾಗಿ ಪರಿಣಮಿಸಿದೆ. ಹಾಗಾಗಿ ಕಪ್ಪು ಬಾವುಟ ಪ್ರದರ್ಶಿಸಿ ಆಳುವ ಸರ್ಕಾರದ ನಡೆ ಖಂಡಿಸಿದ್ದೇವೆ ಎಂದರು.

ಕೃಷ್ಣರಾಜಸಾಗರ ಸೇರಿದಂತೆ ಕಾವೇರಿ ಕೊಳ್ಳದ 4 ಜಲಾಶಯಗಳ ನಿರ್ವಹಣೆ ಹೊಣೆ ಹೊತ್ತ ರಾಜ್ಯ ಸರ್ಕಾರ ನೆರೆ ರಾಜ್ಯಕ್ಕೆ ನಿರಂತರವಾಗಿ ನೀರು ಹರಿಸುತ್ತಿರುವ ಪರಿಣಾಮ ಜಲಾಶಯಗಳು ಬರಿದಾಗುತ್ತಿವೆ. ಎರಡೂ ರಾಜ್ಯಗಳ ನಡುವೆ ಮಾತುಕತೆಗೆ ಮುಂದಾಗದ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ. ರೈತರ ಪಾಲಿಗೆ ಆಳುವ ಸರ್ಕಾರಗಳು ಕಂಟಕಪ್ರಾಯವಾಗಿದೆ. ರಾಜ್ಯ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ಸ್ಥಗಿತಗೊಳಿಸಬೇಕು. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಸಂಕಷ್ಟ ಕಾಲದಲ್ಲಿ ಪರಿಹಾರ ರೂಪಿಸಬೇಕು ಎಂದು ಒತ್ತಾಯಿಸಿದರು.


ಈ ವೇಳೆ ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಮೈಷುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ, ಮುಖಂಡರಾದ ಬೋರೇಗೌಡ, ಅಶೋಕ್, ಚಂದ್ರಶೇಖರ್, ಕೃಷ್ಣಪ್ರಕಾಶ್, ಕನ್ನಡ ಸೇನೆ ಮಂಜುನಾಥ್, ವೇಣು, ನಾರಾಯಣ್, ಜಯಶೀಲ, ವೆಂಕಟೇಶ್, ಉಮೇಶ್, ಕೃಷ್ಣ, ಬಸವರಾಜು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ನಾಗರತ್ನಮ್ಮ ನಿಧನ



ತಿ.ನರಸೀಪುರ: ಇಲ್ಲಿನ ಭೈರಾಪುರ ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಹಾಗೂ ತಿರುಮ ಕೂಡಲಿನ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ನಾಗರತ್ನಮ್ಮ(64) ಮಂಗಳವಾರ ನಿಧನರಾದರು. ಮೃತರು ಪತಿ ಕೃಷ್ಣನಾಯಕ, ಪುತ್ರಿ ಮತ್ತು ಪುತ್ರ ಅಗಲಿದ್ದಾರೆ. ಪಟ್ಟಣದ ಕಾವೇರಿ ನದಿ ದಡದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೆಗೌಡ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಕಾಂಗ್ರೆಸ್ ಮುಖಂಡ ಪಿ.ಸ್ವಾಮಿನಾಥ್‌ಗೌಡ, ಡಿಕೆಶಿ ಅಭಿಮಾನಿ ಬಳಗದ ತಾಲೂಕು ಅಧ್ಯಕ್ಷ ಆರ್.ಚೇತನ್, ಗ್ರಾಪಂ ಮಾಜಿ ಅಧ್ಯಕ್ಷ ಕರಿಯಪ್ಪ, ಮಾಜಿ ಉಪಾಧ್ಯಕ್ಷ ಪುಟ್ಟಿ, ಕುಮಾರ ಅಂತಿಮ ದರ್ಶನ ಪಡೆದರು.

ಮುದ್ದೆ ಹೋಟೆಲ್ ಶಿವಣ್ಣ



ಸರಗೂರು: ಪಟ್ಟಣದ ಶಂಕರ್ ಚಿತ್ರ ಮಂದಿರ ಹತ್ತಿರದ ಮುದ್ದೆ ಹೋಟೆಲ್ ಶಿವಣ್ಣ (78) ಮಂಗಳವಾರ ನಿಧನರಾದರು. ಮೃತರು ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಹಾಗೂ ಅಪಾರ ಬಂಧು-ಬಳಗ ಇದ್ದಾರೆ. ಪಟ್ಟಣದ 11ನೇ ವಾರ್ಡ್‌ನ ಬಿಡಗಲು ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾ.ನಗರ ಜಿಲ್ಲೆಯಲ್ಲಿ ಆಯುಧಪೂಜೆ, ವಿಜಯದಶಮಿ ಆಚರಣೆ



ಚಾಮರಾಜನಗರ, ಅ.24– ಜಿಲ್ಲೆಯಾದ್ಯಂತ ಸೋಮವಾರ ಆಯುಧ ಪೂಜೆ ಮತ್ತು ಮಂಗಳವಾರ ವಿಜಯದಶಮಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಆಯುಧಪೂಜೆ ಅಂಗವಾಗಿ ಸರ್ಕಾರಿ ಕಚೇರಿಗಳು, ಬಸ್ ಡಿಪೋ, ಲಾರಿ, ಆಟೋ ನಿಲ್ದಾಣ, ಮನೆ, ಅಂಗಡಿ-ಮುಂಗಟ್ಟುಗಳಲ್ಲಿ ಪೂಜೆ ಸಲ್ಲಿಸಿ, ಸಿಹಿ ಹಚ್ಚಿದರು. ಜಿಲ್ಲಾದ್ಯಂತ ಎಲ್ಲಾ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು.

ಹಬ್ಬದ ಅಂಗವಾಗಿ ಮನೆಗಳ ಮುಂದೆ ಮಹಿಳೆಯರು ಬಣ್ಣ-ಬಣ್ಣದ ರಂಗೋಲಿಗಳನ್ನು ಬಿಡಿಸಿ, ಮನೆ ಬಾಗಿಲಿಗೆ ಮಾವಿನಸೊಪ್ಪಿನ ತೋರಣ ಹಾಕಿ ಅಲಂಕರಿಸಿದ್ದರು. ಪುರುಷರು ವಾಹನ, ಯಂತ್ರೋಪಕರಣ ಹಾಗೂ ಆಯುಧಗಳನ್ನು ಸ್ವಚ್ಛಗೊಳಿಸಿ, ಬಾಳೆ ಕಂದು, ಹೂವಿನ ಹಾರಗಳಿಂದ ವಾಹನಗಳನ್ನು ಸಿಂಗರಿಸಿದ್ದರು. ವಾಹನಗಳಿಗೆ ವಿಭೂತಿ, ಕುಂಕುಮ, ಅರಿಶಿನ ಹಚ್ಚಿ, ಮಂಗಳಾರತಿ ಮಾಡಿ, ತೆಂಗಿನಕಾಯಿ, ಕುಂಬಳಕಾಯಿ ಒಡೆದು ಪೂಜೆ ಸಲ್ಲಿಸಿದರು.

ಬಳಿಕ, ದೇವಾಲಯಗಳಿಗೆ ಕುಟುಂಬ ಸಮೇತರಾಗಿ ತೆರಳಿ ಪೂಜೆ ಸಲ್ಲಿಸಿದರು. ಸ್ನೇಹಿತರು, ನೆಂಟರಿಷ್ಟರೊಂದಿಗೆ ಸೇರಿ ಅವಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಕ್ರೀಡಾ ಸಾಮಗ್ರಿಗೆ ಪೂಜೆ: ತಾಲೂಕಿನ ವೆಂಕಟಯ್ಯನಛತ್ರ ಗ್ರಾಮದಲ್ಲಿ ಆಯುಧ ಪೂಜೆ ಹಬ್ಬದ ಪ್ರಯುಕ್ತ ಫ್ರೆಂಡ್ಸ್ ಕ್ಲಬ್ ವತಿಯಿಂದ ಖೋ-ಖೋ ಹಾಗೂ ವಾಲಿಬಾಲ್ ಅಂಕಣವನ್ನು ಹಾಗೂ ಕ್ರೀಡಾ ಸಾಮಗ್ರಿಗಳನ್ನು ಸ್ವಚ್ಛಗೊಳಿಸಿ, ಅಲಂಕರಿಸಿ ಪೂಜೆ ಸಲ್ಲಿಸಲಾಯಿತು.

ಈ ವೇಳೆ ದೈಹಿಕ ಶಿಕ್ಷಕರಾದ ನಟರಾಜ್, ಫ್ರೆಂಡ್ಸ್ ಕ್ಲಬ್ ಸದಸ್ಯರಾದ ಸತೀಶ್, ಮಹದೇವಪ್ರಸಾದ್, ಚಂದು, ಪ್ರಸಾದ್, ನಿತಿನ್, ಸುರೇಶ್, ಮಹೇಶ್, ಶಂಕರ್, ಮಹದೇವಸ್ವಾಮಿ, ಮಣಿಕಂಠ, ಚೇತನ್, ಕಿರಣ್ ಸೇರಿದಂತೆ ಕ್ರೀಡಾಪಟುಗಳು ಹಾಜರಿದ್ದರು.

ಮಾಂಸದ ವ್ಯಾಪಾರ ಜೋರು: ನಗರದ ಮಾಂಸದ ಮಾರುಕಟ್ಟೆಯಲ್ಲಿ ಮಂಗಳವಾರ ಕುರಿ, ಮೇಕೆ, ಆಡು, ಕೋಳಿ ಮಾಂಸಕ್ಕೆ ಹೆಚ್ಚಿನ ಬೇಡಿಕೆ ಕಂಡು ಬಂದಿತು.

ಆಯುಧಪೂಜೆ ಮುಗಿದ ನಂತರ ಬಹುತೇಕರು ಮಾರನೇ ದಿನ ಮನೆಯಲ್ಲಿ ಮಾಂಸದ ಅಡುಗೆ ಮಾಡುವುದು ವಾಡಿಕೆ. ಹೀಗಾಗಿ, ಮಂಗಳವಾರ ಬೆಳಗ್ಗೆಯಿಂದಲೇ ಕುರಿ, ಮೇಕೆ, ಆಡು, ಕೋಳಿ ಮಾಂಸದ ವ್ಯಾಪಾರ ಜೋರಾಗಿತ್ತು. ಕೋಳಿ ಮಾಂಸಕ್ಕೆ ಕೆಜಿಗೆ 200ರೂ., ಕುರಿ ಮಾಂಸ ಕೆಜಿಗೆ 700ರೂ.ಗೆ ಮಾರಾಟವಾಗುತ್ತಿತ್ತು.

ಮಾದಪ್ಪನಿಗೆ ಉಯ್ಯಾಲೋತ್ಸವ, ಒಡವೆ ಅಲಂಕಾರ



ಜಿಲ್ಲೆಯ ಹನೂರು ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟದ ಮಹ ದೇಶ್ವರಸ್ವಾಮಿ ದೇವಾಲಯದಲ್ಲಿ ಮಹಾನವಮಿ ಹಾಗೂ ವಿಜಯದಶಮಿ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು.

ನವರಾತ್ರಿ ಆರಂಭದೊಂದಿಗೆ ಮಾದಪ್ಪನ ಬೆಟ್ಟದಲ್ಲಿ ವ್ರತ ಹಾಗೂ ಉಯ್ಯಾಲೋತ್ಸವ ಆರಂಭಗೊಂಡಿದ್ದು, ಕುದುರೆ ವಾಹನೋತ್ಸವ, ದಶಮಿ ಪೂಜೆ ನೆರವೇರಿಸಲಾಯಿತು. ಸಾಲೂರು ಬೃಹನ್ಮಠದ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿಯ ಸಮ್ಮುಖದಲ್ಲಿ ಬೇಡಗಂಪಣ ಬುಡಕಟ್ಟು ಪರಂಪರೆಯ ಪದ್ಧತಿಯಂತೆ ಮಹದೇಶ್ವರ ಸ್ವಾಮಿಗೆ ದಸರಾ ಪೂಜೆ ಹಾಗೂ ಮಹಾನವಮಿಯ ಪೂಜಾ ಕಾರ್ಯ ನಡೆಯಿತು.

ಉಯ್ಯಾಲೋತ್ಸವ: ನವರಾತ್ರಿ ಸಂದರ್ಭದಲ್ಲಿ ಪ್ರತಿದಿನ ದೇವಾಲಯದಲ್ಲಿ ಉಯ್ಯಾಲೋತ್ಸವ ನಡೆಸಲಾಗುತ್ತಿದ್ದು, ಆಯುಧ ಪೂಜೆಯಂದು ವಿಶೇಷವಾಗಿ ಈ ಉತ್ಸವ ನಡೆಸಲಾಯಿತು.

ಮೈಸೂರು ಅರಸರು ಕೊಟ್ಟ ಆಭರಣ: ವಿಜಯ ದಶಮಿಯಂದು ಮಹದೇಶ್ವರ ಸ್ವಾಮಿಗೆ ಮೈಸೂರು ಸಂಸ್ಥಾನದ ಅರಸರು ಕೊಡುಗೆಯಾಗಿ ನೀಡಿದ ಒಡವೆಗಳ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು.

ಮೈಸೂರು ಮಿತ್ರ ಬುಧವಾರ 25 ಅಕ್ಟೋಬರ್ 2023

ಚಾಮುಂಡೇಶ್ವರಿ ದರ್ಶನ; ಭಕ್ತಿಯ ಪರಾಕಾಷ್ಠೆ ಮೆರೆದ ಜನಸಾಗರ

ಲಕ್ಷಾಂತರ ಮೊಬೈಲ್‌ಗಳಲ್ಲಿ ವೈಭವದ ಪರಂಪರೆ ಸೆರೆ



ಮೈಸೂರು,ಅ.24(ಪಿಎಂ)– ಗಂಟೆಗಟ್ಟಲೇ ಕಾದು ಕುಳಿತಿದ್ದ ಭಾರೀ ಜನಸಾಗರವು ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ದರ್ಶನ ಆಗುತ್ತಿದ್ದಂತೆ ಭಕ್ತಿಭಾವದಿಂದ ನಮಸ್ಕರಿಸಿ, ಜೈಕಾರ ಹಾಕಿ ಭಕ್ತಿಯ ಪರಾಕಾಷ್ಠೆ ಮೆರೆದರು.

ಪ್ರತಿವರ್ಷ ಜಂಬೂಸವಾರಿ ಮೆರವಣಿಗೆ ಕಣ್ತುಂಬಿಕೊಳ್ಳಲು ಅಪಾರ ಜನಸ್ತೋಮವೇ ನೆರೆಯುತ್ತದೆ. ಭಾರೀ ಸಂಖ್ಯೆಯ ಜನಜಂಗುಳಿ ಇದ್ದೆಡೆ ನೂಕುನುಗ್ಗಲು ಸಾಮಾನ್ಯ. ಇಂತಹ ಸನ್ನಿವೇಶದಲ್ಲಿ ಎದುರಾಗುವ ಅಡೆತಡೆ, ಪರಿತಾಪ ಸಾಕಷ್ಟು, ಬಿಸಿಲಿನ ತಾಪ, ಬಾಯಾರಿಕೆ, ಹಸಿವು ಸೇರಿದಂತೆ ಅನೇಕ ಸಂಕಷ್ಟದ ನಡುವೆ ಅಂತಿಮವಾಗಿ ಚಾಮುಂಡೇಶ್ವರಿ ದರ್ಶನ ಪಡೆದಾಗ, ಅನುಭವಿಸಿದ ಎಲ್ಲಾ ಯಾತನೆ, ಅದರಿಂದ ಉಂಟಾದ ಆಯಾಸವೂ ದೂರವಾಗಿ ಭಕ್ತಿಯ ಸಿಂಚನದಲ್ಲಿ ಮನಸ್ಸು ತೇಲಾಡುತ್ತದೆ.

ಇಂತಹ ಅನುಭವವನ್ನು ಪ್ರತಿ ಬಾರಿಯಂತೆ ಈ ವರ್ಷವೂ ಲಕ್ಷಾಂತರ ಮಂದಿ ಪಡೆದು ಸಂತೃಪ್ತರಾದರು. 'ಜೈ ಚಾಮುಂಡೇಶ್ವರಿ' ಎಂದು ಕೂಗಿ ತಾಯಿ ಕೃಪೆಗೆ ಪಾತ್ರರಾದರು. ಅಲ್ಲದೆ, ತಮ್ಮ ಮೊಬೈಲ್‌ಗಳಲ್ಲಿ ವರ್ಷಕ್ಕೊಮ್ಮೆ ಮಾತ್ರ ಕಾಣಸಿಗುವ ಈ ಅಪರೂಪದ ದೃಶ್ಯವನ್ನು ಸೆರೆ ಹಿಡಿದು ಸಂಭ್ರಮಿಸಿದರು. ಜೊತೆಗೆ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ವಿಗ್ರಹ ಹೊತ್ತ ಅಭಿಮನ್ಯು ಒಳಗೊಂಡಂತೆ ಸೆಲ್ಫಿ ತೆಗೆದುಕೊಂಡು ಸಂತಸಪಟ್ಟರು. ಅಲ್ಲದೆ, ನಾಡಿನ ಕಲಾಲೋಕವನ್ನು ಕಟ್ಟಿಕೊಡುವ ಹಾಗೂ ದೇಶದ ಅಪರೂಪದ ಸಾಂಸ್ಕೃತಿಕ ವೈಭವ ಅನಾವರಣಗೊಳ್ಳುವ ಮೆರವಣಿಗೆಯ ಕಲಾ ಪ್ರದರ್ಶನವನ್ನೂ, ಲಕ್ಷಾಂತರ ಮಂದಿ ತಮ್ಮ ಮೊಬೈಲ್‌ಗಳಲ್ಲಿ ಚಿತ್ರೀಕರಿಸಿ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಆಸ್ವಾದಿಸಿದರು. ನಾಡು–ದೇಶದ ಪರಂಪರೆ, ಸಾಧನೆ ಬಿಂಬಿಸುವ ಸ್ತಬ್ಧ ಚಿತ್ರಗಳೂ ಜನಸ್ತೋಮದ ಕಣ್ಣಿಗೆ ಹಬ್ಬವಾಗುವ ಜೊತೆಗೆ ಅವರ ಮೊಬೈಲ್ ಗಳಲ್ಲಿ ಸೆರೆಯಾದವು.

14 ಆನೆಯಲ್ಲಿ ಜಂಬೂಸವಾರಿಯಲ್ಲಿ ಸಾಗಿದ್ದು 9 ಆನೆಗಳು ಮಾತ್ರ

ಮೈಸೂರು,ಅ.24(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವಕ್ಕೆ ಈ ಬಾರಿ ಎರಡು ತಂಡಗಳಲ್ಲಿ 14 ಆನೆಗಳನ್ನು ಕರೆತರಲಾಗಿತ್ತು. ಆದರೆ, ಜಂಬೂಸವಾರಿ ಮೆರವಣಿಗೆಯಲ್ಲಿ ಕೇವಲ 9 ಆನೆಗಳನ್ನು ಮಾತ್ರ ಕರೆದೊಯ್ಯಲಾಯಿತು.

ಅಂಬಾರಿ ಆನೆಯಾಗಿ ಅಭಿಮನ್ಯು, ಕುಮ್ಕಿ ಆನೆಗಳಾಗಿ ವಿಜಯ, ವರಲಕ್ಷ್ಮಿ ಸಾಗಿದರೆ, ನಿಶಾನೆ ಆನೆ ಅರ್ಜುನ, ನೌಫತ್ ಆನೆಯಾಗಿ ಭೀಮ, ಗೋಪಿ, ಸಾಲಾನೆಯಾಗಿ ಮಹೇಂದ್ರ, ಧನಂಜಯ, ಪ್ರಶಾಂತ ಆನೆಯನ್ನು ಕರೆದೊಯ್ಯಲಾಯಿತು. ಇದರಿಂದ 14 ಆನೆಗಳಲ್ಲಿ 7 ಗಂಡಾನೆಗಳು, ಎರಡು ಹೆಣ್ಣಾನೆ ಸೇರಿ 9 ಆನೆಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿ ಎಲ್ಲರ ಮೆಚ್ಚುಗೆಗೆ ಪಾತ್ರವಾದವು.

ಅರಮನೆ ಉಳಿದ 5 ಆನೆಗಳು: ಈ ಬಾರಿ ಇದೇ ಮೊದಲ ಬಾರಿಗೆ ಆಗಮಿಸಿದ 4 ಹೊಸ ಆನೆ ಹಾಗೂ ಎರಡನೇ ಬಾರಿಗೆ ಆಗಮಿಸಿದ್ದ ಒಂದು ಆನೆಯನ್ನು ಅರಮನೆಯಲ್ಲಿ ಕಟ್ಟಿ ಹಾಕಲಾಗಿತ್ತು. ಭರವಸೆ ಮೂಡಿಸಿದ್ದ ಹೊಸ ಆನೆ ಕಂಜನ್, ಸಿಡಿಮದ್ದು ತಾಲೀಮಿನ ವೇಳೆ ಬೆದರಿದ್ದ ರೋಹಿತ, ಹೊಸ ಹೆಣ್ಣಾನೆಗಳಾದ ಹಿರಣ್ಯಾ, ಲಕ್ಷ್ಮಿ ಹಾಗೂ ಎರಡನೇ ಬಾರಿಗೆ ಆಗಮಿಸಿದ್ದ ಸುಗ್ರೀವ ಆನೆಯನ್ನು ಜಂಬೂಸವಾರಿಯಿಂದ ಮುನ್ನೆಚ್ಚರಿಕಾ ಕ್ರಮವಾಗಿ ದೂರ ಇಡಲಾಗಿತ್ತು

ಪಾಸ್ ಕೊಟ್ಟವರು ಅಂಬಾರಿ ಮರೆಮಾಚಿದರು!

ಅಸಮರ್ಪಕ ಆಸನ ವ್ಯವಸ್ಥೆಗೆ ಹಿಡಿಶಾಪ

ಮೈಸೂರು, ಅ.24(ಎಂಟಿವೈ)– ಜಂಬೂ ಸವಾರಿ ವೀಕ್ಷಣೆಗಾಗಿ ಜಿಲ್ಲಾಡಳಿತ ನೀಡಿದ್ದ ಕಾಟಾಚಾರದ ಪಾಸ್ ಪಡೆದು ಅರಮನೆಗೆ ಬಂದಿದ್ದ ನೂರಾರು ಮಂದಿ ಭಾರೀ ನಿರಾಸೆ ಅನುಭವಿಸಿದರು. ಕೊನೆಗೆ ಹಿಡಿಶಾಪ ಹಾಕಿದರು.

ಜಿಲ್ಲಾಡಳಿತದಿಂದ ಆರ್–ಬ್ಲಾಕ್‌ನಲ್ಲಿ ಕುಳಿತು ಜಂಬೂ ಸವಾರಿ ವೀಕ್ಷಿಸಲು 500ಕ್ಕೂ ಹೆಚ್ಚು ಮಂದಿಗೆ ಪಾಸ್ ನೀಡಲಾಗಿತ್ತು. ಪಾಸ್ ಮೇಲೆ 'ವಿಐಪಿ ಆಹ್ವಾನಿತರು' ಎಂದು ಬರೆಯಲಾಗಿತ್ತು. ಜಯಮಾರ್ತಾಂಡ ದ್ವಾರ ಗೇಟ್ ನಂ–3ಎ ನಿಂದ ಪ್ರವೇಶ ಪಡೆಯಲು ಸೂಚನೆ ನೀಡಲಾಗಿತ್ತು. ಆದರೆ, ಆ ಪಾಸ್ ಹೊಂದಿರುವವರಿಗೆ ಕುಳಿತುಕೊಳ್ಳಲು ಮಾಡಿದ್ದ ಆಸನದ ವ್ಯವಸ್ಥೆ ಮಾತ್ರ ಕೇವಲ ಸ್ತಬ್ಧಚಿತ್ರ ಹಾಗೂ ಜಾನಪದ ಕಲಾತಂಡಗಳ ವೀಕ್ಷಣೆಗೆ ಸೀಮಿತವಾಗಿತ್ತು.

ಗನ್‌ಹೌಸ್ ಕಡೆಗೆ ಮುಖ ಮಾಡಿ, ಕೋಟೆ ಆಂಜನೇಯ ಸ್ವಾಮಿ ದೇವಾಲಯದ ದಿಕ್ಕಿಗೆ ಬೆನ್ನು ಮಾಡಿ ಕೂರುವಂತೆ ಮೆಟ್ಟಿಲು ಮಾದರಿಯಲ್ಲಿ ಸ್ಟೇಜ್ ಹಾಕಿ ಆಸನದ ವ್ಯವಸ್ಥೆ ಮಾಡ ಲಾಗಿತ್ತು. ಆದರೆ, ಈ ಭಾಗದಲ್ಲಿ ಕುಳಿತಿದ್ದ ಜನರಿಗೆ ದಸರಾ ಗಜಪಡೆ ಮಾತ್ರವಲ್ಲದೆ, ಅಂಬಾರಿಯನ್ನು ದೂರದಿಂದಲೂ ನೋಡುವುದಕ್ಕೂ ಸಾಧ್ಯವಾಗದಂತೆ ಅವ್ಯವಸ್ಥೆ ಮಾಡಲಾಗಿತ್ತು. ಇದರಿಂದ ಆ ಭಾಗದಲ್ಲಿ ಕುಳಿತಿದ್ದ 500ಕ್ಕೂ ಹೆಚ್ಚು ಮಂದಿ ಹಿಡಿಶಾಪ ಹಾಕಿ, ನಿರಾಸೆಯೊಂದಿಗೆ ಅರಮನೆಯಿಂದ ಹೊರ ನಡೆದರು.

ಪತ್ರಕರ್ತರೇ ಟಾರ್ಗೆಟ್: ಇದ್ದೂ ಇಲ್ಲದಂತೆ ಆಸನದ ವ್ಯವಸ್ಥೆ ಮಾಡಿದ್ದ ಸ್ಥಳಕ್ಕಾಗಿ ಮುದ್ರಿಸಿದ್ದ ಪಾಸ್ ಅನ್ನು ದುರುದ್ದೇಶಪೂರ್ವಕವಾಗಿ ಪತ್ರಕರ್ತರಿಗೆ ವಿತರಿಸಲಾಗಿತ್ತು. ಪತ್ರಕರ್ತರ ಕುಟುಂಬ ಸದಸ್ಯರಿಗಾಗಿ ಜಿಲ್ಲಾಡಳಿತ ನೀಡಿದ್ದ ತಲಾ ಒಂದೊಂದು ಪಾಸ್ ಪಡೆದು ಹೋದ ಜನರಿಗೆ ಅಂಬಾರಿ ನೋಡುವ ಅವಕಾಶವೂ ಒದಗಲಿಲ್ಲ. ಮುಂಬರುವ ವರ್ಷಗಳಲ್ಲಿ ಈಗ ಮಾಡಿದ್ದ 'ಆರ್' ಬ್ಲಾಕ್‌ನಲ್ಲಿ ಆಸನದ ವ್ಯವಸ್ಥೆ ಮಾಡಿ ನಮಗೆ ನಿರಾಸೆ ಮಾಡಬೇಡಿ ಎಂದು ತಾಕೀತು ಮಾಡಿದರು.

ಸುತ್ತೂರು ಮಠಕ್ಕೆ ಸಿಎಂ ಭೇಟಿ



ಮೈಸೂರು,ಅ.24(ಜಿಎ)– ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಮಂಗಳವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯರ ಆಶೀರ್ವಾದ ಪಡೆದರು.

ಮಠದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪೂರ್ಣಕುಂಭ ಸ್ವಾಗತ ನೀಡಲಾಯಿತು. ನಂತರ ಸುತ್ತೂರು ಶ್ರೀಗಳೊಂದಿಗೆ ಮುಖ್ಯಮಂತ್ರಿಗಳು ಕುಶಲೋಪರಿ ನಡೆಸಿದರು. ಬಳಿಕ ಸುತ್ತೂರು ಶ್ರೀಗಳು ಮುಖ್ಯಮಂತ್ರಿಗಳಿಗೆ ತಾಯಿ ಚಾಮುಂಡೇಶ್ವರಿ ಪ್ರತಿಕೃತಿ ನೀಡಿ ಆಶೀರ್ವದಿಸಿದರು.


ಇದಕ್ಕೂ ಮುನ್ನ ಮೈಸೂರಿನ ರಾಮಕೃಷ್ಣ ನಗರದ ತಮ್ಮ ನಿವಾಸದ ಬಳಿ ಮಾಧ್ಯಮಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳು, ರಾಜ್ಯದಲ್ಲಿ ಮಳೆ ಬೆಳೆಯಾಗಿ, ರಾಜ್ಯ ಸುಭಿಕ್ಷವಾಗಲೆಂದು ಚಾಮುಂಡೇಶ್ವರಿ ತಾಯಿಯನ್ನು ಪ್ರಾರ್ಥಿಸುವುದಾಗಿ ತಿಳಿಸಿದರು.


ಮಳೆಯ ಅಭಾವ, ವಿದ್ಯುತ್ ಕೊರತೆಯಿಂದ ರೈತರಿಗೆ ತೊಂದರೆಯಾಗಿದೆ. ರಾಜ್ಯದಲ್ಲಿ ಮಳೆಯಾಗಿ, ರೈತರು ಬೆಳೆದ ಬೆಳೆಗಳು ಉಳಿಯುವಂತಾಗಲೆಂದು ವಿಜಯದಶಮಿ ಮೆರವಣಿಗೆಯಾದ ಇಂದು ಚಾಮುಂಡೇಶ್ವರಿ ತಾಯಿಯಲ್ಲಿ ವಿಶೇಷವಾಗಿ ಪ್ರಾರ್ಥಿಸುತ್ತೇನೆ ಎಂದು ಹೇಳಿದರು.

ಮೈಸೂರು ಅರಮನೆಯಲ್ಲಿ ರೋಮಾಂಚನಕಾರಿ ವಜ್ರಮುಷ್ಠಿ ಕಾಳಗ

ರಕ್ತ ಚಿಮ್ಮಿಸಲು ಸೆಣಸಾಟ ನಡೆಸಿದ ಜಗಜಟ್ಟಿಗಳು

- ರೋಚಕತೆ ಮೂಡಿಸಿದ ಜಟ್ಟಿಗಳ ಸೆಣಸಾಟ
- ವಿಜೇತರಿಗೆ ರಾಜವಂಶಸ್ಥ ಯದುವೀರ್ ಭಕ್ಷಿಸ್
- ಮೈನವಿರೇಳಿಸುವ ಕಾಳಗ ವೀಕ್ಷಿಸಿದ ಸಾವಿರಾರು ಜನ





ಮೈಸೂರು, ಅ.24(ಬಿಎಲ್‌ಯು)– ಮೈಸೂರು ಅರಮನೆಯಲ್ಲಿ ಇಂದು ಮೈನವಿರೇಳಿಸುವ ಜಗಜಟ್ಟಿಗಳ ಸಾಂಪ್ರದಾಯಿಕ ವಜ್ರಮುಷ್ಠಿ ಕಾಳಗ ನಡೆಯಿತು. ರಕ್ತ ಚಿಮ್ಮುವ ತನಕ ನಡೆದ ಜಟ್ಟಿಗಳ ಸೆಣಸಾಟ ತುಂಬಾ ರೋಮಾಂಚನಕಾರಿಯಾಗಿತ್ತು.

ವಿಶ್ವ ವಿಖ್ಯಾತ ಮೈಸೂರು ದಸರಾಗೆ 413 ವರ್ಷಗಳ ಇತಿಹಾಸವಿದೆ. 1610 ರಿಂದ ಇಲ್ಲಿ ತನಕ ಮೈಸೂರು ದಸರಾ ಮಹೋತ್ಸವದಲ್ಲಿ ಸಾಂಪ್ರದಾಯಿಕ ಹಾಗೂ ಧಾರ್ಮಿಕ ವಿಧಿ ವಿಧಾನಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾ ಬರಲಾಗುತ್ತಿದೆ. ಅದರಂತೆ ಮೈಸೂರು ಅರಮನೆಯಲ್ಲಿ ಇಂದು ಜಟ್ಟಿ ವಜ್ರಮುಷ್ಠಿ ಕಾಳಗ ನಡೆಯಿತು.

ಮೈಸೂರು ಅರಮನೆಯ ಸವಾರಿ ತೊಟ್ಟಿಯಲ್ಲಿ ನಡೆದ ಜಟ್ಟಿಗಳ ಸೆಣಸಾಟ ರೋಚಕತೆ ಪಡೆದಿತ್ತು. ಚಾಮರಾಜನಗರದ ವೆಂಕಟೇಶ್ ಜಟ್ಟಿ ಹಾಗೂ ಬೆಂಗಳೂರಿನ ಪ್ರಮೋದ ಜಟ್ಟಿ, ಮೈಸೂರಿನ ಪ್ರದೀಪ ಜಟ್ಟಿ ಹಾಗೂ ಚನ್ನಪಟ್ಟಣದ ಪ್ರವೀಣ್ ಜಟ್ಟಿ ನಡುವೆ ಸೆಣಸಾಟ ಆರಂಭವಾಯಿತು.

ಅರಮನೆ ಕಲ್ಯಾಣ ಮಂಟಪದಿಂದಲೇ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈನವಿರೇಳಿಸುವ ಜಟ್ಟಿಗಳ ಕಾಳಗವನ್ನು ವೀಕ್ಷಿಸಿದರು. ಜೊತೆಗೆ ಅರಮನೆಯ ಮೊದಲ ಮಹಡಿಯಲ್ಲಿ ಪ್ರಮೋದಾದೇವಿ ಒಡೆಯರ್, ತ್ರಿಷಿಕಾ ಸೇರಿದಂತೆ ರಾಜಪರಿವಾರದವರು ವೀಕ್ಷಣೆ ಮಾಡಿದರು. ಜಟ್ಟಿ ಕಾಳಗ ನಡೆಯುತ್ತಿದ್ದ ಸವಾರಿ ತೊಟ್ಟಿಯಲ್ಲಿ ಸಾವಿರಾರು ಜನ ಜಮಾವಣೆಗೊಂಡರು.

ಈ ಮೊದಲು ರಾಜರ ಕಾಲದಲ್ಲಿ ಚಿತ್ ಆಗುವ ತನಕ ರೋಮಾಂಚನಕಾರಿ ವಜ್ರಮುಷ್ಠಿ ಕಾಳಗ ನಡೆಯುತ್ತಿತ್ತು. ಪಟ್ಟು–ಪ್ರತಿಪಟ್ಟು ಹಾಕುತ್ತ, ನಡೆಸುತ್ತಿದ್ದ ಕಾದಾಟ ಬಹು ಸಮಯದ ತನಕ ನಡೆಯುತ್ತಿತ್ತು.

ಆದರೆ ರಾಜಪ್ರಭುತ್ವ ಇಲ್ಲದಾಗಿ, ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದ ಮೇಲೆ ಮೈಸೂರು ಅರಮನೆಯಲ್ಲಿ ಸಾಂಪ್ರದಾಯಿಕವಾಗಿ ಜಟ್ಟಿ ಮುಷ್ಠಿ ಕಾಳಗ ಸಾಂಕೇತಿಕವಾಗಿ ನಡೆಯುತ್ತಿದೆ. ಆದರೆ ಇಲ್ಲಿ ಚಿತ್ ಮಾಡುವ ತನಕ ಕಾದಾಟ ನಡೆಯದೆ, ಯಾರು ಹಣೆಯಲ್ಲಿ ಒಂದು ತೊಟ್ಟು ರಕ್ತ ಚಿಮ್ಮಿಸುತ್ತಾರೋ ಅವರು ವಿಜೇತರು ಎಂದು ಘೋಷಿಸಲಾಗುತ್ತದೆ.

ಅದರಂತೆ ನಾಲ್ವರು ಜಟ್ಟಿಗಳ ನಡುವೆ ಕಾದಾಟ ನಡೆಯಿತು. ಇದರಲ್ಲಿ ಚನ್ನಪಟ್ಟಣದ ಪ್ರವೀಣ್ ಅವರ ಆರ್ಭಟಕ್ಕೆ ಮೈಸೂರಿನ ಪ್ರದೀಪ್ ಹಣೆಯಲ್ಲಿ ರಕ್ತ ಚಿಮ್ಮಿತು. ಈ ಮೂಲಕ ಪ್ರವೀಣ್ ಅವರು ವಜ್ರಮುಷ್ಠಿ ಕಾಳಗದಲ್ಲಿ ವಿಜೇತರಾದರು. ಮತ್ತೊಂದು ಜೋಡಿಯ ಸೆಣಸಾಟದಲ್ಲಿ ಬೆಂಗಳೂರಿನ ಪ್ರಮೋದ್ ಅವರು ಭಾರಿ ಪ್ರಹಾರ ನಡೆಸಿ ಚಾಮರಾಜನಗರದ ವೆಂಕಟೇಶ್ ಹಣೆಯಲ್ಲಿ ರಕ್ತ ಚಿಮ್ಮಿಸಿ, ವಿಜೇತರಾದರು. ತರುವಾಯ ಯದುವೀರ್ ಅವರು ವಿಜೇತರಾದ ಪ್ರವೀಣ್ ಜಟ್ಟಿಗಳಿಗೆ ಭಕ್ಷಿಸ್ ನೀಡಿದರು.

ವಜ್ರಮುಷ್ಠಿ ಕಾಳಗವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾಧಿಕಾರಿ ಡಾ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಕೂಡ ವೀಕ್ಷಿಸಿದರು. ಅರಮನೆಯ ಸವಾರಿ ತೊಟ್ಟಿಯಲ್ಲಿ ರಾಜವಂಶಸ್ಥರ ಮುಂದೆ ನಡೆಯುವ ಈ ಜಟ್ಟಿ ಕಾಳಗದಲ್ಲಿ ವಿಜೇತರಾಗುವುದು ಪ್ರತಿಷ್ಠೆಯ ವಿಚಾರವಾಗಿದ್ದು, ಇದಕ್ಕಾಗಿ ಬಹಳಷ್ಟು ಜಟ್ಟಿಗಳು ಅವಕಾಶಕ್ಕಾಗಿ ಎದುರು ನೋಡುತ್ತಿರುತ್ತಾರೆ.

ಹಾಗೆಯೇ ಪ್ರತಿ ವರ್ಷ ದಸರಾದಲ್ಲಿ ನಡೆಯುವ ಸಾಂಪ್ರದಾಯಿಕ ಜಟ್ಟಿ ಮುಷ್ಠಿ ಕಾಳಗ ನೋಡಲು ಸಾವಿರಾರು ಜನರು ಅದರಲ್ಲೂ ಸಾಹಸಿಗರು ಕಾತುರರಾಗಿರುತ್ತಾರೆ.

ಪೊಲೀಸರ ಯಶಸ್ವಿ ಬಂದೋಬಸ್ತ್

ವಿಜಯದಶಮಿ ಮೆರವಣಿಗೆ ಸುಸೂತ್ರ



ಮೈಸೂರು, ಅ.24(ಆರ್‌ಕೆ)–ಇಂದು ಮೈಸೂರಿನಲ್ಲಿ ನಡೆದ ಐತಿಹಾಸಿಕ ದಸರಾ ಜಂಬೂಸವಾರಿ ಮೆರವಣಿಗೆಗೆ ಇನ್ನಿಲ್ಲದಂತೆ ಭಾರಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ದಸರಾ ಮಹೋತ್ಸವದ 10ನೇ ದಿನದ ಈ ಬೃಹತ್ ಮೆರವಣಿಗೆಯಲ್ಲಿ ಲಕ್ಷಾಂತರ ಮಂದಿ ಕಿಕ್ಕಿರಿದು ನೆರೆದಿದ್ದರಾದರೂ ನೂಕು–ನುಗ್ಗಲು, ಅಹಿತಕರ ಘಟನೆಗಳು, ಗದ್ದಲ–ಗೊಂದಲಗಳಿಲ್ಲದೇ ಶಾಂತಿಯುತವಾಗಿ ನೆರವೇರಿದೆ. ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಕೃಪೆ, ಪೊಲೀಸರು, ಅಧಿಕಾರಿಗಳ ಶ್ರಮ ಹಾಗೂ ಜನರ ಸಹಕಾರದಿಂದಾಗಿ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಸುಸೂತ್ರವಾಗಿ ಮುಕ್ತಾಯಗೊಂಡಿದೆ.

ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದಲ್ಲಿ 2023ರ ದಸರಾ ಮಹೋತ್ಸವಕ್ಕೆ ಅತೀ ಹೆಚ್ಚು ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿತ್ತು. ವಿಜಯದಶಮಿ ಮೆರವಣಿಗೆಗೆ ಅರಮನೆ ಒಳ ಹಾಗೂ ಹೊರ ಆವರಣ, ಜಂಬೂಸವಾರಿ ಸಾಗಿದ ರಾಜಮಾರ್ಗ ಹಾಗೂ ಬನ್ನಿ ಮಂಟಪದ ಪಂಜಿನ ಕವಾಯತು ಮೈದಾನದ ಬಳಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿತ್ತು.

ಆಂಟಿಸಬಾಟಿಕ್ ಚೆಕ್ ಟೀಂ, ಬಾಂಬ್ ಪತ್ತೆ ಮತ್ತು ನಿಗ್ರಹ ದಳ, ಶ್ವಾನ ದಳ, ಅಶ್ವಾರೋಹಿ ದಳದ ಸಿಬ್ಬಂದಿಗಳು ನಿರಂತರ ತಪಾಸಣೆ ಮಾಡುತ್ತಿದ್ದರಲ್ಲದೆ, ಗುಪ್ತವಾರ್ತಾ ವಿಭಾಗ ಮತ್ತು ಆಂತರಿಕ ಭದ್ರತಾ ಪಡೆಯ ಕಾರ್ಯ ತತ್ಪರತೆ ಹಾಗೂ ಮುಂಜಾಗ್ರತಾ ಕ್ರಮದಿಂದಾಗಿ ವಿಜಯದಶಮಿ ನಿರಾತಂಕವಾಗಿ ನಡೆದಿದೆ.



ಸಿಸಿ ಟಿವಿ ಕ್ಯಾಮರಾಗಳ ಕಣ್ಗಾವಲು, ಭಾತ್ಮೀದಾರರ ಕಟ್ಟೆಚ್ಚರ, ಹೊರಗಿನಿಂದ ಬಂದಿದ್ದವರ ಮೇಲೆ ತೀವ್ರ ನಿಗಾ, ಬಂದೋಬಸ್ತ್ ರಿಹರ್ಸಲ್‌ನಂತಹ ಮುಂಜಾಗ್ರತಾ ಕ್ರಮಗಳು ಜಂಬೂಸವಾರಿ ಯಶಸ್ವಿ, ಶಾಂತಿಯುತವಾಗಿ ನೆರವೇರಲು ಕಾರಣವಾಯಿತು. ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಹೆಚ್ಚುವರಿ ಡಿಜಿಪಿಯವರು ನಿರಂತರವಾಗಿ ದಸರಾ ಬಂದೋಬಸ್ತ್ ವ್ಯವಸ್ಥೆ ಬಗ್ಗೆ ಮೇಲ್ವಿಚಾರಣೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ರಾಮನಗರವನ್ನು ಬೆಂಗಳೂರು ಜಿಲ್ಲೆಯಾಗಿ ಮರುನಾಮಕರಣ ಮಾಡ್ತೀನಿ: ಡಿಕೆ ಶಿವಕುಮಾರ್



ರಾಮನಗರ: ಇನ್ಮುಂದೆ ರಾಮನಗರ ಜಿಲ್ಲೆ ಇರೋದಿಲ್ಲ, ಇದನ್ನು ಬೆಂಗಳೂರು ಜಿಲ್ಲೆಯಾಗಿ ಮರುನಾಮಕರಣ ಮಾಡುತ್ತೇನೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ತಿಳಿಸಿದ್ದಾರೆ.

ಕನಕಪುರದ ವೀರಭದ್ರಸ್ವಾಮಿ ದೇವಸ್ಥಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇನ್ಮುಂದೆ ರಾಮನಗರ ಜಿಲ್ಲೆ ಇರೋದಿಲ್ಲ. ನಾವೆಲ್ಲರೂ ಬೆಂಗಳೂರು ಜಿಲ್ಲೆಯವರು. ಯಾರೋ ಹೆಸರು ಮಾಡಿಕೊಳ್ಳಬೇಕು ಅಂತಾ ರಾಮನಗರ ಜಿಲ್ಲೆ ಮಾಡಿದ್ರು. ಮತ್ತೆ ರಾಮನಗರವನ್ನು ಬೆಂಗಳೂರು ಜಿಲ್ಲೆಯಾಗಿ ಮರುನಾಮಕರಣ ಮಾಡುತ್ತೇನೆ ಎಂದರಲ್ಲದೇ ರಾಮನಗರ ಇಲ್ಲ ಬೆಂಗಳೂರು ಅಷ್ಟೇ ಎಂದು ದೇವರ ಮೇಲೆ ಪ್ರಮಾಣ ಮಾಡಿದ್ದಾರೆ.

ಇದೇ ವೇಳೆ ರೈತರು ಭೂಮಿ ಮಾರಾಟ ಮಾಡದಂತೆ ತಾಕೀತು ಮಾಡಿದ ಡಿಕೆಶಿ, ಒಂದೊಂದು ಅಡಿ ಲೆಕ್ಕದಲ್ಲಿ ಭೂಮಿ ಬೆಲೆ ಹೆಚ್ಚಾಗುತ್ತೆ. ನೀವು ರಾಮನಗರದವರಲ್ಲ, ನೀವು ಬೆಂಗಳೂರು ಜಿಲ್ಲೆಯವರು. ಸುಮ್ನೆ ನಮ್ಮನ್ನ ರಾಮನಗರ ಅಂತ ಹೇಳಿ ಮೂಲೆಗೆ ತಳ್ಳಬೇಡಿ ಎಂದು ಕಿವಿಮಾತು ಹೇಳಿದ್ದಾರೆ.

ಗ್ರಾಮಾಂತರನೂ ಅಲ್ಲ, ಬೆಂಗಳೂರು ಜಿಲ್ಲೆಯವರು. ದೇವರ ಸನ್ನಿಧಿಯಲ್ಲಿ ವಿಜಯದಶಮಿ ದಿನ ಈ ಮಾತನ್ನು ಹೇಳ್ತಿದ್ದೀನಿ, ಆ ಕೆಲಸ ಮಾಡೇ ಮಾಡುತ್ತೇನೆ ರಾಮನಗರ ಬೆಂಗಳೂರು ಆಗುತ್ತೆ. ರೈತರು ಯಾರೂ ಭೂಮಿಯನ್ನು ಮಾರಾಟ ಮಾಡ್ಬೇಡಿ ಎಂದು ಕರೆ ನೀಡಿದ್ದಾರೆ.

ಚಿನ್ನದ ಅಂಬಾರಿ ಹೊತ್ತಿದ್ದ ಅಭಿಮನ್ಯುವಿಗೆ ಅತ್ಯಾಕರ್ಷಕ ಚಿತ್ತಾರವಳಿ

- ನಾಲ್ಕನೇ ಬಾರಿ ಚಿನ್ನದ ಅಂಬಾರಿ ಹೊತ್ತು ಸೈ ಎನಿಸಿಕೊಂಡ ಗಜಪಡೆ ಕ್ಯಾಪ್ಟನ್
- ವರ್ಣರಂಜಿತ ಅಲಂಕಾರದಿಂದ ಕಂಗೊಳಿಸಿದ ಸಾರಥಿ
- ಅಭಿಮನ್ಯುವಿಗೆ ಎರಡೂವರೆ ಗಂಟೆ ಅಲಂಕಾರ
- ಉಳಿದ ಆನೆಗಳಿಗಿಂತ ಹೆಚ್ಚಿನ ಕೌಶಲ್ಯದ ಮೆರುಗು
- ಸ್ವಲ್ಪವೂ ಅಲುಗಾಡದಂತೆ ಚಿನ್ನದ ಅಂಬಾರಿ ಕಟ್ಟಿದ ಸಿಬ್ಬಂದಿ





ಮೈಸೂರು, ಅ.24(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತಿದ್ದ ಅಭಿಮನ್ಯುವಿಗೆ ಅತ್ಯಾಕರ್ಷಕವಾಗಿ ಚಿತ್ತಾರವಳಿ ಬಿಡಿಸಿ ಸಿಂಗರಿಸಲಾಗಿತ್ತು.

ಅಭಿಮನ್ಯುವಿಗೆ ವರ್ಣರಂಜಿತ ಚಿತ್ತಾರ ಬಿಡಿಸುವ ಕಾರ್ಯ ಸುಮಾರು ಎರಡೂವರೆ ಗಂಟೆಗಳ ಕಾಲ ನಿರಂತರವಾಗಿ ನಡೆಯಿತು. ಉಳಿದ 13 ಆನೆಗಳಿಗಿಂತ ಅಭಿಮನ್ಯುವಿಗೆ ಹೆಚ್ಚು ಕೌಶಲ್ಯಪೂರ್ಣವಾಗಿ ಅಲಂಕರಿಸಲಾಗಿತ್ತು.

ಚಿತ್ರ ಬರಹಗಾರ ನಾಗಲಿಂಗಪ್ಪ ನೇತೃತ್ವದಲ್ಲಿ ಆರು ಮಂದಿ ಕಲಾವಿದರು ಅಭಿಮನ್ಯುವಿಗೆ ಬಣ್ಣ ಬಣ್ಣದ ವರ್ಣರಂಜಿತ ಚಿತ್ತಾರ ಬಿಡಿಸಿದರು. ನಾಗಲಿಂಗಪ್ಪ ಮತ್ತು ತಂಡದವರು ಕಳೆದ 20 ವರ್ಷಗಳಿಂದ ಆನೆಗಳಿಗೆ ಇದೇ ರೀತಿ ಸಿಂಗಾರ ಮಾಡುತ್ತಿದ್ದಾರೆ. ಈ ಕಲಾವಿದರು ಅಭಿಮನ್ಯುವಿಗೆ ಒಗ್ಗಿರುವ ಕಾರಣ ಯಾವುದೇ ತಂಟೆ ಮಾಡದೆ ಸಮಚಿತ್ತದಿಂದ ನಿಂತಿದ್ದನು.

ಅಭಿಮನ್ಯುವಿನ ಹಣೆಗೆ ಮೈಸೂರು ರಾಜವಂಶಸ್ಥರ ರಾಜ ಲಾಂಛನ ಗಂಡಭೇರುಂಡ, ಕಿವಿಗೆ ಶಂಕ ಚಕ್ರ, ಹಣೆಗೆ ನಾಮ, ಸೊಂಡಿಲು, ಕಾಲು ಮತ್ತು ಬಾಲಕ್ಕೆ ಹೂವಿನ ಬಳ್ಳಿ, ದಂತದ ಮೇಲೆ ಗಿಳಿಯಾಕಾರಾದ ಪಕ್ಷಿ, ಕಣ್ಣಿಗೆ ಎಲೆಯ ಆಕಾರವನ್ನು ಆಕರ್ಷಕವಾಗಿ ಬಿಡಿಸಲಾಗಿತ್ತು.

ಜಂಬೂಸವಾರಿ ಮೆರವಣಿಗೆಯಲ್ಲಿ 750 ಕೆ.ಜಿ.ತೂಕದ ಚಿನ್ನದ ಅಂಬಾರಿ ಹೊರುವ ಅಭಿಮನ್ಯು ಸೆಂಟರ್ ಆಫ್ ಅಟ್ರಾಕ್ಷನ್ ಆಗಿರುವ ಕಾರಣ ಉಳಿದ ಆನೆಗಳಿಗಿಂತ ಅಭಿಮನ್ಯುವಿಗೆ ಹೆಚ್ಚಿನ ಅಲಂಕಾರದ ಮೆರಗು ನೀಡಲಾಗಿತ್ತು.

ಅಂಬಾರಿ ಹೊತ್ತು ಸಾಗಿದ ಅಭಿಮನ್ಯು ಕಾಲಿಗೆ ಗೆಜ್ಜೆ, ಕತ್ತಿಗೆ ಗಂಟೆ, ಗಾದಿ ನಮ್ದ, ಮೈ ಮೇಲೆ ರಾವಟಿ, ದಂತಕ್ಕೆ ಸಿಂಗೋಟಿ, ಹಣೆಪಟ್ಟಿ ಜೊತೆಗೆ ವಿವಿಧ ಹೂವುಗಳಿಂದ ಸಿಂಗಾರ ಮಾಡಲಾಗಿತ್ತು. ಈ ಮೂಲಕ ದಸರಾದಲ್ಲಿ ಭಾಗವಹಿಸುವ ಎಲ್ಲಾ ಆನೆಗಳಿಗಿಂತ ಅಭಿಮನ್ಯು ಆಕರ್ಷಣೆಯ ಕೇಂದ್ರಬಿಂದುವಾಗಿದ್ದನು.

ಅಭಿಮನ್ಯುವಿಗೆ ಎಲ್ಲಾ ರೀತಿಯ ಸಿಂಗಾರ ಮಾಡಿ, ಬೆನ್ನಿನ ಮೇಲೆ ಗಾದಿ ನಮ್ದ ಇಟ್ಟು ಅಲಂಕರಿಸಿದ ನಂತರ ಸೋಮನಾಥ ದೇವಾಲಯದಿಂದ ಚಿನ್ನದ ಅಂಬಾರಿ ಕಟ್ಟಲು ಕರೆದೊಯ್ಯಲಾಯಿತು.

ಅರಮನೆಯ ರಾಜ ಮನೆತನದವರ ಖಾಸಗಿ ನಿವಾಸದ ಬಳಿ ಇರುವ ಕ್ರೇನ್ ಬಳಿ ಅಭಿಮನ್ಯುವನ್ನು ಕರೆತರಲಾಯಿತು. ಅಂಬಾರಿ ಕಟ್ಟುವುದರಲ್ಲಿ ನುರಿತ ಅರಣ್ಯ ಸಿಬ್ಬಂದಿ ಅಭಿಮನ್ಯುವಿನ ಮೇಲೆ ಚಿನ್ನದ ಅಂಬಾರಿ ಇಟ್ಟು ಭದ್ರವಾಗಿ ಕಟ್ಟಿದರು. ಸುಮಾರು ಮುಕ್ಕಾಲು ಗಂಟೆ ಈ ಕಾರ್ಯ ನೆರವೇರಿತು.

ಚಿನ್ನದ ಅಂಬಾರಿಯು ಅತ್ತ ಇತ್ತ ಅಲ್ಲಾಡದಂತೆ ಭದ್ರವಾಗಿ ಬಿಗಿಯಲಾಗಿತ್ತು. ತರುವಾಯ ಪೊಲೀಸ್ ಬ್ಯಾಂಡ್ ಹಾಗೂ ಮಂಗಳವಾದ್ಯದೊಂದಿಗೆ ಅಭಿಮನ್ಯು ಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಾ ಜಂಬೂಸವಾರಿ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದ. ಅಭಿಮನ್ಯು ಶಾಂತಚಿತ್ತನಾಗಿ ಸಾಗಲು ಕುಮ್ಕಿ ಆನೆಗಳಾದ ವಿಜಯ ಮತ್ತು ವರಲಕ್ಷ್ಮಿ ಸಾಥ್ ನೀಡಿದವು.

ಜನ ಜಂಗುಳಿಯಿಂದ ನೂಕು ನುಗ್ಗಲು ಉಂಟಾಗಿ ಅಭಿಮನ್ಯು ವಿಚಲಿತನಾಗದಂತೆ ಸುತ್ತಲೂ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಅಭಿಮನ್ಯು ಬಳಿ ಯಾರೂ ಸುಳಿಯದಂತೆ ಪೊಲೀಸರ ಸರ್ಪಗಾವಲು ಹಾಕಲಾಗಿತ್ತು.

750 ಕೆ.ಜಿ.ತೂಕದ ಚಿನ್ನದ ಅಂಬಾರಿಯನ್ನು ಕಟ್ಟಿದ ಮೇಲೆ ಸುಮಾರು ಅರ್ಧ ಗಂಟೆ ಕಾಲ ಅದನ್ನು ಹೊತ್ತು ನಿಂತಿದ್ದ ಅಭಿಮನ್ಯು, ತರುವಾಯ ಮೈಸೂರು ಅರಮನೆಯಿಂದ ಬನ್ನಿಮಂಟಪದ ತನಕ ಐದೂವರೆ ಕಿಲೋಮೀಟರ್ ಸಾಗುವುದು ಅಂದರೆ ಅದು ಸುಲಭದ ಮಾತಲ್ಲ. ಆದರೆ ದೈಹಿಕವಾಗಿ ಹೆಚ್ಚು ಸಾಮರ್ಥ್ಯ ಹೊಂದಿರುವ ಸಾಧು ಸ್ವಭಾವದ ಅಭಿಮನ್ಯು ಚಿನ್ನದ ಅಂಬಾರಿ ಹೊರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿ, ಜಿಲ್ಲಾಡಳಿತ, ಅರಣ್ಯ ಇಲಾಖೆ ಹಾಗೂ ಜನರ ಪ್ರಶಂಸೆಗೆ ಪಾತ್ರನಾಗಿದ್ದಾನೆ.

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ 26 ಬಾರಿ ಭಾಗಿಯಾಗಿರುವ ಅಭಿಮನ್ಯು ಈಗಾಗಲೇ 4 ಬಾರಿ ಚಿನ್ನದ ಅಂಬಾರಿ ಹೊತ್ತು ಸೈ ಎನಿಸಿಕೊಂಡಿದ್ದಾನೆ.

ದಸರಾ ಜಂಬೂ ಸವಾರಿ ಮೆರವಣಿಗೆಗೆ ಮುನ್ನ ನಂದಿ ಧ್ವಜಕ್ಕೆ ಅಗ್ರ ಪೂಜೆ

● ಪೌರಾಣಿಕ ಹಿನ್ನೆಲೆಯ ಕುತೂಹಲಕಾರಿ ವಿಚಾರ ● ದಕ್ಷಯಜ್ಞದ ಯಾಗ, ಶಿವನ ಕೋಪ ● 150 ಕೆ.ಜಿ. ತೂಕ, 33 ಅಡಿ ಎತ್ತರ



ಮೈಸೂರು, ಅ.24(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂ ಸವಾರಿ ಮೆರವಣಿಗೆಗೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ನಂದಿ ಧ್ವಜಕ್ಕೆ ಅಗ್ರ ಪೂಜೆ ಸಲ್ಲಿಸಿದರು. ಮೈಸೂರು ದಸರಾ ಇತಿಹಾಸದಲ್ಲಿ ನಂದಿ ಧ್ವಜ ಪೂಜೆ ಮಾಡದ ಹೊರತು ಜಂಬೂ ಸವಾರಿ ಮೆರವಣಿಗೆಗೆ ಚಾಲನೆಯೇ ದೊರಕುವುದಿಲ್ಲ. ಇದಕ್ಕೆ ನಂದಿ ಧ್ವಜಕ್ಕೆ ಇರುವ ಪೌರಾಣಿಕ ಹಿನ್ನೆಲೆ ಕಾರಣವಾಗಿದೆ.

ದಾಕ್ಷಾಯಿಣಿ ತಂದೆ ದಕ್ಷಬ್ರಹ್ಮ ಯಜ್ಞ ಮಾಡುತ್ತಿರುತ್ತಾನೆ. ಈ ವೇಳೆ ಮಗಳ ಎದುರು ಅಳಿಯನಾದ ಶಿವನ ಬಗ್ಗೆ ದಕ್ಷಬ್ರಹ್ಮ ಟೀಕೆ ಮಾಡುತ್ತಾನೆ. ಇದರಿಂದ ಕುಪಿತಳಾದ ದಾಕ್ಷಾಯಿಣಿ ಅಗ್ನಿ ಪ್ರವೇಶ ಮಾಡುತ್ತಾಳೆ.

ಈ ವಿಚಾರ ತಿಳಿದ ಶಿವನು ವೀರಭದ್ರನನ್ನು ಸೃಷ್ಟಿಸಿ ನಂದಿ ನೇತೃತ್ವದಲ್ಲಿ ದಕ್ಷಬ್ರಹ್ಮ ಯಜ್ಞ ನಡೆಸುವ ಸ್ಥಳಕ್ಕೆ ಹೋಗಿ ರುಂಡ ಚೆಂಡಾಡುವಂತೆ ಆದೇಶಿಸುತ್ತಾನೆ.

ವೀರಭದ್ರನು ನಂದಿ ನೇತೃತ್ವದಲ್ಲಿ ದಕ್ಷಬ್ರಹ್ಮ ಯಾಗ ಮಾಡುವ ಸ್ಥಳಕ್ಕೆ ಹೋಗಿ ಅಲ್ಲಿದ್ದ 18 ಋಷಿಮುನಿಗಳನ್ನು ಕೊಂದು ರುಂಡವನ್ನು ಕೈಲಾಸಕ್ಕೆ ತರುತ್ತಾನೆ. ಈ ಮೂಲಕ ಮೆರವಣಿಗೆ, ದೇವರ ಕಾರ್ಯ ಸೇರಿದಂತೆ ಯಾವುದೇ ಕಾರ್ಯಕ್ರಮಕ್ಕೂ ನಂದಿ ನೇತೃತ್ವ ವಹಿಸುತ್ತಾನೆ.

18 ಋಷಿಗಳ ರುಂಡ ಚೆಂಡಾಡಿದ ಸಂಕೇತವಾಗಿ ಧ್ವಜ ಸ್ತಂಭಕ್ಕೆ 18 ಹರಡೆ ಹಲಗೆ ಮೇಲೆ ನಂದಿ, ಅದರ ಮೇಲೆ ಶಿವನ ಕಳಸ,



ಶಿವ ಲಾಂಛನವನ್ನು ಪ್ರತಿಷ್ಠಾಪಿಸಲಾಗಿದೆ.

ನಂದಿ ಧ್ವಜ 150 ಕೆ.ಜಿ. ತೂಕವಿದ್ದು, 33 ಅಡಿ ಎತ್ತರವಿರುತ್ತದೆ. ಇಷ್ಟು ಎತ್ತರದ ಭಾರವಾದ ನಂದಿ ಧ್ವಜ ಎತ್ತಿ ಕುಣಿಯುವುದು ಅಷ್ಟು ಸುಲಭದ ಮಾತಲ್ಲ. ಆದರೆ ಮೈಸೂರಿನ ಶ್ರೀ ಗುರುಮಲ್ಲೇಶ್ವರ ನಂದಿ ಧ್ವಜ ಸಂಘದವರು ಹತ್ತಾರು ವರ್ಷಗಳಿಂದ ಈ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ.

ನಂದಿ ಧ್ವಜಗೆ ಪೂಜೆ ನೆರವೇರಿಸದೆ ಜಂಬೂ ಸವಾರಿ ಮೆರವಣಿಗೆ ಆರಂಭವಾಗುವುದಿಲ್ಲ ಎಂಬುದಕ್ಕೆ ಇದು ಪೌರಾಣಿಕ ಹಿನ್ನೆಲೆಯಾಗಿದೆ. ಈ ಮೂಲಕ ನಂದಿ ಧ್ವಜ ಪೂಜೆ ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ ಮಹತ್ವ ಪಡೆದಿದೆ.

ಮೈಸೂರು ಅರಮನೆಯಲ್ಲಿ ಯದುವೀರ್ ವಿಜಯ ಯಾತ್ರೆ

ಬನ್ನಿ ಮರಕ್ಕೆ ಧಾರ್ಮಿಕ ವಿಧಿ ವಿಧಾನಗಳಂತೆ ಪೂಜೆ ಸಲ್ಲಿಸಿದ ರಾಜವಂಶಸ್ಥ

● ರಾಜರ ಕಾಲದ ಗತ ವೈಭವ ಅನಾವರಣ ● ವಿಜಯಯಾತ್ರೆ ಮೆರವಣಿಗೆಗೆ ಗಜಪಡೆ ಮೆರಗು ● ಯದುವೀರ್ ಕಂಕಣ ವಿಸರ್ಜನೆ





ಮೈಸೂರು, ಅ.24(ಬಿಎಲ್‌ಯು)– ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಜಯದಶಮಿ ದಿನವಾದ ಇಂದು ಮೈಸೂರು ಅರಮನೆಯಲ್ಲಿ ಸಾಂಕೇತಿಕವಾಗಿ ವಿಜಯ ಯಾತ್ರೆ ನಡೆಸಿದರು. ಈ ವೇಳೆ ಅರಮನೆಯ ಭುವನೇಶ್ವರಿ ದೇವಾಲಯದ ಆವರಣದಲ್ಲಿರುವ ಬನ್ನಿ ಮರಕ್ಕೆ ಯದುವೀರ್ ಸಾಂಪ್ರದಾಯಿಕವಾಗಿ ಧಾರ್ಮಿಕ ವಿಧಿ ವಿಧಾನಗಳಂತೆ ಪೂಜೆ ಸಲ್ಲಿಸಿದರು.

ಕಂಗೊಳಿಸುವ ರಾಜಪೋಷಾಕಿನಲ್ಲಿ ಕತ್ತಿ ಹಿಡಿದು ಸವಾರಿ ತೊಟ್ಟಿಗೆ ಬಂದ ಯದವೀರ್ ಆಗಮನಕ್ಕೆ ಹೊಗಳುಭಟ್ಟರು ಘೋಷವಾಕ್ಯ ಮೊಳಗಿಸಿದರು. ಚೋಳಿ ಜೋಡಿ ಹಿಡಿದಿದ್ದ ಅರಮನೆಯ ಸಿಬ್ಬಂದಿ, ಗುಡಾಸು ಹಾಸುವ ಮೂಲಕ ದಾರಿ ಸುಗಮಗೊಳಿಸಿದರು. ಈ ವೇಳೆ ಇಂಗ್ಲಿಷ್ ಬ್ಯಾಂಡ್ ಹಾಗೂ ಮಂಗಳ ವಾದ್ಯದ ಹಿಮ್ಮೇಳದೊಂದಿಗೆ ಮೆರವಣಿಗೆ ಆರಂಭವಾಯಿತು.

ನಂತರ ಆನೆ ಬಾಗಿಲಿಗೆ ಬಂದ ಯದುವೀರ್ ಅವರು ತಾವು ಹಿಡಿದಿದ್ದ ಕತ್ತಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿ ಇಟ್ಟು ವಿಜಯಯಾತ್ರೆ ಆರಂಭಿಸಿದರು. ಛತ್ರಿ, ಚಾಮರ ಹಿಡಿದಿದ್ದ ಅರಮನೆಯ ಸಿಬ್ಬಂದಿ, ಮುಂಚೂಣಿಯಲ್ಲಿ ಸಾಗಿದರೆ ಪಟ್ಟದ ಕುದುರೆ, ಪಟ್ಟದ ಹಸು, ಪಟ್ಟದ ಆನೆ ಮೆರವಣಿಗೆಯನ್ನು ಹಿಂಬಾಲಿಸಿತು. ಭೀಮ, ಧನಂಜಯ, ಪ್ರೀತಿ ಹಾಗೂ ಚಂಚಲ ಆನೆಗಳು ವಿಜಯಯಾತ್ರೆಯ ಮೆರವಣಿಗೆಗೆ ಮೆರಗು ನೀಡಿದವು.

ರಾಜ ಪರಂಪರೆಯನ್ನು ಬಿಂಬಿಸುವ ರಾಜವಂಶಸ್ಥ ಯದುವೀರ್ ಅವರ ವಿಜಯ ಯಾತ್ರೆಯನ್ನು ಸಾವಿರಾರು ಜನರು ಕಣ್ತುಂಬಿಕೊಂಡರು. ರಾಜರ ಕಾಲದ ಗತ ವೈಭವವನ್ನು ಬಿಂಬಿಸುವ ವಿಜಯಯಾತ್ರೆ ಕಣ್ಮನ ಸೆಳೆಯಿತು.


ತರುವಾಯ ಭುವನೇಶ್ವರಿ ದೇವಾಲಯದ ಆವರಣದಲ್ಲಿರುವ ಶಮಿ ಮರ ಅಥವಾ ಬನ್ನಿ ಮರಕ್ಕೆ ಯದುವೀರ್ ಪುಷ್ಪಾರ್ಚನೆ ಮೂಲಕ ಪೂಜೆ ಆರಂಭಿಸಿದರು. ಬೆಳಗ್ಗೆ 11.20 ರಿಂದ 11.40 ಗಂಟೆಯೊಳಗೆ ಸಲ್ಲುವ ಶುಭ ಮುಹೂರ್ತದಲ್ಲಿ ಯದುವೀರ್ ಅವರು ಶಮಿ ಮರಕ್ಕೆ ಸಾಂಪ್ರದಾಯಿಕವಾಗಿ ಧಾರ್ಮಿಕ ವಿಧಿ ವಿಧಾನಗಳಂತೆ ಪೂಜೆ ಸಲ್ಲಿಸಿದರು.

ಶಮಿ ವೃಕ್ಷರಾಜಾಯ ನಮಃ... ಎಂಬ ಪುರೋಹಿತರ ಮಂತ್ರ ಘೋಷಗಳೊಂದಿಗೆ ಸುಮಾರು 20 ನಿಮಿಷಗಳ ಕಾಲ ಯದುವೀರ್ ಭಕ್ತಿ ಭಾವದಿಂದ ಶಮಿ ಮರಕ್ಕೆ ಪೂಜೆ ಸಲ್ಲಿಸಿದರು. ಈ ವೇಳೆ ಯದುವೀರ್ ಅವರಿಗೆ ಹಲವು ದೇವಾಲಯಗಳಿಂದ ತಂದಿದ್ದ ಪ್ರಸಾದವನ್ನು ನೀಡಲಾಯಿತು. ಇದೇ ಸಂದರ್ಭದಲ್ಲಿ ಯದುವೀರ್ ಅವರು ಪುರೋಹಿತ ವರ್ಗಕ್ಕೆ ಧನವನ್ನು ನೀಡಿದರು.

ಶಮಿ ಮರಕ್ಕೆ ಪೂಜಾ ಕೈಂಕರ್ಯ ನೆರವೇರಿಸಿದ ಯದುವೀರ್ ಅವರು ಬಲರಾಮ ದ್ವಾರದ ತನಕ ಮೆರವಣಿಗೆಯಲ್ಲಿ ಸಾಗಿ ಮತ್ತೆ ಅರಮನೆಗೆ ವಾಪಾಸಾದರು.

ಅರಮನೆಯ ದೇವರ ಕೋಣೆಯಲ್ಲಿ ಮತ್ತೆ ಪೂಜಾ ವಿಧಿ ವಿಧಾನ ನೆರವೇರಿಸಿದ ಯದುವೀರ್, ಕಳೆದ 9 ದಿನದ ಹಿಂದೆ ಅಂದರೆ ಶರನ್ನವರಾತ್ರಿ ದಿನದಂದು ಧರಿಸಿದ್ದ ಕಂಕಣವನ್ನು ವಿಸರ್ಜನೆ ಮಾಡಿದರು.


ಈ ಮೂಲಕ ಮೈಸೂರು ಅರಮನೆಯಲ್ಲಿ ದಸರಾ ಸಂದರ್ಭದಲ್ಲಿ ನಡೆದ ಎಲ್ಲಾ ಸಾಂಪ್ರದಾಯಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಸಮಾಪ್ತಿಗೊಂಡವು.





ಜಂಬೂಸವಾರಿಯಲ್ಲಿ ಮೇಳೈಸಿದ ಕಲಾತಂಡಗಳು

● ವಿವಿಧ ಪ್ರಕಾರಗಳ 84 ಕಲಾ ತಂಡಗಳು; ನೂರಾರು ಕಲಾವಿದರಿಂದ ಪ್ರದರ್ಶನ
● ಮೆರವಣಿಗೆಯುದ್ದಕ್ಕೂ ಭರಪೂರ ಮನರಂಜನೆ ನೀಡಿದ ಕಲಾವಿದರು



ಮೈಸೂರು, ಅ.24(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಅಂತಿಮ ಆಕರ್ಷಣೆ ಜಂಬೂ ಸವಾರಿ ಮೆರವಣಿಗೆಯಲ್ಲಿ ಕಲಾತಂಡ ಗಳು, ಕಲಾವಿದರು ಮೇಳೈಸಿದರು. ಮೆರವಣಿಗೆಯುದ್ದಕ್ಕೂ ಅಂತರರಾಜ್ಯ ಕಲಾವಿದರೂ ಒಳಗೊಂಡಂತೆ ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ 84 ಕಲಾ ತಂಡಗಳ, ಸಾವಿರಾರು ಮಂದಿ ಕಲಾವಿದರು ಅದ್ಭುತ ಪ್ರದರ್ಶನದ ಮೂಲಕ ಪ್ರಶಂಸೆಗೆ ಪಾತ್ರರಾದರು.

ಅರಮನೆ ಆವರಣದಿಂದ ಹೊರಟು ಮೆರವಣಿಗೆಯುದ್ದಕ್ಕೂ ಕಲಾತಂಡಗಳದ್ದೇ ಕಾರುಬಾರು. ವಿವಿಧ ಪ್ರಕಾರಗಳ ಕಲೆಯನ್ನು ಕಣ್ತುಂಬಿಕೊಂಡ ಜನ, ಕಲಾ ವಿದರನ್ನು ಹುರಿದುಂಬಿಸಲು ಶಿಳ್ಳೆ, ಕೇಕೆ ಹಾಕಿ ಸಂಭ್ರಮಿಸಿದರು. ಜಂಬೂಸವಾರಿ ಮಾರ್ಗದ 5 ಕಿ.ಮೀ. ದೂರದುದ್ದಕ್ಕೂ ನೆರೆದಿದ್ದ ಅಪಾರ ಸಂಖ್ಯೆಯ ಜನ ಕಲಾ ತಂಡಗಳ ಮೆರಗಿಗೆ ಮಾರುಹೋದರು.

ಮಹಿಷ ಸೇರಿದಂತೆ ನಾನಾ ವೇಷಧಾರಿ ಗಳು, ನಾನಾ ಕಲಾ ತಂಡಗಳಲ್ಲಿ ನೃತ್ಯ ಸೇರಿ ದಂತೆ ವಿವಿಧ ಪ್ರದರ್ಶನ ನೀಡಿದರು. ಮೆರವಣಿಗೆಯಿಂದ ಬಂದು ರಸ್ತೆಯ ಇಕ್ಕೆಲಗಳಲ್ಲಿ ಕುಳಿತಿದ್ದ ಜನರ ಮುಂದೆ ರಂಜಿಸುತ್ತಿದ್ದರು. ಕೆಲವರಂತೂ ಭಯ ಹುಟ್ಟಿಸುವ ರೀತಿಯಲ್ಲಿ ಮುಖಭಾವದಲ್ಲಿ ಚೀರುತ್ತ ಎದುರಾಗುವುದನ್ನು ಕಂಡು ಪುಟ್ಟ ಮಕ್ಕಳು ಕ್ಷಣ ಕಾಲ ಗಾಬರಿ ಗೊಂಡು, ಕ್ಷಣದಲ್ಲೇ ನಗು ಚೆಲ್ಲುತ್ತಿದ್ದವು.

ಮಂಡ್ಯ ಅರ್ಕೇಶ್ವರನಗರದ ವೀರಗಾಸೆ, ಬಾಗಲಕೋಟೆಯ ಸೋಮನಕೊಪ್ಪದ ಡೊಳ್ಳು ಕುಣಿತ, ಬಳ್ಳಾರಿ ಜಿಲ್ಲೆಯ ಆದಿವಾಸಿ ಬುಡಕಟ್ಟು ಸಮುದಾಯದ ಹಕ್ಕಿಪಿಕ್ಕಿ ನೃತ್ಯ, ಡಾ.ಬಿ.ರಾಮಾಂಜನೇಯ ತಂಡದ ಪೋಟಿ ವೇಷ, ಬೆಳಗಾವಿಯ ಝಾಂಕ್ ಪಥಕ್, ಮೈಸೂರು ತಲಕಾಡು ಕೃಷ್ಣಮೂರ್ತಿಯವರ ಕಂಸಾಳೆ, ರಾಮನಗರ ಜಿಲ್ಲೆಯ ಸೋಮನ ಕುಣಿತ, ಬೆಂಗಳೂರಿನ ಸೋಮನ ಕುಣಿತ, ಚಿತ್ತಾಕರ್ಷಕ ನವಿಲು ನೃತ್ಯ, ಕೋಲಾರ ಜಿಲ್ಲೆಯ ಗಾರುಡಿ ಗೊಂಬೆ, ಚಿಕ್ಕಮಗಳೂರಿನ ಹಲಗೆ ಮೇಳ ಪ್ರದರ್ಶನ ಜನಮನದಲ್ಲಿ ಅಚ್ಚಳಿಯದ ನೆನಪಿನ ಮುದ್ರೆ ಒತ್ತಿದವು.

ವೀರಭದ್ರ ಕುಣಿತ ಸೋಜಿಗ: ಬೀದರ್ ಜಿಲ್ಲೆಯ ಜೈ ಭವಾನಿ ರಂಗಭೂಮಿ ಕಲಾವಿದರ ಸಂಘದ ಹಲಗೆ ಮೇಳ, ಚಾಮರಾಜನಗರ ರಾಮಸಮುದ್ರದ ಗೊರವನ ಕುಣಿತ ಹಾಗೂ ಗೊರವನ ನೃತ್ಯ, ಚಿಕ್ಕಬಳ್ಳಾಪುರ ಜಿಲ್ಲೆಯ ಗಾರುಡಿ ಗೊಂಬೆ, ಬಾಗಲಕೋಟೆ ಜಿಲ್ಲೆಯ ಕರಡಿ ಮಜಲು, ಮಂಡ್ಯದ ರಂಗ ಕುಣಿತ, ಚಿಕ್ಕಮಗಳೂರಿನ ವೀರಭದ್ರ ಕುಣಿತ ಜಂಬೂಸವಾರಿ ಮೆರವಣಿಗೆಯ ಮೆರುಗನ್ನು ಹೆಚ್ಚಿಸಿತು.







ಗಮನ ಸೆಳೆದ ಸೋಮನ ಕುಣಿತ: ಚಿತ್ರದುರ್ಗದ ಖಾಸ ಬೇಡರ ಪಡೆ ನೃತ್ಯ, ನಂಜನಗೂಡಿನ ತಮಟೆ–ನಗಾರಿ, ದಕ್ಷಿಣ ಕನ್ನಡ ಜಿಲ್ಲೆಯ ಕಂಗಿಲು ಕುಣಿತ, ನರಸೀಪುರ ತಾಲೂಕಿನ ಸ್ಯಾಕ್ಸೋಫೋನ್, ದಾವಣ ಗೆರೆ ಜಿಲ್ಲೆಯ ಡೊಳ್ಳು ಕುಣಿತ, ಬಳ್ಳಾರಿ ಜಿಲ್ಲೆಯ ಹಗಲು ವೇಷ ಕುಣಿತ, ಧಾರವಾಡ ಜಿಲ್ಲೆಯ ಜಗ್ಗಲಗೆ ಮೇಳ, ಗದಗ ಜಿಲ್ಲೆಯ ಕರಡಿ ಮಜ್ಜಲು, ಉತ್ತರ ಕನ್ನಡ ಜಿಲ್ಲೆಯ ಗೊಂಡರ ಡಕ್ಕೆ ಹಾಸನದ ಸೋಮನ ಕುಣಿತ, ಕಲುಬುರಗಿ ಹಾಗೂ ಧಾರವಾಡ ಜಿಲ್ಲೆಯ ಲಂಬಾಣಿ ನೃತ್ಯ, ಸೋಮವಾರ ಪೇಟೆಯ ಮಲೆನಾಡ ಸುಗ್ಗಿ ಕುಣಿತವನ್ನು ನೋಡಿದ ಜನತೆ ಬಿಸಿಲಿನ ಬೇಗೆಯನ್ನು ಮರೆತು ಭರ್ತಿ ಮನರಂಜನೆ ಪಡೆದರು.

ಮೆರವಣಿಗೆಯಲ್ಲಿ ಸಾಂಸ್ಕೃತಿಕ ವೈವಿಧ್ಯತೆ: ಕೊಡಗಿನ ಬುಡಕಟ್ಟು ನೃತ್ಯ, ಕೋಲಾರದ ಗಾರುಡಿ ಗೊಂಬೆ, ಬೆಳಗಾವಿ ಡೊಳ್ಳು ಕುಣಿತ, ಮಂಡ್ಯ ಜಿಲ್ಲೆಯ ದೊಣ್ಣೆ ವರಸೆ, ಪಟ ಕುಣಿತ, ಮೈಸೂರಿನ ವೀರಭದ್ರ ಕುಣಿತ, ಪೂಜಾ ಕುಣಿತ, ತಮಟೆ–ನಗಾರಿ ಹಾಗೂ ಕಂಸಾಳೆ, ರಾಯಚೂರಿನ ಹಗಲುವೇಷ, ರಾಮನಗರದ ಕೋಳಿ ನೃತ್ಯ, ಶಿವಮೊಗ್ಗದ ಡೊಳ್ಳು ಕುಣಿತ, ಉಡುಪಿಯ ಗುಮಟೆ ನೃತ್ಯ, ಮಹಿಳಾ ಚಂಡೆ, ಉತ್ತರ ಕನ್ನಡ ಜಿಲ್ಲೆಯ ಗೊಂಡರ ಡಕ್ಕೆ, ಶಿರಸಿಯ ಬೇಡರ ವೇಷ ತಂಡಗಳು ರಾಜ್ಯದ ನಾನಾ ಜಿಲ್ಲೆಗಳ ಸಾಂಸ್ಕೃತಿಕ ಶ್ರೀಮಂತಿಕೆಯ ಸಿರಿಯನ್ನು ಮತ್ತೊಮ್ಮೆ ಪರಿಚಯಿಸಿದವು.







ಅರಮನೆಯಲ್ಲಿ ರಾಜವಂಶಸ್ಥರ ಸಾಂಪ್ರದಾಯಿಕ ಆಯುಧ ಪೂಜೆ

ಶಾಸ್ತ್ರೋಕ್ತವಾಗಿ ಪೂಜಾ ವಿಧಿವಿಧಾನ ಅನುಸರಿಸಿದ ಯದುವೀರ್





ಮೈಸೂರು,ಅ.24(ಎಂಟಿವೈ)– ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆಯಲ್ಲಿ ಸೋಮವಾರ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಟ್ಟದ ಕತ್ತಿ ಸೇರಿದಂತೆ ವಿವಿಧ ಆಯುಧಗಳಿಗೆ ಸಾಂಪ್ರದಾಯಿಕ ಪೂಜೆ ನೆರವೇರಿಸಿದರು.

ವಿಜಯದಶಮಿಯ ಮುನ್ನಾ ದಿನವಾದ ಆಯುಧ ಪೂಜೆಯ ದಿನದಂದು ಪ್ರತಿ ವರ್ಷವೂ ರಾಜವಂಶಸ್ಥರು ಅರಮನೆಯಲ್ಲಿರುವ ಆಯುಧಗಳಿಗೆ ಶಾಸ್ತ್ರೋಕ್ತವಾಗಿ ಪೂಜೆ ನೆರವೇರಿಸುವ ಸಂಪ್ರದಾಯ ಅನುಸರಿಸುತ್ತಿದ್ದು, ಈ ಬಾರಿಯೂ ಅರಮನೆಯಲ್ಲಿ ಆಯುಧ ಪೂಜೆಯನ್ನು ವೈಭವದಿಂದ ಆಚರಿಸಲಾಯಿತು.

ಈ ಬಾರಿಯೂ ಅರಮನೆಯ ಕಲ್ಯಾಣ ಮಂಟಪ ಹಾಗೂ ಸವಾರಿ ತೊಟ್ಟಿಯಲ್ಲಿ ಆಯುಧಪೂಜೆ ನೆರವೇರಿಸಲಾಯಿತು. ಎಂದಿನಂತೆ ಪಟ್ಟದ ಆನೆ, ಕುದುರೆ, ಹಸು ಒಳಗೊಂಡಂತೆ ರಾಜವಂಶಸ್ಥರು ಬಳಸುವ ವಾಹನಗಳಿಗೂ ಪೂಜೆ ನೆರವೇರಿಸಲಾಯಿತು. ಸೋಮವಾರ ಬೆಳಗ್ಗೆ 6.30ರಿಂದಲೇ ಅರಮನೆಯ ಕಲ್ಯಾಣ ಮಂಟಪ ಸಮೀಪದ ಚಂಡಿಕಾ ಹೋಮ ಆರಂಭಿಸಲಾಯಿತು. ಮೊದಲಿಗೆ ಆನೆ ಸವಾರಿ ಬಾಗಿಲಿಗೆ ಪಟ್ಟದ ಆನೆ, ನಿಶಾನೆ ಆನೆ, ಅರಮನೆ ಆನೆಯೊಂದಿಗೆ ಪಟ್ಟದ ಹಸು, ಪಟ್ಟದ ಕುದುರೆ, ಒಂಟೆಯನ್ನು ಕರೆತಂದು, ಅವುಗಳೊಂದಿಗೆ ಪಟ್ಟದ ಕತ್ತಿ ಹಾಗೂ ಖಾಸ ಆಯುಧವನ್ನು ಕೋಡಿ ಸೋಮೇಶ್ವರ ದೇವಾಲಯದ ಬಳಿ ಕೊಂಡೊಯ್ಯಲಾಯಿತು.

ವಿಶೇಷ ಪೂಜೆ: ಕೋಡಿ ಸೋಮೇಶ್ವರ ಹಾಗೂ ಕೋಡಿ ಭೈರವ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಲಾಯಿತು. ಮಾತ್ರವಲ್ಲದೇ ಬಾವಿ ಹಾಗೂ ಕಳಸಕ್ಕೂ ಪೂಜೆ ನೆರವೇರಿಸಲಾಯಿತು. ಕಳಸ ಹೊತ್ತ ಮುತ್ತೈದೆಯರೊಂದಿಗೆ ಪಟ್ಟದ ಆನೆ, ಕುದುರೆ, ಹಸು, ಒಂಟೆಯೊಂದಿಗೆ ಖಾಸ ಆಯುಧ ಹಾಗೂ ದೇವರನ್ನು ಅರಮನೆಯ ಆನೆ ಬಾಗಿಲಿಗೆ ತರಲಾಯಿತು. ಬಳಿಕ ಅರಮನೆಯ ಪುರೋಹಿತರು ಅದನ್ನು ಸ್ವೀಕರಿಸಿ, ಕಲ್ಯಾಣ ಮಂಟಪಕ್ಕೆ ಕೊಂಡೊಯ್ದರು. ಬಳಿಕ ಚಂಡಿಹೋಮದ ಪೂರ್ಣಾಹುತಿ ನೆರವೇರಿಸಲಾಯಿತು. ಬಳಿಕ ಪಟ್ಟದ ಆನೆ, ಹಸು, ಕುದುರೆಯನ್ನು ಸವಾರಿ ತೊಟ್ಟಿಗೆ ಕರೆತಂದರು.




ಮಧ್ಯಾಹ್ನ 12.10ರಿಂದ 12.45ರೊಳಗೆ ಸಲ್ಲುವ ಮಕರ ಲಗ್ನದಲ್ಲಿ ಅರಮನೆಯ ಕಲ್ಯಾಣಮಂಟಪದಲ್ಲಿ ಯದುವೀರರು. ಪಟ್ಟದ ಕತ್ತಿ, ಗುರಾಣಿ ಸೇರಿದಂತೆ ಯದುವಂಶದ ರಾಜರು ಬಳಸುತ್ತಿದ್ದ ಆಯುಧಕ್ಕೆ ಪೂಜೆ ನೆರವೇರಿಸಿದರು. ನಂತರ ಸವಾರಿ ತೊಟ್ಟಿಯಲ್ಲಿ ರಾಜವಂಶಸ್ಥರು ಬಳಸುತ್ತಿದ್ದ ಎಲ್ಲಾ ವಾಹನಗಳನ್ನು ಪೂಜಿಸಿ, ಪುಷ್ಪಾರ್ಚನೆ ಮಾಡಲಾಯಿತು.

ಈ ವೇಳೆ ಕಲ್ಯಾಣ ಮಂಟಪದ ಬಳಿ ಯದುವೀರರು ಮಾಡುತ್ತಿದ್ದ ಆಯುಧ ಪೂಜಾ ಕಾರ್ಯಕ್ರಮವನ್ನು ಅರಮನೆಯ ಮೇಲ್ಮಹಡಿಯ ಕಿಟಕಿಯಿಂದ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಹಾಗೂ ಆಧ್ಯವೀರ ಒಡೆಯರ್ ವೀಕ್ಷಿಸಿದರು. ಇದೇ ಸಂದರ್ಭದಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಅವರು ಆಯುಧ ಪೂಜಾ ಕಾರ್ಯಕ್ರಮವನ್ನು ಮೊಬೈಲ್‌ನಿಂದ ಚಿತ್ರೀಕರಿಸಿಕೊಳ್ಳುತ್ತಿದ್ದರು.

ಖಾಸಗಿ ದರ್ಬಾರ್ ಸಮಾಪ್ತಿ: ಸಂಜೆ ಖಾಸಗಿ ದರ್ಬಾರ್ ನೆರವೇರಿದ ಬಳಿಕ ಅಂಬಾವಿಲಾಸ ದರ್ಬಾರ್ ಹಾಲ್‌ನಲ್ಲಿ ಸಿಂಹ ವಿಸರ್ಜನೆ ಮಾಡಲಾಯಿತು. ಆ ನಂತರ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ದೇವರ ಮನೆಯಲ್ಲಿ ಹಾಗೂ ವಾಣಿವಿಲಾಸ ದೇವರ ಮನೆಯಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಅವರಿಗೆ ಕಂಕಣ ವಿಸರ್ಜನೆ ಮಾಡಲಾಯಿತು. ಇದರೊಂದಿಗೆ ನವರಾತ್ರಿಯಲ್ಲಿ ರಾಜವಂಶಸ್ಥರ ಖಾಸಗಿ ದರ್ಬಾರ್ ಸಂಪನ್ನಗೊಂಡಿತು.

ಬಿಸಿಲ ಬೇಗೆಗೆ ತತ್ತರಿಸಿದ ಜನ!



ಮೈಸೂರು, ಅ.24(ಎಂಕೆ)– ವಿಶ್ವ ವಿಖ್ಯಾತ ಜಂಬೂಸವಾರಿ ಕಣ್ತುಂಬಿಕೊಳ್ಳಲು ಬೆಳಗ್ಗೆಯಿಂದಲೂ ಕಾದು ಕುಳಿತ ಜನ ಸಮೂಹ ಸುಡು ಬಿಸಿಲಿನ ಬೇಗೆಯಲಿ ಪರಿತಪಿಸುವಂತಾಯಿತು...!

ರಾಜಮಾರ್ಗ ಸಯ್ಯಾಜಿರಾವ್ ರಸ್ತೆಯ ಎರಡು ಬದಿಯಲ್ಲಿ ಸೇರಿದ್ದ ಜನ ಸಮೂಹವನ್ನು ಕಾಡಿದ ಬೆಂಕಿ ಬಿಸಿಲು, ಭಕ್ತರ ಸಂಭ್ರಮಕ್ಕೆ ಕಿಚ್ಚುಹಾಕಿದಂತಿತ್ತು. ಕಣ್ಣು ಬಿಡಲು ಸಾಧ್ಯವಾಗದೆ ಛತ್ರಿ, ಬೆಟ್‌ಸಿಟ್‌ಗಳನ್ನು ಬ್ಯಾರಿಕೇಡ್‌ಗಳಿಗೆ ಕಟ್ಟಿ ಬಿಸಿಲ ಬೇಗೆಯಿಂದ ಪಾರಾಗಲು ಪರದಾಡುತ್ತಿದ್ದರು. ಸಂಜೆ 4 ಗಂಟೆಯವರೆಗೂ ಸಯ್ಯಾಜಿರಾವ್ ರಸ್ತೆಯ ಬಲಬದಿ(ಕೆಆರ್ ವೃತ್ತದ ಕಡೆಯಿಂದ)ಯಲ್ಲಿ ಕುಳಿದ್ದಿದ್ದವರಂತೂ ಸುಡು ಬಿಸಿಲಿನಿಂದ ಹೈರಾಣಾದರು. ಛತ್ರಿ, ಬೆಟ್‌ಸಿಟ್ ಇಲ್ಲದವರ ಪರಿಸ್ಥಿತಿ ಹೇಳತೀರದಾಗಿತ್ತು. ಮಧ್ಯಾಹ್ನ 3 ಗಂಟೆಯ ಬಳಿಕ ಒಂದೊಂದೇ ಸ್ತಬ್ಧಚಿತ್ರಗಳು ಹಾಗೂ ಕಲಾತಂಡಗಳು ಆಗಮಿಸುತ್ತಿದ್ದಂತೆ ಬಿಸಿಲ ಬೇಗೆಯ ನುಡುವೆಯೂ ಸಂಭ್ರಮಿಸಲಾರಂಭಿಸಿದರು.

ಮಜ್ಜಿಗೆ, ನೀರಿಗೆ ಬಾರೀ ಬೇಡಿಕೆ: ಜಂಬೂಸವಾರಿ ಮಾರ್ಗದುದ್ದಕ್ಕೂ ಕೆಲ ಸಂಘ–ಸಂಸ್ಥೆಗಳು ನೀರು, ಮಜ್ಜಿಗೆ ವಿತರಣೆ ಮಾಡುತ್ತಿದ್ದರೂ ಬಿಸಲಿನ ಬೇಗೆ ತಣಿಸಲು ಸಾಧ್ಯವಾಗದೇ ಎಷ್ಟೇ ವಿತರಣೆ ಮಾಡಿದರೂ ಖಾಲಿಮಾಡುತ್ತಿದ್ದರಲ್ಲದೆ ಮತ್ತೆ ಮತ್ತೆ ಕೇಳುತ್ತಿದ್ದರು. ಇದರಿಂದ ರಾಜ ಮಾರ್ಗದುದ್ದಕ್ಕೂ ನೀರಿನ ಖಾಲಿ ಬಾಟಲ್‌ಗಳು ಹಾಗೂ ಮಜ್ಜಿಗೆ ಪ್ಯಾಕೆಟ್‌ನ ಪ್ಲಾಸ್ಟಿಕ್ ಕವರ್‌ಗಳು ರಾಶಿ ರಾಶಿ ಬೀಳುವಂತಾಯಿತು.



ವ್ಯಕ್ತಿಗೆ ಟ್ರಾಫಿಕ್ ವಾರ್ಡನ್ ಹೊಡೆದು ಗಾಯ

ಮೈಸೂರು, ಅ.24(ಎಸ್‌ಪಿಎನ್)– ಜಂಬೂ ಸವಾರಿ ಮೆರವಣಿಗೆ ವೇಳೆ ಜನಸಂದಣಿಯಲ್ಲಿ ಪುನೀತ್ ರಾಜಕುಮಾರ್ ಬಾವುಟ ಹಿಡಿದು ಕಿರುಚಾಡುತ್ತಿದ್ದ ವ್ಯಕ್ತಿಗೆ ಟ್ರಾಫಿಕ್ ವಾರ್ಡನ್, ಗುಂಪಿನೊಳಗೆ ನುಗ್ಗಿ ದೊಣ್ಣೆಯಿಂದ ತಲೆಗೆ ಹೊಡೆದು ತೀವ್ರವಾಗಿ ಗಾಯಗೊಳಿಸಿರುವ ಘಟನೆ ಚಾಮರಾಜ ಒಡೆಯರ್ ವೃತ್ತ ಮುಂಭಾಗ ಮಂಗಳವಾರ ಮಧ್ಯಾಹ್ನ ನಡೆದಿದೆ.



ಮಂಡ್ಯ ಜಿಲ್ಲೆ ಉಪ್ಪಾರಹಳ್ಳಿಯ ನಿವಾಸಿ ಶ್ರೀನಿವಾಸ ಗಾಯಗೊಂಡ ವ್ಯಕ್ತಿ(45). ಈತ ಜಂಬೂ ಸವಾರಿ ನೋಡಲು ಮಂಡ್ಯದಿಂದ ಸ್ನೇಹಿತರೊಂದಿಗೆ ಆಗಮಿಸಿ, ಚಾಮರಾಜ ಒಡೆಯರ್ ವೃತ್ತದ ಮುಂಭಾಗ ಜನರ ಗುಂಪಿನಲ್ಲಿ ನಿಂತು ವೀಕ್ಷಿಸುತ್ತಿದ್ದ. ಈ ವೇಳೆ ಪುನೀತ್ ಚಿತ್ರವಿರುವ ಬಾವುಟ ಹಾರಿಸಿ, ಜನರ ನೂಕುನುಗ್ಗಲಿಗೆ ಕಾರಣವಾಗಿದ್ದಾನೆ ಎಂದು ಹೇಳಿ ಭದ್ರತಾ ಕರ್ತವ್ಯದಲ್ಲಿದ್ದ ಟ್ರಾಫಿಕ್ ವಾರ್ಡನ್ ಕೆ.ಮಂಜುನಾಥ್ ಬ್ಯಾರಿಕೆಡ್ ಹಾರಿ ಗುಂಪಿನೊಳಗೆ ನುಗ್ಗಿ ದೊಣೆಯಿಂದ ತಲೆಗೆ ಹೊಡೆದಿದ್ದಾನೆ.

ಟ್ರಾಫಿಕ್ ವಾರ್ಡನ್ ಹೊಡೆದ ಏಟಿಗೆ ಶ್ರೀನಿವಾಸ್ ತಲೆಯಿಂದ ರಕ್ತ ಚಿಮ್ಮಿದೆ. ರಕ್ತ ಬರುತ್ತಿರುವುದನ್ನು ಕಂಡ ಸಾರ್ವಜನಿಕರು, ತಕ್ಷಣವೇ ಚಿಕಿತ್ಸೆ ಕೊಡಿಸುವಂತೆ ಅದೇ ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ಪೊಲೀಸರಲ್ಲಿ ಮನವಿ ಮಾಡಿದ್ದಾರೆ. ನಂತರ ಗಾಯಗೊಂಡಿದ್ದ ಶ್ರೀನಿವಾಸನ ಜೊತೆಗೆ ಗಾಯಗೊಳಿಸಿದ್ದ ಕೆ.ಮಂಜುನಾಥ ಜೊತೆಗೂಡಿ ಕೆ.ಆರ್.ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿದ್ದಾರೆ ಎಂದು ಚಿಕಿತ್ಸೆಗೆ ತೆರಳುವಾಗ ದೇವರಾಜ ಮಾರುಕಟ್ಟೆ ಬಳಿ ಇದ್ದ ಮಾಧ್ಯಮ ಪ್ರತಿನಿಧಿಗಳಿಗೆ ಘಟನೆ ಕುರಿತು ಶ್ರೀನಿವಾಸ್ ಮಾಹಿತಿ ನೀಡಿದರು. ಅಲ್ಲದೆ, ಈ ಕುರಿತು ಪೊಲೀಸರು ದೂರು ದಾಖಲಿಸಿ, ಕಾನೂನು ಕ್ರಮ ಜರುಗಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮಿನಿ ಸಿದ್ದರಾಮಯ್ಯರ ರೋಡ್ ಶೋ!?

ಮೈಸೂರು, ಅ.24(ಎಂಕೆ)– ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ನಾನು ಸಿಎಂ ಸಿದ್ದರಾಮಯ್ಯ ಸಂಬಂಧಿ ಎಂದೇಳಿಕೊಂಡು ವ್ಯಕ್ತಿಯೊಬ್ಬರು ರೋಡ್ ಶೋ ನಡೆಸಿದ ಪ್ರಸಂಗ ನಡೆಯಿತು.

ನಂದಿಧ್ವಜ ಆಗಮಿಸುತ್ತಿದ್ದಂತೆ ಅದರ ಮುಂದೆಯೇ ಯಾವುದೇ ಐಡಿಕಾರ್ಡ್, ಪಾಸ್ ಇಲ್ಲದೆ ಇದ್ದರೂ ರಸ್ತೆಗಿಳಿದಿದ್ದ ವ್ಯಕ್ತಿಯೊಬ್ಬರು, ಸಿದ್ದರಾಮಯ್ಯ ಅವರನ್ನು ಹೋಲುವಂತೆಯೇ ಬಟ್ಟೆ ಹಾಕಿಕೊಂಡು ರೋಡ್ ಶೋ ನಡೆಸಿದರು.



ರಸ್ತೆಯ ಎರಡು ಬದಿಯಲ್ಲಿದ್ದ ಜನ ಸಮೂಹದ ಕಡೆಗೆ ಕೈಬಿಸುತ್ತಾ, ಕೈ ಮುಗಿಯುತ್ತಾ ರೋಡ್ ಶೋ ನಡೆಸಿದ ವ್ಯಕ್ತಿಯ ವರ್ತನೆ ಕಿರಿಕಿರಿ ಉಂಟು ಮಾಡುವಂತಿತ್ತು. ಅನುಮಾನಗೊಂಡು ಪ್ರಶ್ನಿಸಿದ ಪೊಲೀಸರಗೂ ನಾನು ಸಿಎಂ ಸಿದ್ದರಾಮಯ್ಯ ಅವರ ಅಕ್ಕನ ಮಗ, ಮಿನಿ ಸಿದ್ದರಾಮಯ್ಯ ಎನ್ನುತ್ತಾ ಪೊಲೀಸರಿಂದಲೂ ಬಚಾವ್ ಆದರಲ್ಲದೇ ಹೈವೇ ಸರ್ಕಲ್‌ವರೆಗೂ ರೋಡ್ ಶೋ ನಡೆಸಿದರು. ರಸ್ತೆಗಿಳಿದವರನ್ನು ಕಳುಹಿಸುತ್ತಿದ್ದ ಪೊಲೀಸರು ಈ ವ್ಯಕ್ತಿಯ ವಿಷಯದಲ್ಲಿ ಮಾತ್ರ ಸುಮ್ಮನಿದ್ದರು.

ಫೇಸ್‌ಬುಕ್‌ನಲ್ಲಿ ಮಿನಿ ಸಿದ್ದರಾಮಯ್ಯ: ಈ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಕ್ಕನ ಮಗ. ನನ್ನ ಹೆಸರು ಭಾಸ್ಕರ್, ಬೇಕಿದ್ದರೆ ನನ್ನ ಫೇಸ್‌ಬುಕ್ ಪೇಜ್ ನೋಡಿ ಎಂದು ತೋರಿಸಿದರು. ಅದರಲ್ಲಿ ಮಿನಿ ಸಿದ್ದರಾಮಯ್ಯ ಎಂದಿತ್ತು. ನಿಮ್ಮ ಐಡಿ ಎಲ್ಲಿ.. ನಿಮಗೆ ಯಾರು ಐಡಿ ಕಾರ್ಡ್ ಅಥವಾ ಸಮಿತಿ ಪಾಸ್ ಕೊಟ್ಟಿಲ್ಲವೇ? ಎಂದು ಕೇಳಿದ್ದಕ್ಕೆ ಕಾರ್ಡ್ ಇತ್ತು. ಆದರೆ ಅದನ್ನು ಮರೆತು ಬಂದಿದ್ದೇನೆ ಎಂದರಲ್ಲದೆ ರೋಡ್ ಶೋ ಮುಂದುವರೆಸಿದರು.

ಎಡಕ್ಕೆ ವಾಲಿದ ಅಂಬಾರಿ: ಆಗಾಗ್ಗೆ ಮೈಕೊಡವಿ ಸರಿಪಡಿಸಿಕೊಂಡ ಅಭಿಮನ್ಯು

- ತರಾತುರಿಯಲ್ಲಿ ಕಟ್ಟಿದ್ದೇ ಅಂಬಾರಿ ವಾಲಲು ಕಾರಣ
- ಮಾವುತ ವಸಂತರ ಸೂಚನೆ ಪಾಲಿಸಿದ ಕೂಂಬಿಂಗ್ ಸ್ಟಾರ್

ಮೈಸೂರು,ಅ.24(ಎಂಟಿವೈ)– ಪೊಲೀಸ್ ಹಾಗೂ ಮಾವುತರ ನಡುವಿನ ಗೊಂದಲ ಇಂದು ಆನೆ ಮೇಲೆ ಅಂಬಾರಿ ಕಟ್ಟುವ ಪ್ರಕ್ರಿಯೆ ಮೇಲೆ ಪರಿಣಾಮ ಬೀರಿತ್ತು. ತಡವಾಗಿ ಕರೆತಂದ ಅಭಿಮನ್ಯುವಿನ ಮೇಲೆ 45 ನಿಮಿಷದಲ್ಲೇ ಅಂಬಾರಿ ಕಟ್ಟಿ ಪುಷ್ಪಾರ್ಚನೆಗೆ ಕರೆತರಲಾಯಿತು. ಇದರಿಂದ ಜಂಬೂಸವಾರಿ ಮೆರವಣಿಗೆಯುದ್ದಕ್ಕೂ ಅಂಬಾರಿ ಎಡಕ್ಕೆ ವಾಲುತ್ತಿತ್ತು.

ಸಂಜೆ 5.10ಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಗಣ್ಯರಿಂದ ಪುಷ್ಪಾರ್ಚನೆ ನೆರವೇರಿದ ಬಳಿಕ ಕುಮ್ಕಿ ಆನೆಗಳಾದ ವಿಜಯ, ವರಲಕ್ಷ್ಮಿಯೊಂದಿಗೆ ಅಂಬಾರಿ ಹೊತ್ತು ಹೆಜ್ಜೆ ಹಾಕಿದ ಅಭಿಮನ್ಯು ಸಂಜೆ 5.22ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಾಲಯ ಗೇಟ್ ದಾಟಿ ಅರಮನೆಯಿಂದ ಹೊರ ಬಂದಿತು. ಆ ಬಳಿಕ ಅಂಬಾರಿ ಸಣ್ಣ ಪ್ರಮಾಣದಲ್ಲಿ ಎಡಕ್ಕೆ ವಾಲಲು ಆರಂಭಿಸಿತು. ಅಂಬಾರಿ ವಾಲುತ್ತಿರುವುದನ್ನು ಗಮನಿಸಿದ ಮಾವುತ ವಸಂತ್ ನೀಡಿದ ಸೂಚನೆಯನ್ನು ಚಾಣಾಕ್ಷ ಅಭಿಮನ್ಯು ಮೈ ಕೊಡವಿಕೊಂಡು ತಾನೆ ಸರಿಮಾಡಿಕೊಂಡು ಹೆಜ್ಜೆ ಹಾಕಲಾರಂಭಿಸಿತು.

ಸಂಜೆ 5.34ಕ್ಕೆ ಕೆ.ಆರ್.ವೃತ್ತ, 6.05ಕ್ಕೆ ಆಯುರ್ವೇದ ಆಸ್ಪತ್ರೆ, 6.38ಕ್ಕೆ ಆರ್‌ಎಂಸಿ ವೃತ್ತಕ್ಕೆ ಆಗಮಿಸಿದ ಅಭಿಮನ್ಯು ಆಗ್ಗಿಂದಾಗ್ಗೆ ಸರಿ ಮಾಡಿಕೊಳ್ಳುತ್ತಾ ಸಾಗಿದ. ಈ ವೇಳೆ ಬಂಬೂಬಜಾರ್ ಬಳಿ 2 ನಿಮಿಷ ವಿಶ್ರಾಂತಿ ನೀಡಿ, ಕುಸುರೆ ಹಾಗೂ ಗ್ಲೂಕೋಸ್ ಮಿಶ್ರಿತ ತಿನಿಸು ನೀಡಲಾಯಿತು. ಮತ್ತೆ ಪ್ರಯಾಣ ಆರಂಭಿಸಿದ ಅಭಿಮನ್ಯು ಸಂಜೆ 7.05ಕ್ಕೆ ಹೈವೇ ವೃತ್ತಕ್ಕೆ ಆಗಮಿಸಿತು. ಅಂತಿಮವಾಗಿ ಸಂಜೆ 7.20ಕ್ಕೆ ಬನ್ನಿಮಂಟಪದ ದ್ವಾರ ಪ್ರವೇಶಿಸಿ ತನಗೆ ನೀಡಿದ್ದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿತು. ಅದರಲ್ಲೂ ವಾಲಿದ ಅಂಬಾರಿ ಸರಿಪಡಿಸಿಕೊಂಡು ಸಾಗಿದ್ದಕ್ಕೆ ಎಲ್ಲರಿಂದ ಪ್ರಶಂಸೆ ವ್ಯಕ್ತವಾಯಿತು.

ಅಧಿಕಾರಿಗಳಿಂದ ರಕ್ಷಣಾ ಕೋಟೆ: ಅಂಬಾರಿ ಆನೆ ಸುತ್ತಲೂ ಅರಣ್ಯಾಧಿಕಾರಿಗಳ ರಕ್ಷಣಾ ಕೋಟೆ ನಿರ್ಮಿಸಲಾಗಿತ್ತು. ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್ ಸೌರಭ್ ಕುಮಾರ್, ಬಸವರಾಜು, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್‌ಕುಮಾರ್, ಹುಣಸೂರು ಡಿಸಿಎಫ್ ಸೀಮಾ, ನಾಗರಹೊಳೆ ಡಿಸಿಎಫ್ ಹರ್ಷ ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್, ಡಾ.ರಮೇಶ್ ಹಾಗೂ ಇನ್ನಿತರರು ರಕ್ಷಣಾ ಕೋಟೆಯೊಳಗೆ ಸಾಗಿದರು. ಆ ನಂತರ ಕಮಾಂಡೋ ಮತ್ತು ಎನ್‌ಸಿಸಿ ಕೆಡೆಟ್‌ಗಳು ಹಗ್ಗ ಹಿಡಿದು ಮತ್ತೆರಡು ಸುತ್ತಿನ ಭದ್ರತೆ ಕಲ್ಪಿಸಿದರು.



ಜನರ ನಿಯಂತ್ರಿಸುವಲ್ಲಿ ಹೈರಾಣಾದ ಪೊಲೀಸರು



ಮೈಸೂರು, ಅ.24(ಎಂಕೆ)– ಜಂಬೂ ಸವಾರಿ ಹಿನ್ನೆಲೆಯಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿ ಡಬಲ್ ಬ್ಯಾರಿಕೇಡ್ ಅಳವಡಿಸಿದ್ದರೂ ನುಗ್ಗಿಬಂದ ಜನರಿಂದಾಗಿ ಕೆಲಕಾಲ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು.

ಈ ಹಿಂದೆಲ್ಲಾ ಸಯ್ಯಾಜಿರಾವ್ ರಸ್ತೆಯಲ್ಲಿ ಮರದ ಪೋಲ್‌ಗಳಿಂದ ತಾತ್ಕಾಲಿತ ಬ್ಯಾರಿಕೇಡ್‌ಗಳನ್ನು ನಿರ್ಮಿಸಿ, ಅಷ್ಟರಲ್ಲಿಯೇ ಜನರು ರಸ್ತೆಗಿಳಿಯದಂತೆ ನೋಡಿಕೊಳ್ಳಲಾಗುತ್ತಿತ್ತು. ಆದರೆ ಈ ಬಾರೀ ಮರದ ಪೋಲ್‌ಗಳಿಂದ ನಿರ್ಮಿಸಿದ್ದ ತಡೆಯ ಜೊತೆಗೆ ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದರೂ ಜನರ ನೂಕಾಟ ತಡೆಯುವಲ್ಲಿ ಪೊಲೀಸರು ವಿಫಲರಾದಂತಿತ್ತು.

ಸಯ್ಯಾಜಿರಾವ್ ರಸ್ತೆಯಲ್ಲಿನ ಆಯುರ್ವೇದಿಕ್ ವೃತ್ತ ಬಂಬೂಬಜಾರ್ ಸಿಗ್ನಲ್, ಹೈವೆ ವೃತ್ತದ ಬಳಿ ಜನ ಜಂಗುಳಿಯ ನಡುವೆ ಅಂಬಾರಿ ಸಾಗುವಂತಾಯಿತು. ಅದರಲ್ಲೂ ಹೈವೆ ಸರ್ಕಲ್‌ನಲ್ಲಿ ಬ್ಯಾರಿಕೇಡ್ ಹೊರಗಿದ್ದ ಸಾವಿರಾರು ಮಂದಿ ಅಂಬಾರಿ ಬರುವ ಸಮಯದಲ್ಲಿ ಏಕಾಏಕಿ ರಸ್ತೆಗಿಳಿದರು. ಪೊಲೀಸರು ಎಷ್ಟೇ ಸಾಹಸ ಮಾಡಿದರೂ ಜನರನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಒಮ್ಮೆಗೆ ಅಂಬಾರಿ ಸುತ್ತಲೂ ಜನರು ಮುತ್ತಿಕೊಂಡಿದ್ದರಿಂದ ನೂಕುನುಗ್ಗಲೂ ಹೆಚ್ಚಾಗಿ ಕೆಲಕಾಲ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು. ಅಂಬಾರಿ ಸುತ್ತಲೂ ಹಗ್ಗದ ಸರಪಳಿ ಹಾಕಿದ್ದ ಎನ್‌ಸಿಸಿ ಕೆಡೆಟ್ ಹಾಗೂ ಪೊಲೀಸರ ಭಾರೀ ಸಾಹಸದ ನಡುವೆ ಅಂಬಾರಿ ಆನೆ ಮುಂದೆ ಸಾಗುವಂತಾಯಿತು.

ಅವಕಾಶ ನೀಡದ ಪೊಲೀಸರು: ಸಯ್ಯಾಜಿರಾವ್ ರಸ್ತೆಯಲ್ಲಿಯ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಸಮೀಪದಿಂದ ಪಂಜಿನ ಕವಾಯತು ಮೈದಾನದವರೆಗಿನ ಸುಮಾರು 150 ಮೀಟರ್ ದೂರದವರೆಗೆ ನಾಕಾಬಂದಿ ಯಾಕಿದ್ದ ಪೊಲೀಸರು, ಒಬ್ಬರೂ ಸುಳಿಯದಂತೆ ಕಟ್ಟೆಚ್ಚರ ವಹಿಸಿದ್ದರು. ಮೂರು ಹಂತದಲ್ಲಿ ಅಂಬಾರಿ ಹಿಂದೆ ಬರುವ ಜನರನ್ನು ತಡೆದ ಪೊಲೀಸರು, ಕವಾಯತು ಮೈದಾನದ ಮುಖ್ಯ ದ್ವಾರದಲ್ಲಾಗುತ್ತಿದ್ದ ಜನಜಂಗುಳಿಯನ್ನು ನಿಯಂತ್ರಿಸಿ, ಗೌರವ ವಂದನೆಯೊಂದಿಗೆ ಜಂಬೂಸವಾರಿ ಮೆರವಣಿಗೆಯನ್ನು ಬರಮಾಡಿಕೊಂಡರು.

ಇಂಗ್ಲಿಷ್‌ಮಯ, ಕನ್ನಡ ಮಾಯ

ಮೈಸೂರು, ಅ.24(ಬಿಎಲ್‌ಯು)– ರಾಜ್ಯ ಸರ್ಕಾರ ಕನ್ನಡದ ಪ್ರೇಮ ಮೆರೆಯುತ್ತದೆ. ಆದರೆ ಸರ್ಕಾರವೇ ಆಯೋಜಿಸುವ ಕಾರ್ಯಕ್ರಮಗಳಲ್ಲಿ ಕನ್ನಡ ಮಾಯವಾಗಿ ಎಲ್ಲವೂ ಇಂಗಿಷ್‌ಮಯವಾಗುತ್ತದೆ. ಮೈಸೂರಿನ ಬನ್ನಿ ಮಂಟಪದಲ್ಲಿ ನಡೆದ ಏರ್ ಶೋನಲ್ಲಿನ ವೀಕ್ಷಕ ವಿವರಣೆ ಇದಕ್ಕೆ ಸ್ಪಷ್ಟ ನಿದರ್ಶನವಾಗಿತ್ತು.

ಏರ್ ಶೋ ವೀಕ್ಷಣೆಗೆ ಸಾವಿರಾರು ಜನರು ಸೇರಿದ್ದರು. ಇದರಲ್ಲಿ ಶೇಕಡ 95 ರಷ್ಟು ಜನರು ಸ್ಥಳಿಯರೇ ಆಗಿದ್ದರು. ಈ ಹಿಂದೆ ನಡೆಯುತ್ತಿದ್ದ ಏರ್ ಶೋನಲ್ಲಿ ವಾಯು ಪಡೆಯ ಸಾಹಸಗಳ ಬಗ್ಗೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ ವಿವರಣೆ ನೀಡಲಾಗುತ್ತಿತ್ತು. ಇದರಿಂದ ಇಂಗ್ಲಿಷ್ ಗೊತ್ತಿಲ್ಲದವರಿಗೆ ಅನುಕೂಲವಾಗುತ್ತಿತ್ತು.

ಆದರೆ ಸೋಮವಾರ ನಡೆದ ಏರ್ ಶೋನಲ್ಲಿ ಇಂಗ್ಲಿಷ್‌ನಲ್ಲಿ ಮಾತ್ರ ವೀಕ್ಷಣೆ ವಿವರಣೆ ನೀಡಲಾಯಿತು. ಇದರಿಂದ ವಾಯುಪಡೆಯ ಸಾಹಸ ಕಾರ್ಯ, ಯುದ್ಧ ವಿಮಾನಗಳು, ಅದರ ವಿಶೇಷತೆಗಳು ಸೇರಿದಂತೆ ಬಹಳಷ್ಟು ವಿಚಾರಗಳು ಇಂಗ್ಲಿಷ್ ಗೊತ್ತಿಲ್ಲದವರಿಗೆ ತಿಳಿಯಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೊಸೆ ಸ್ಮಿತಾ ರಾಕೇಶ್, ಮೊಮ್ಮಗಳ ಜೊತೆ ಏರ್ ಶೋ ವೀಕ್ಷಿಸಿದರು.

ತರುವಾಯ ವಾಯುಪಡೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಭೇಟಿ ಮಾಡಿ ಏರ್ ಶೋ ನಡೆಸಿಕೊಟ್ಟಿದ್ದಕ್ಕೆ ಧನ್ಯವಾದ ತಿಳಿಸಿದರು.